# ಅಪರಂಜಿ

ತಿಳಿನಗೆಯ ಕಾರಂಜಿ

ಮೇ - 2016




ಅಸಾಧ್ಯ ಸೆಖೆ. ಕೆಲಸ ಮಾಡೋದಿಕ್ಕೇ ಆಗ್ತಿಲ್ಲ.
ನಮಗೂ ಶಾಲಾ ಕಾಲೇಜುಗಳಂತೆ
ಬೇಸಿಗೆ ರಜೆ ಇರಬೇಕಿತ್ತು ಅಂತ ಅನ್ನಿಸೊಲ್ವೆ..?



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 33
ಸಂಚಿಕೆ - 8
ಮೇ - 2016

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಎಂ. ಶಿವಕುಮಾರ್

ಟ್ರಸ್ಟಿಗಳು
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಬೇಲೂರು ರಾಮಮೂರ್ತಿ** | 3 |
| ಹುಟ್ಟೂರಿನಲ್ಲೇ...... | **ಶರತ್ ಕಲ್ಕೋಡ್** | 5 |
| ನಮ್ಮ ನಿವೃತ್ತಿ ..... | **ನಂದಿನಿ ಕಾಪಡಿ** | 9 |
| ತುಂತುರು | **ದಂನಾಳ** | 12 |
| ಕಾಮಣ್ಣ ಮಕ್ಕಳೋ... | **ಗುಂಡುರಾವ್ ದೇಸಾಯಿ** | 13 |
| ಅರ್ಧ ಹೊಟ್ಟೆಯ ಊಟ | **ಬೇಲೂರು ರಾಮಮೂರ್ತಿ** | 22 |
| ಪಿನ್ ಡ್ರಾಪ್ ಸೈಲೆನ್ಸ್ | **ಕೆ.ಎಲ್. ರಾಮದಾಸ್** | 25 |
| ಯಕ್ಷಪ್ರಶ್ನೆ | **ಎಚ್.ಆರ್. ಹನುಮಂತ ರಾವ್** | 27 |
| ಸಮಸ್ಯೆಯ ಸುಳಿಯಲ್ಲಿ | **ವೈ.ಎಸ್. ಸುಬ್ರಮಣ್ಯ** | 33 |
| 45 ನಿಮಿಷ ಆಯ್ತಾ ? | **ನುಗ್ಗೆಹಳ್ಳಿ ಪಂಕಜ** | 35 |
| ಹೀರೋ ಮತ್ತು ಹೊಂಡ | **ಎಂ.ಕೆ. ಭಾಸ್ಕರ ರಾವ್** | 37 |

**ಮುಖಪುಟ ವ್ಯಂಗ್ಯಚಿತ್ರ - ನಾಗನಾಥ್**

**ಒಳಪುಟಗಳ ವ್ಯಂಗ್ಯಚಿತ್ರ - ಶೃಂಗೇರಿ ರಘುಪತಿ**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಐ.ಪಿ.ಎಲ್. ವಿರೋಧಿಸಿ ಪಿ.ಐ.ಎಲ್.!?!

★★★

ಬಿ.ಬಿ.ಎಂ.ಪಿ. ಸಭೆಯಲ್ಲಿ ನೂಕಾಟ-ತಳ್ಳಾಟ - ಸುದ್ದಿ

● *'ಆಧುನಿಕ' ಸೌಜನ್ಯದ ರೂವಾರಿಗಳು !!*

★★★

ನಷ್ಟದ ಆತಂಕದಲ್ಲಿ ಕೆ.ಎಂ.ಎಫ್. - ಶ್ರೀ ರೇವಣ್ಣ

● *ಹಾಲಾ-ಹಲ ಎಂದರೆ ಇದೇ ಇರಬೇಕು !!*

★★★

'ಪನಾಮ'ದಿಂದ ಸರ್ಕಾರಕ್ಕೆ ತೀವ್ರ ಪಂಗ-ನಾಮ ಅಂತ ಅಪರಂಜಿ ನಕ್ಕಳಂತೆ!!

★★★

ಪಠಾಣ್‌ಕೋಟ್ ಧಾಳಿ ಭಾರತದ ಸೃಷ್ಟಿ - ಸುದ್ದಿ

● *ಜಟ್ಟಿ ಬಿದ್ದರೂ..... !!*

★★★

ಮೈತ್ರಿಗೆ ಕುತ್ತು; ಕಾಂಗ್ರೆಸ್‌ಗೆ ಜೆ.ಡಿ.ಎಸ್. ಎಚ್ಚರಿಕೆ - ಪತ್ರಿಕೆ

● *ಮೈತ್ರಿ ಎಂಬ ಪದಕ್ಕೆ ಅರ್ಥ ಹುಡುಕಬೇಕು ಈಗ !!*

★★★

''ಪಿ.ಯು. ಪ್ರಶ್ನೆ ಪತ್ರಿಕೆ ಸೋರಿಕೆ'' ಅಂದರೆ ನಡುಕ ಬರುತ್ತೆ ಅಂತ ಅಪರಂಜಿ ದೂರಿದಳಂತೆ!!

★★★

ಎಲ್ಲರೂ ಜೊತೆಗಿರಲಿ; ಸ್ವಾರ್ಥಿಗಳು ದೂರವಿರಲಿ - ಹೇಳಿಕೆ

● *'ವಿರೋಧಾಭಾಸ' ಅಂದರೆ ಇದೇ !!*

★★★

# ನಮ್ಮ ನಿಮ್ಮಲ್ಲಿ

**ನಾ**ವು ಅಂದುಕೊಂಡ ಹಾಗೆ ಅಪರಂಜಿ 33ರ ಹಬ್ಬದ ಸಮಾರಂಭ 5-4-2016ರಂದು ಅಚ್ಚುಕಟ್ಟಾಗಿ ನಡೆಯಿತು. ವಾರದ ಮಧ್ಯದ ದಿನವಾದರೂ ಅಪರಂಜಿ ಅಭಿಮಾನಿಗಳು ತುಂಬಿದ್ದರು. ನಮ್ಮ ಕರೆಗೆ ಪ್ರೀತಿಯಿಂದ ಬಂದು ಸಮಾರಂಭವನ್ನು ಉದ್ಘಾಟನೆ ಮಾಡಿದ ಡಾ॥ ನರಹಳ್ಳಿ ಬಾಲಸುಬ್ರಮಣ್ಯ ಅವರು ವಿಶೇಷ ಸಂಚಿಕೆ ಬಿಡುಗಡೆ ಮಾಡಿ ಮಾತಾಡಿ ಹಿಂದಿನ ಸಾಹಿತಿಗಳು ಹಾಸ್ಯ ಮನೋಭಾವ ಹೊಂದಿದ್ದರಿಂದ ಉನ್ನತ ಮಟ್ಟಕ್ಕೆ



ಏರಿದರು. ಆಧುನಿಕ ಸಾಹಿತ್ಯ ಮತ್ತು ಸಾಹಿತಿಗಳು ಹಾಸ್ಯಕ್ಕೆ ನೀಡುತ್ತಿರುವ ಗಮನ ಕಡಿಮೆ. ಹಾಸ್ಯ ಇಂದು ಮಾರಾಟದ ಸರಕಾಗಿ ಬದಲಾಗಿದೆ. ಹಾಸ್ಯ ಸಾಹಿತ್ಯವನ್ನು ಕುರಿತ ಗಂಭೀರ ಚರ್ಚೆ ನಡೆಯುವುದು ಅವಶ್ಯಕವಿದೆ ಎಂದರು. ಮುಖ್ಯ ಅತಿಥಿಯಾದ ಶ್ರೀ ಶ್ರೀನಿವಾಸ ವೈದ್ಯರು ತಮ್ಮ ಎಂದಿನ ಮಧುರ ಧಾಟಿಯಲ್ಲಿ ಹಾಸ್ಯದ ನಾನಾ ಮಗ್ಗುಲುಗಳನ್ನು ತಿರುವಿ ಹಾಕಿದರು. ಗಂಡ ಹೆಂಡತಿ ಹಾಸ್ಯವೇ ಇಂದು ಪ್ರಧಾನವಾಗಿದೆ. 30, 40 ವರ್ಷಗಳ ಹಿಂದಿದ್ದ ಹಾಸ್ಯವೇ ಇಂದೂ ಪ್ರಚಲಿತವಾಗುತ್ತಿದೆ. ಹಾಸ್ಯವೂ ಆಧುನಿಕವಾಗಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಭಾರತೀಯ ವಿದ್ಯಾಭವನದ ಅಧ್ಯಕ್ಷ ಶ್ರೀ ಎನ್. ರಾಮಾನುಜ ಅವರು ಕನ್ನಡ ಸಾಹಿತ್ಯ, ಅದರಲ್ಲೂ ಹಾಸ್ಯ ಸಾಹಿತ್ಯದೊಂದಿಗೆ ಅವರ ನಂಟನ್ನು ಕೆದಕಿದರು. ಕೊಳ್ಳೇಗಾಲದ ರಾಮಾನುಜ ಹೆಸರಿನಲ್ಲಿ ಅವರು ಕೊರವಂಜಿಗೆ ಬರೆಯುತ್ತಿದ್ದುದನ್ನು ನೆನಪಿಸಿಕೊಂಡರು. ಕೊರವಂಜಿ ಅಪರಂಜಿ ಟ್ರಸ್ಟಿನೊಂದಿಗೆ ಭಾರತೀಯ ವಿದ್ಯಾಭವನದ ನಂಟು ಸುಮಾರು 20 ವರ್ಷಗಳಿಗೂ ಹಳೆಯದು ಎಂದರು. ಸಮಾರಂಭದಲ್ಲಿ ಅಪರಂಜಿಯ ನಂಟಿನ ಬಗೆಗೆ ಶ್ರೀಮತಿ ಸಹನಾ ಪ್ರಸಾದ್ ಮತ್ತು ಶ್ರೀಮತಿ ಶ್ಯಾಮಲಾ ರವಿಶಂಕರ್ ತಮ್ಮ ಅನಿಸಿಕೆಗಳನ್ನು ಹೇಳಿದರು.





ಶ್ರೀ ವೈ.ವಿ. ಗುಂಡೂರಾವ್ ಅವರಿಂದ ಅಪರಂಜಿ ಓದುಗರೊಂದಿಗೆ ಲಘು ಸಂವಾದ ಆಸಕ್ತಿ ಕೆರಳಿಸಿತು. ಕಲಾಗಂಗೋತ್ರಿ ತಂಡದ ಕಲಾವಿದರು 'ಅವರನ್ ಬಿಟ್ಟು ಇವರನ್ ಬಿಟ್ಟು ಅವರ್‍ಯಾರು' ಹಾಸ್ಯ ನಾಟಕ ಅಭಿನಯಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಶರಣಪ್ಪ ಅವರ ಪದ್ಯಗಳು ಕೃತಿಯನ್ನೂ ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಕೊರವಂಜಿ ಅಪರಂಜಿ ಟ್ರಸ್ಟ್‌ನೊಂದಿಗೆ ಅನೇಕ ವರ್ಷಗಳಿಂದ ಅನುಬಂಧ ಹೊಂದಿರುವ ಮತ್ತು ಈ ವರ್ಷ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಅತ್ಯುತ್ತಮ ಪ್ರಕಾಶನ ಸಂಸ್ಥೆ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಶ್ರೀ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳನ್ನು ಅಭಿನಂದಿಸಲಾಯಿತು.

**ಬೇಲೂರು ರಾಮಮೂರ್ತಿ**

ಉಪ ಸಂಪಾದಕರು

# ಹುಟ್ಟೂರಿನಲ್ಲೇ ಪರಕೀಯನಾಗುವ ಬಗೆ!

**- ಶರತ್ ಕಲ್ಕೋಡ್**

**ಹೊ**ಟ್ಟೆಪಾಡಿಗಾಗಿ ಬದುಕಿನ ಬಹುಭಾಗ ಬೇರೆಬೇರೆ ಪ್ರದೇಶಗಳಲ್ಲಿ ಕಳೆದ ನನಗೆ ಮಲೆನಾಡಿನ ಹುಟ್ಟೂರಿಗೆ ಹೋದಾಗ ಪ್ರತಿಸಲ ಆಗುವ ಅನುಭವ ವಿಚಿತ್ರ ಮಾತ್ರವಲ್ಲ; ಸಂಕಷ್ಟ-ಸವಾಲನ್ನೊಡ್ಡುವುದೂ ಉಂಟು. ಸರೀಕರನ್ನು ಬಿಟ್ಟರೆ, ಊರಿನಲ್ಲಿ ಹೆಚ್ಚಿನ ಕಿರಿಯರ ಪಾಲಿಗೆ ನಾನು ಅಪರಿಚಿತ.

**ಅಪರೂಪಕ್ಕೆ ಬಂದು ಇಂತಹ ಅನಾಹುತ ಮಾಡಿ ಸ್ಥಳೀಯರನ್ನ ಹೀಗೆ ಸಂಕಷ್ಟಕ್ಕೆ ದೂಡುವುದು ಸರಿಯೆ?**

ಕಳೆದ ಸಾರಿ ಊರಿಗೆ ಹೋದವನು, ಬೆಳಿಗ್ಗೆ ವಾಕಿಂಗ್ ಹೊರಟಿದ್ದೆ. ದೂರದಿಂದಲೇ ಹಣೆ ಮೇಲೆ ಕೈಯಿಟ್ಟು ನನ್ನನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ವ್ಯಕ್ತಿ, ಎದುರುಬದುರಾದಾಗ ದಪ್ಪಗಾಜಿನ ಕನ್ನಡಕದೊಳಗಿಂದ ದಿಟ್ಟಿಸುತ್ತಾ ಪ್ರಶ್ನಿಸಿದರು:

''ಯಾವುರಾತು?''

''ಬೆಂಗಳೂರು'' ಬೇಕಂತಲೇ ಬುರಡೆ ಬಿಟ್ಟೆ.

''ಇಲ್ಲಿ ಯಾರ ಮನೆಗೆ ಬಂದದ್ದೋ?''

''ಮೂರ್ತಯ್ಯನ ಮನೆಗೆ'' ಮತ್ತೊಂದು ಸುಳ್ಳು ಪೋಣಿಸಿದೆ.

''ನೆಂಟಸ್ತನ ಮಾಡಕ್ಕೆ ಬಂದದ್ದಾ?''

ಏನು ಉತ್ತರಿಸಬೇಕೆಂದು ತಿಳಿಯದೇ ಸುಮ್ಮನಿದ್ದೆ.

''ಹೆಣ್ಣು ಕೇಳಕ್ಕೋ? ಗಂಡು ನೋಡಕ್ಕೋ?''

''ಹೆಣ್ಣು ನೋಡಕ್ಕೆ'' ತಮಾಷೆಗಾಗಿ ನುಡಿದೆ.

''ನಂಟಸ್ತನಾ ಮಾಡಬೌದು. ಒಳ್ಳೇ ಮನೆತನ. ಕೊಟ್ಟುತೆಗೆದುಕೊಳ್ಳುವುದರಲ್ಲೂ ಚರೆಪರೆಯಿಲ್ಲ.''

''ಹಂಗಾರ್ರೆ ಮುಂದುವರೀಬಹುದೂ ಅನ್ನಿ.''

''ಖಂಡಿತಾ ಕಣ್ಣು ಮುಚ್ಚಿಕೊಂಡು, ಬೆಂಗಳೂರಲ್ಲಿ ಒಕ್ಕಲಿಗರ ಗಂಡು ಸಿಕ್ತಾರೇನ್ರೀ?''

''ಅದಕ್ಕೇನು ಬರ, ಯಾರಿಗೆ?''

''ನನ್ನ ಮಗೀಗೆ. ಬಿ.ಕಾಂ. ಕಲ್ತದೆ. ಹಳ್ಳಿ ಬದೀ ಗಂಡು ಬೇಡ ಅಂತ ಒಂದೇ ಸಮ ವರಾತ ಹಿಡದದೆ. ಅದರ ಹಠಾನೂ ಒಂದು ಲೆಕ್ಕದಲ್ಲಿ ಸರೀ ಅನ್ನಿ. ಹಳ್ಳೀ ಅಂದ್ರೆ ಹಟ್ಟೀ, ಮನೆ ಕೆಲ್ಸ, ಕಸ-ಮುಸುರೆ, ಸಗಣಿ, ಬಡ್ಡು ಬಳಿಯುತ್ತಾ ಜೀವಮಾನವಿಡೀ ಗೇಯೋದರಲ್ಲೇ ಕಳೆಯುತ್ತೆ. ಪೇಟೆ-ಪಟ್ಟಣಾಂತಂದ್ರೆ ಹಂಗಲ್ಲಾ, ಹೋಟೆಲ್, ಸಿನಿಮಾ ಅಂತ ಆರಾಮಾಗಿ ಇರಬೌದು ಅಲ್ವರಾ? ನಿಮ್ಮ ಪರಿಚಯದವರಲ್ಲಿ ಯಾವುದಾದ್ರೂ ಒಳ್ಳೇ ಗಂಡು ಇದ್ರೆ, ಗೊತ್ತುಮಾಡಿಕೊಟ್ಟು ಪುಣ್ಯ ಕಟ್ಟಿಕ್ಕೊಳ್ರೋ.''

''ಪ್ರಯತ್ನಿಸ್ತೀನಿ, ನೋಡೋಣ.''

''ಸಂಜೇನೋ ನಾಳೇನೋ ಮಗೀನಾ ಜಾತಕ, ಫೋಟೋ ಮೂರ್ತಯ್ಯನ ಮನೆಗೆ ತಂದುಕೊಡ್ತೀನಿ.''

''ಆಯ್ತು'' ಎಂದೆ.

ಕೊಟ್ಟ ಭಾಷೆಯಂತೆ ಬೆಂಗಳೂರಿಗೆ ಬಂದ ಮೇಲೆ ಪ್ರಾಮಾಣಿಕವಾಗಿ ಒಕ್ಕಲಿಗರ ವರಾನ್ವೇಷಣೆಯಲ್ಲಿದ್ದೇನೆ. ನಿಮ್ಮ ಹುಂಡೀಲಿ ಯಾವುದಾದರೂ ಇದ್ರೆ ಹೇಳೀ ಪ್ಲೀಸ್!

★★★

ಮೇಗರವಳ್ಳಿ ಹೈಸ್ಕೂಲ್ ಓದುತ್ತಿದ್ದಾಗ ಊರಿನಲ್ಲಿ ಕಟ್ಟಿಂಗ್ ಮಾಡಿಸಿದ್ದು ಬಿಟ್ರೆ, ಆಮೇಲೆ ಊರಿನಲ್ಲಿ ಮಾಡಿಸಿಯೇ ಇರಲಿಲ್ಲ. ಮೊನ್ನೆ ಊರಿನಲ್ಲಿದ್ದಾಗ ಕಟ್ಟಿಂಗ್ ಮಾಡಿಸುವ ದರ್ದು ಎದುರಾಯ್ತು.

''ಗುಡ್ಡೇಕೇರಿಯಲ್ಲಿ ಸಲೂನ್ ಇಲ್ವಾ?'' ವಿಚಾರಿಸಿದೆ.

''ಇದೆ. ಆದ್ರೆ ಅವನ ಹತ್ತಿರ ಕಟ್ಟಿಂಗ್ ಮಾಡ್ಸೋದೇ ದೊಡ್ಡ ಸಾಹಸ'' ಎಂದ ವಿಷ್ಣು.

''ಯಾಕೆ?''

''ಅಪಾಯಂಟ್‌ಮೆಂಟ್ ತೆಗೆದುಕೊಳ್ಳದೇ ಅವ ಯಾರಿಗೂ ಕಟ್ಟಿಂಗ್ ಮಾಡೋದಿಲ್ಲ. ಅಲ್ದೇ ಕಾಸ್ಟ್ಲೀ ಬೇರೇ.''

''ಎಷ್ಟು ಚಾರ್ಜು?

''ಕಟ್ಟಿಂಗಿಗೆ ನಲವತ್ತು. ಶೇವ್ ಮಾಡಿದ್ರೆ ಅರವತ್ತು.''

ಬೆಂಗಳೂರು ರೇಟಿಗೆ ಹೋಲಿಸಿದಾಗ ಬಹಳ ಚೀಪ್ ಎನಿಸುವುದು ಸಹಜ ಅಲ್ಲವೆ? ನೋಡೇಬಿಡೋಣವೆಂದು ಸಂಜೆ ವಾಕಿಂಗ್ ಗುಡ್ಡೇಕೇರಿ ಕಡೆಗೆ ಹೋದೆ. ಆಚೆಈಚೆ ಹರಕುಮುರುಕು ಕಟ್ಟಡದ ನಡುವೆ ತಲೆಯೆತ್ತಿ ಮೆರೆಯುತ್ತಿದ್ದ ''ನ್ಯೂ ಮಾರ್ಡ್‌ನ್ ಬಾಂಬೇ ಮಾರ್ಡ್‌ನ್ ಹೇರ್ ಕಟ್ಟಿಂಗ್ ಸಲೂನ್''ಗೆ ನುಗ್ಗಿ, ಪ್ರೊಪ್ರೈಟರ್ ಸಾಗರ್ ಅವರನ್ನು ಕಂಡು ಮಾರನೆ ದಿನ ಬೆಳಗ್ಗೆ ಹತ್ತೂವರೆಗೆ ಅಪಾಯಂಟ್‌ಮೆಂಟ್ ಫಿಕ್ಸ್ ಮಾಡಿಕೊಂಡೆ.

ಮರುದಿನ ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಿ ಪ್ರೊ. ಸಾಗರ್ ಅವರಿಗೆ ತಲೆ ಒಪ್ಪಿಸಿದೆ. ಸಣ್ಣಕೊಠಡಿಯಾದರೂ ಟೀವಿ, ರೇಡಿಯೋ ಇಲ್ಲವೆನ್ನುವುದು ಬಿಟ್ಟರೆ ಸಲೂನ್ ತುಂಬಾ ಅಚ್ಚುಕಟ್ಟಾಗಿತ್ತು. ಕನ್ನಡಿ ಹಾಗೂ ಕಟ್ಟಿಂಗ್ ಅವಶ್ಯ ಸಾಮಗ್ರಿಗಳನ್ನು ಒಪ್ಪಓರಣವಾಗಿ ಜೋಡಿಸಲಾಗಿತ್ತು. ಕನ್ನಡಿ ಪಕ್ಕದಲ್ಲೇ ಇದ್ದ ರೇಟ್‌ಲಿಸ್ಟ್ ಕಂಡು ಬೆರಗಾದೆ. ಹೋಲಿಸಿ ನೋಡಿದಾಗ ಬೆಂಗಳೂರಿನಲ್ಲಿ ಎಲ್ಲಾ ರೇಟು ಒಂದೂವರೆ ಪಟ್ಟಿಗೂ ಅಧಿಕ! ನೆಲಮುಗಿಲ ಅಂತರ!! ಎಲ್ಲಿಯ ಗುಡ್ಡೇಕೇರಿ, ಎಲ್ಲಿಯ ಬೆಂಗಳೂರು!?

ಪ್ರೊ. ಸಾಗರ್ ಅಷ್ಟೆ ಬಹಳ ನೀಟ್. ಮಿತಭಾಷಿ. ಅಚ್ಚುಕಟ್ಟಾಗಿ ಕಟ್ಟಿಂಗ್ ಮಾಡುತ್ತಿದ್ದ. ಬಳಸುತ್ತಿದ್ದ ಹಣಿಗೆ, ಕತ್ತರಿ, ಕ್ರೀಂ ಎಲ್ಲವೂ ಅತ್ಯಾಧುನಿಕ. ಅಷ್ಟೇ ಕ್ಲೀನ್. ತಲೆ ಅತ್ತಿತ್ತ, ಮೇಲೆ ಕೆಳಗೆ ವಾರೆಪಾರೆ ಮಾಡುತ್ತಿರುವಾಗ ಅಪರಿಚಿತರೊಬ್ಬರ ಪ್ರವೇಶವಾಯಿತು.

''ಓ ಬನ್ನಿ... ಬನ್ನಿ... ಧರ್ಮಯ್ಯ ಹೆಗ್ಡೇರೇ, ಏನ್ ಅರ್ಧಗಂಟೆಗೂ ಮುಂಚೆಯೇ ಬಂದ್ರೀಯಲ್ಲ...'' ಸ್ವಾಗತಿಸಿದರು ಪ್ರೊ. ಸಾಗರ್. ಬಗ್ಗಿಸಿದ ತಲೆಯಲ್ಲೇ ವಾರೇಕತ್ತಿನಿಂದಲೇ ಪ್ರವೇಶಿಸಿದ್ದ ಆಗುಂತಕರನ್ನು ನೋಡಿದೆ. ತಲೆಗೆ ಹಳೇ ಟೊಪ್ಪಿ. ನೆರೆತ ಕೂದಲ ಗಡ್ಡ-ಮೀಸೆ. ಬಡ್ಡುಬಡ್ಡಾದ ಅಂಗಿ-ಚೆಡ್ಡಿ. ಕಾಲಲ್ಲಿ ಬಾರ್ ಕಿತ್ತ ಚಪ್ಪಲಿ. ನಡೆಯಲು ಅನುಕೂಲವಾಗುವಂತೆ ಅದಕ್ಕೆ ಬಿಗಿಯಾಗಿ ಸುತ್ತಿದ ಟೆಲಿಫೋನ್ ವೈಯರ್, ಚಳದುರಿ, ಪಟ್ಟೆದಾರ ಸಾಲದೆಂಬಂತೆ ಪ್ಲಾಸ್ಟಿಕ್ ದಾರ. ಬಹುಶಃ ಆ ವ್ಯಕ್ತಿ ಹಟ್ಟಿಗೊಬ್ಬರ ತೆಗೆದು ಬಂದಿರಬೇಕು. ಹಾಗಾಗಿ ಘಮಘಮ!

''ಕಾಲುಗಂಟೆ ಕುಳಿತುಕೊಳ್ಳಿ ಹೆಗ್ಡೇರೆ... ಇವರದ್ದಾದ ಕೂಡಲೇ ನಿಮ್ದೇ'' ಎಂದರು ಪ್ರೊ. ಸಾಗರ್. ಅನಂತರ ಅವರಿಬ್ಬರ ನಡುವೆ ನಡೆದದ್ದು ಹಳ್ಳಿಯ ಸುತ್ತಮುತ್ತಲಿನ ಜನರ, ಬೇಸಾಯಗಳ ಏಳುಬೀಳುಗಳ ವಿಶ್ಲೇಷಣೆ. ಅನೂಹ್ಯ ಜಗತ್ತಿಗೆ ಸಂಬಂಧಿಸಿದ ಆ ವ್ಯವಹಾರದ ಮಾತುಕತೆಗೆ ನಾನೊಬ್ಬ ಮೂಕಪ್ರೇಕ್ಷಕ!

ಕಟ್ಟಿಂಗ್ ಮುಗಿದ ಮೇಲೆ ನಾನು ಬೆಂಗಳೂರು ರೇಟ್ ಕೊಡಲು ಸಿದ್ಧನಾಗಿ ನೂರರ ನೋಟನ್ನು ಪ್ರೊ. ಸಾಗರ್ ಮುಂದೆ ಚಾಚಿದೆ. ಆದರೆ ಅಷ್ಟು ತೆಗೆದುಕೊಳ್ಳಲು ಅವರು ರೆಡಿಯಿರಲಿಲ್ಲ. ನಮ್ಮಿಬ್ಬರ ನಡುವೆ ರೇಟಿನ ವಿಷಯದಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಬೇಂಚ್ ಮೇಲೆ ಕುಳಿತಿದ್ದ ಹೆಗ್ಡೇರು, ಗಾಂಭೀರ್ಯದಿಂದ ವೀಕ್ಷಿಸುತ್ತಿದ್ದರು. ಕೊನೆಗೆ ನಲವತ್ತು ತೆಗೆದುಕೊಂಡು ಅರವತ್ತು ರೂ. ಹಿಂತಿರುಗಿಸಿದ್ದ ಹತ್ತರ ಎರಡು ನೋಟುಗಳನ್ನು ನಾನು ಬಲವಂತವಾಗಿ ಪ್ರೊ. ಸಾಗರ್ ಅವರ ಅಂಗಿ ಜೇಬಿಗೆ ತುರುಕಿ ವಿದಾಯ ಹೇಳುವಾಗ, ಹೆಗ್ಡೇರು ಕಟ್ಟಿಂಗ್‌ಗೆ ಪೀಠಾರೋಹಣಗೈದಿದ್ದರು.

ಸಂಜೆ ಹೊತ್ತಿಗಾಗಲೇ ನಾನು ಊರ ತುಂಬ ದೊಡ್ಡ ಸುದ್ದಿಯಾಗಿ ಬಿಟ್ಟಿದ್ದೆ. ಸಲೂನ್‌ನಲ್ಲಿ ಬೆಳಗ್ಗೆ ನಡೆದ ಪ್ರಕರಣಕ್ಕೆ ಜೀವಂತ ಮೂಕಸಾಕ್ಷಿಯಾಗಿದ್ದ ಹೆಗ್ಡೇರು, ಅರವತ್ತು ನೀಡಿದ ಘಟನೆಗೆ ಇನ್ನಷ್ಟು ರೆಕ್ಕೆಪುಕ್ಕ ಸೇರಿಸಿ, ಬಣ್ಣ ಬಳಿದು ಊರಿನವರ ದೃಷ್ಟಿಯಲ್ಲಿ ನನ್ನನ್ನು ಖಳನಾಯಕನನ್ನಾಗಿ ಸೃಷ್ಟಿಸಿಬಿಟ್ಟಿದ್ದರು.

ಮುಂದೆ ನಾನು ಊರಲ್ಲಿ ಇದ್ದಷ್ಟು ಕೆಲದಿನಗಳ ಕಾಲ, ಎದುರು ಸಿಕ್ಕ ಪರಿಚಿತರೆಲ್ಲಾ ಉಭಯಕುಶಲೋಪರಿ ಬಳಿಕ ತಪ್ಪದೇ ಪ್ರಸ್ತಾಪಿಸುತ್ತಿದ್ದ ವಿಷಯವೆಂದರೆ, ಕಟ್ಟಿಂಗ್ ರೇಟ್ ಜಾಸ್ತಿ ನೀಡಿದ ಪ್ರಕರಣವನ್ನೇ!

''ಯಾಕೆ ಹೀಗೆ ಮಾಡಿದ್ರೀ ನೀವು?''

''ಬೆಂಗಳೂರಿನಲ್ಲಿ ಅಷ್ಟು ರೇಟ್ ಉಂಟು ಮಾರಾಯ್ರೇ. ಕೊನೆಗೂ ನಾನು ಇಲ್ಲಿ ಕೊಟ್ಟಿದ್ದು ಕಮ್ಮಿಯೇ.''

''ಗುಡ್ಡೇಕೇರಿ, ಬೆಂಗಳೂರು ಅಲ್ವಲ್ಲಾ! ಅದರಲ್ಲೂ ಸಾಗರ್ ಮೊದ್ಲೆ ಆಕಾಶಕ್ಕೆ ಏಣಿ ಹಾಕೋ ಆಸಾಮಿ. ಇನ್ನು ಹೊರಗಿನಿಂದ ಬಂದ ನಿಮ್ಮಂತವರು ಹೀಗೆ ಉಬ್ಬಿಸಿದರೆ ಕೇಳೋದೇ ಬೇಡ. ಮಂಗನಿಗೆ ಕಳ್ಳು ಕುಡಿಸಿದ ಹಾಗೆ ಆಗುತ್ತಷ್ಟೇ. ನೀವೇನೋ ಪೇಟೆ-ಪಟ್ಟಣದವರು, ತಿಂಗಳ ಕೊನೆಯಲ್ಲಿ ಲಕ್ಷಗಟ್ಟಲೆ ಎಣಿಸೋರು. ನೂರು-ಸಾವಿರಗಳ ಬಗ್ಗೆ ಕ್ಯಾರೇ ಇಲ್ಲದವರು. ಆದರೆ ಹಳ್ಳಿಲೀ ಬದುಕುವ ನಮ್ಮಂತ ಬಡಬಗ್ಗರ ಗತಿಯೇನು

ಹೇಳಿ! ಕಟ್ಟಿಂಗಿಗೆ ನಲವತ್ತು ಕೊಡೋದೇ ಪರಮಕಷ್ಟ!! ಇನ್ನು ಅರವತ್ತು-ನೂರು ಅಂತಾದ್ರೆ ಎಲ್ಲಿಂದ ತರೋದು. ಕಟ್ಟಿಂಗ್ ಮಾಡ್ಸದೇ, ಗಡ್ಡಮೀಸೆ ಬೋಳಿಸದೇ ''ಅಲಕ್ ನಿರಂಜನ್'' ಅಂತ ಸನ್ಯಾಸಿಗಳಾಗಿರೋಕ್ಕೆ ನಮ್ಮ ಕೈಯಲ್ಲಿ ಆಗುತ್ತಾ ಹೇಳಿ? ಮೊದಲಿನ ಹಾಗೇ ಅಡಿಕೆ ರೇಟ್ ಇದ್ದಿದ್ರೆ ನೋಡಬಹುದಿತ್ತು. ಆದ್ರೆ ಈಗ ಅದು ಬ್ಯಾರೆ ಪಾತಾಳ ಕಂಡುಕ್ಕೊಂಡು ಕೂತದೆ. ನಿಮ್ಮಂತವರು ಅಪರೂಪಕ್ಕೆ ಬಂದು ಇಂತಹ ಅನಾಹುತ ಮಾಡಿ, ನಮ್ಮಂತವರನ್ನ ಸಂಕಷ್ಟಕ್ಕೆ ದೂಡಿ ಹೋಗ್ತೀರಿ...! ಇಲ್ಲೇ ಕೊಳೀಬೇಕಾದ ನಾವು ಜಮೀನು-ಸಂಸಾರ ಮಾಡೋದಾದರೂ ಹೇಗೆ!?'' ಇತ್ಯಾದಿ.. ಇತ್ಯಾದಿ.. ಉತ್ತರಿಸಲಾಗದ ಬೇತಾಳನ ಪ್ರಶ್ನೆಗಳು!

ಒಲೆ ಹೊತ್ತಿ ಉರಿದೊಡೆ ನಿಲ್ಲಬಹುದಲ್ಲದೇ, ಊರು ಹೊತ್ತಿ ಉರಿದರೆ ನಿಲ್ಲಬಹುದೇ!? ಹುಟ್ಟೂರಿನಲ್ಲೇ ಪರಕೀಯನಾಗುವ ಬಗೆಯೂ ಹಾಗೇ ನೋಡಿ!! ❑

---

## ಮದುವೆಯೋ ಮನೆಹಾಳೋ

ಮನೆಯಿಂದ ಜೋರು ಜೋರು ಮಾತು ಕೇಳಬರ್ತಿತ್ತು. ನಿನಗೆ ಇನ್ನೆಂಥ ಗಂಡು ಸೃಷ್ಟಿ ಮಾಡಿದಾನೋ ಆ ಬ್ರಹ್ಮ, ನಾನು ಇನ್ನು ಎಷ್ಟೆಷ್ಟು ಊರು ಅಲೀಬೇಕೋ ಅಂತ ಯಜಮಾನರ ಮಾತು ಕೇಳ್ತಿತ್ತು. ಬಾಗಿಲಿನಲ್ಲಿ ನಿಂತವನೊಬ್ಬ ರಾಯರೇ ಅಂತ ಕೂಗಿದ. ರಾಯರು ಹೊರ ಬಂದಾಗ ನೀವು ಅಷ್ಟು ಬೇಜಾರು ಮಾಡ್ಕೊಬೇಡಿ ನಾನು ನಿಮ್ಮ ಮಗಳನ್ನು ಮದುವೆ ಮಾಡ್ಕೊತೀನಿ ನನಗೆ ಬ್ಯಾಂಕಲ್ಲಿ ಕೆಲಸ ಇದೆ, ಐವತ್ತು ಸಾವಿರ ರೂಪಾಯಿ ಸಂಬಳ, ತಂದೆ ತಾಯಿ ಯಾರೂ ಇಲ್ಲ, ನಾನು ಒಬ್ಬನೇ ಇರೋದು. ನಿಮ್ಮ ಮಗಳನ್ನು ಚೆನ್ನಾಗಿ ನೋಡ್ಕೊತೀನಿ ಅಂದಾಗ ರಾಯರಿಗೆ ಇದೇನು ಇವನು ಭಗವಂತನೇ ಕಳಿಸಿದ ವರ ಇರಬಹುದೇ ಅಂತ ಅಚ್ಚರಿ. ಒಳಗೆ ಬಾಪ್ಪ ಅಂದು ಹೆಂಡತೀನೂ ಮಗಳನ್ನು ಕರೆದು ಅವನನ್ನು ತೋರಿಸಿ ಬೇಗ ಕಾಫಿ ತಗೊಂಡು ಬಾ ಅಂದರು. ಹೆಂಡತಿ ತಂದ ಕಾಫಿನ ಹುಡುಗನ ಕೈಗೆ ಕೊಟ್ಟಾಗ ಅವನು ಇದೇನು ಇಷ್ಟೇ ಕಾಫಿ ಕೊಟ್ಟಿದೀರಿ ಇದರಲ್ಲಿ ಸ್ನಾನ ಹೇಗೆ ಮಾಡೋದು ಅಂತ ಕೇಳುತ್ತಿದ್ದಂತೆ ನಾಲ್ಕು ಜನ ಓಡಿ ಬಂದು ಓ ಇವನು ಇಲ್ಲಿದ್ದಾನೆ, ಹಿಡ್ಕೊಳಿ ಅಂದು ಎಳ್ಕೊಂಡು ಹೋದರು. ಯಜಮಾನರು ಯಾಕಪ್ಪಾ ಅಂತ ಕೇಳಿದರೆ ಸರ್, ಇವನು ಮದುವೆಯಾಗದೇ ಮಾನಸಿಕ ರೋಗಿ ಆಗಿದಾನೆ. ಇವತ್ತು ಬೆಳಗ್ಗೆ ನನ್ನ ಮದುವೆ ಇದೆ ಅಂತ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದ ಅಂದು ಅವನನ್ನು ಎಳ್ಕೊಂಡು ಹೋದರು. ಕಾಫಿಲಿ ಸ್ನಾನ ಮಾಡ್ತೀನಿ ಅಂದೋನು ಮಾನಸಿಕ ರೋಗಿನೇ ಅಂತ ಯಜಮಾನರು ಒಳಕ್ಕೆ ಹೋದರು.

– ಬಿಆರೆಮ್

# ''ನಮ್ಮ ನಿವೃತ್ತಿ - ಅವರ ವೃತ್ತಿ''

**- ನಂದಿನಿ ಕಾಪಡಿ**

**ಕೆ**ಲಸದಿಂದ ನಿವೃತ್ತಿ ಹೊಂದುವುದು ಹೊಸದೇನಲ್ಲ. ಹುಟ್ಟಿದ ವ್ಯಕ್ತಿಗೆ ಸಾವು ಬಂದಷ್ಟೇ ಸಹಜ. ಆದರೆ ನಿವೃತ್ತಿಯಾದ ನಂತರ ಹೊಸ ಜೀವನ ಹೇಗಾಗುವುದು ಎಂದು ಯಾರಿಗೂ ಮೊದಲೇ ತಿಳಿದಿರುವುದಿಲ್ಲ. ಡಬಲ್ ಇಂಜಿನ್ ಟೂ ಇನ್ಕಮ್ ಎಂದು ಕರೆಸಿಕೊಳ್ಳುತ್ತಿದ್ದ ನಾವು ಕಡೆಗೂ ಒಂದು ದಿನ ನಮ್ಮ ನಮ್ಮ ಕಾರ್ಯ ಜೀವನದಿಂದ ನಿವೃತ್ತಿ ಹೊಂದಿ ಯಜಮಾನರ ಹುಟ್ಟು ಊರಿಗೆ ವಾಪಸ್ಸಾದೆವು. ಹೊಸ ಫ್ಲಾಟನ್ನು ಸಜ್ಜು ಮಾಡುತ್ತಾ, ಹೊಸ ಜನಗಳ ಪರಿಚಯ ಮಾಡಿಕೊಂಡೆವು. ಊರಿಗೆ ಬಂದೊಡನೆಯೇ ಸ್ವಲ್ಪ ದಿನಗಳು ಬಂಧುಗಳ ಆಗಮನ. ಇಷ್ಟು ವರ್ಷಗಳು ಹೊರಗೆ ಕೆಲಸ ಮಾಡಿ ಎಷ್ಟು ಸಂಪತ್ತುಗಳಿಸಿದ್ದಾರೆ ನೋಡೋಣ ಎಂಬ ಕುತೂಹಲ. ''ನಿಮ್ಮ ಫರ್ನೀಚರ್ ಎಲ್ಲಾ ಹಳೆಯದೇ ಇದೆಯಲ್ಲಾ'' ಎಂದು ಉದ್ಗಾರ ಮಾಡುತ್ತಾ ಕೂಲಂಕುಶವಾಗಿ ಒಂದೊಂದೇ ಪ್ರಶ್ನೆ ಮಾಡುತ್ತ ನಮ್ಮ ಬ್ಯಾಲೆನ್ಸ್ ಶೀಟ್ ತಾವೇ ತಯಾರು ಮಾಡಿಬಿಟ್ಟರು. ''ಮುಂದೆ ಏನಾದ್ರು ಕೆಲಸ ಮಾಡುವಿರೋ ಅಥವಾ ಮನೆಯಲ್ಲೇ ಕಾಲಕ್ಷೇಪ ಮಾಡುವಿರೋ'' ಎನ್ನುತ್ತಾ, ನಮ್ಮ ಪೆನ್ಷನ್ ನಮ್ಮ ಜೀವನಕ್ಕೆ ಸಾಕಾಗುವುದೋ ಇಲ್ಲವೋ ಎಂಬ ಕುತೂಹಲ ವ್ಯಕ್ತಪಡಿಸಿದರು.

ಮೊದಲನೆಯ ವಾರವೇ ನಮ್ಮ ಬಾಗಿಲ ಹೊರಗೆ ನಮ್ಮ ಹಣಕಾಸು ವ್ಯವಸ್ಥೆ ಮಾಡಲು ಶ್ರೀಯುತ ಸೂರಜ್‌ನ ಆಗಮನವಾಗುತ್ತದೆ. ತುಂಬಾ ಸುಂದರ ಯುವಕ. ಜೊತೆಯಲ್ಲೇ ಲ್ಯಾಪ್‌ಟಾಪ್ ತಂದಿರುತ್ತಾನೆ. ನೋಡ ನೋಡುತ್ತಾ ನಮಗೆ ಎಷ್ಟು ವಯಸ್ಸು, ನಾವು ಎಷ್ಟು ವರುಷಗಳ ತನಕ ಬದುಕಿರಬಹುದು, ನಮ್ಮ ಹಣಕಾಸಿನ ಧ್ಯೇಯ ಹೇಗಿರಬೇಕು ಎಂದೆಲ್ಲ ತಿಳಿಸಿ ಹೇಳುತ್ತಾನೆ. ಮತ್ತೆ ನಮ್ಮ ಹತ್ತಿರ ಒಂದು ಪ್ರಿಂಟೆಡ್ ಶೀಟ್ ಕೊಡುತ್ತಾ ನಿಮ್ಮ ಒಂದು ಕೋಟಿ ರೂಪಾಯಿಗಳ ಬಂಡವಾಳ ಹತ್ತು ವರ್ಷಗಳ ನಂತರ ಎಷ್ಟೊಂದು ಬೆಳೆಯುತ್ತದೆ ಎಂದು ತೋರಿಸಿದ. ನಿಮ್ಮಿಬ್ಬರಿಂದ ಎರಡು ಕೋಟಿ ಬಂಡವಾಳ ಈ ರೀತಿ ಬೆಳೆದು ನಿಮ್ಮ ಎಂಬತ್ತನೇ ವಯಸ್ಸಿಗೆ ಇಷ್ಟು ಕೋಟಿಯಾಗಿರುತ್ತದೆ. ಇಲ್ಲಿ ಕೆಲವು ಅಪ್ಲಿಕೇಶನ್ ಫಾರಂ ಕೊಡುತ್ತೇನೆ. ನಿಮ್ಮ ಪಾನ್ ನಂಬರ್, ವಿಳಾಸದ ಪ್ರೂಫ್, ವಯಸ್ಸಿನ ಪ್ರೂಫ್ ಎಲ್ಲಾ ಕೊಡಿ. ನಾಳೆಯೇ ವಿವಿಧ ಮ್ಯೂಚುಯಲ್ ಫಂಡ್ಸ್ ಮಾಡಿ ಬಿಡೋಣ ಎಂದು ಕಳಕಳಿಯಿಂದ ಹೇಳಿ ನಾನು ಕೊಟ್ಟ ಮಸಾಲಾ ಚಹಾ ಹೀರಿ ಮನೆಯ ಸುತ್ತ ಕಣ್ಣು ಹಾಯಿಸುತ್ತಾನೆ. ''ಸೂರಜ್ ನೋಡಪ್ಪಾ ನಮ್ಮಿಬ್ಬರನ್ನೂ ಸೇರಿಸಿ ಕೂಡ ಒಂದು ಕೋಟಿ ರೂಪಾಯಿ ಬಂಡವಾಳ ಸಾಧ್ಯವಿಲ್ಲ. ಸುಮಾರು ಇಪ್ಪತ್ತು-ಇಪ್ಪತ್ತು ಲಕ್ಷ ಮಾಡಿದರೆ ಹೇಗೆ'' ಎಂದು ನಾನು ನಿಸ್ಸಂಕೋಚವಾಗಿ ಹೇಳಿಬಿಟ್ಟೆ. ಅವನ ಮುಖ ಒಂದು ತರಹ ಬದಲಾಯಿತು. ''ಆಂಟಿ ನೀವು ಮತ್ತು ಅಂಕಲ್ ತುಂಬಾ ದೊಡ್ಡ ಕೆಲಸಗಳಿಂದ ನಿವೃತ್ತಿಯಾದಿರೆಂದು ಕೇಳಿದೆ. ಆದರೆ ಬರೀ ಇಪ್ಪತ್ತು ಲಕ್ಷ?'' ಎಂದು ಉದ್ಗರಿಸುತ್ತಾ ''ಹೋಗಲಿ ಬಿಡಿ ಇಪ್ಪತ್ತು ಲಕ್ಷಕ್ಕೂ ನನ್ನ ಹತ್ತಿರ ಯೋಜನಗಳಿವೆ'' ಎನ್ನುತ್ತಾ ಸ್ವಲ್ಪ ಬೇಜಾರು ಮಾಡಿಕೊಂಡೇ ಹೇಳಿದ.

ಮಾರನೇ ದಿನ ಬಂದ ಹುಡುಗಿ ಹೆಲ್ತ್ ಇನ್ಶೂರೆನ್ಸ್ ಮಾರುವವಳು. ನಗು ನಗುತ್ತಾ ಬಂದು ನನ್ನ ಮತ್ತು ನನ್ನ ಪತಿಯ ಆರೋಗ್ಯದ ಬಗ್ಗೆ ವಿಪರೀತ ಕಾಳಜಿಯಿಂದ ವಿಚಾರಿಸಿಕೊಂಡು ಮುಂದೆ ನಮಗೆ ಬರಬಹುದಾದ ಅನೇಕ ಕಾಯಿಲೆಗಳ ಬಗ್ಗೆ ವಿವರಿಸುತ್ತ ನನ್ನ ಬ್ಲಡ್ ಪ್ರೆಷರ್ ಏರಿಸಿ ಬಿಡುತ್ತಾಳೆ. ಅದೂ ಎಂತೆಂತ ಕಾಯಿಲೆಗಳು? ಅಲ್ಜಿಮರ್, ಕ್ಯಾನ್ಸರ್, ಪಾರ್ಕಿಸನ್ಸ್ ಮತ್ತು

ವಿವಿಧ ಹೃದ್ರೋಗಗಳು! ಆಸ್ಪತ್ರೆಗಳ ಅನುಕೂಲಗಳು ಜೊತೆಗೆ ಒಂದೊಂದೇ ಕಾಯಿಲೆಯ ಖರ್ಚುಗಳು ಹೀಗೆ ಒಂದು ಗಂಟೆ ವಿವರಿಸುತ್ತಾಳೆ. ನನ್ನ ಮುಖ ನೋಡುತ್ತಾ ಆಂಟಿ ಪಾಪ ಹೆದರಿಬಿಟ್ಟಿದ್ದಾರೆ. ಡಿಪ್ರೆಶನ್ ತರಹ ಕಾಣಿಸುತ್ತಿದೆ. ನಂಗ್ ಪರಿಚಯವಿರುವ ಒಳ್ಳೆಯ ಸೈಕಿಯಾಟ್ರಿಸ್ಟ್ ವಿಳಾಸ ಕೊಡುತ್ತೇನೆ ಎನ್ನುತ್ತಾ ಮೆಡಿಕಲ್ ಇನ್ಶೂರೆನ್ಸ್‌ನ ಫಾರ್ಮ್ಸ್ ಕೊಡುತ್ತಾಳೆ. ಸರಿ ನೋಡುತ್ತೇವೆ ಥ್ಯಾಂಕ್ಸ್ ಎನ್ನುತ್ತಾ ಯಜಮಾನರು ಏಳುತ್ತಾರೆ. ಆ ಚಾಲೂ ಹುಡುಗಿ ಅಲ್ಲಿಗೂ ಬಿಡದೆ ನನ್ನನ್ನೇ ನೋಡುತ್ತಾ ನೋಡಿ ತಪ್ಪು ತಿಳಿಯಬೇಡಿ. ನೀವು ಬರ ಬರುತ್ತಾ ವೃದ್ಧರಾಗಿ ಬಿಡುತ್ತೀರ. ಒಂದು ವೇಳೆ ನಿಮ್ಮ ಹತ್ತಿರ ಆಸ್ಪತ್ರೆಯ ಖರ್ಚಿಗೆ ದುಡ್ಡೇ ಇಲ್ಲದಿರಬಹುದು ಅದಕ್ಕೆ ಮೆಡಿಕಲ್ ಇನ್ಶೂರೆನ್ಸ್ ಮಾಡಿಬಿಡಿ ಎಂದು ಖಡಾ ಖಂಡಿತವಾಗಿ ನುಡಿಯುತ್ತಲೇ ಏಳುತ್ತಾಳೆ.

ಅಂದೇ ನಮ್ಮ ಬಿಲ್ಡಿಂಗಿನ ಗೂರ್ಖಾ ಜಂಗ್ ಬಹದ್ದೂರ್ ಸಿಂಗ್ ತನ್ನ ಸೆಕ್ಯೂರಿಟಿ ಏಜನ್ಸಿ ಮ್ಯಾನೇಜರ್‌ನನ್ನು ಕರೆತರುತ್ತಾನೆ. ಪುಟ್ಟಕಾಯದ ಭೀಮ್ ಬಹದ್ದೂರ್ ಸಿಂಗ್ ಒಳಗೆ ಬಂದು ತನ್ನ ಪುಟ್ಟ ಕಣ್ಣುಗಳಿಂದ ನಮ್ಮನ್ನು ಮತ್ತು ನಮ್ಮ ಮನೆಯಲ್ಲಿರುವ ಕಿಟಕಿ ಬಾಗಿಲುಗಳನ್ನು ಪರೀಕ್ಷಿಸುತ್ತಾನೆ. ''ನಿಮ್ಮ ಶೋ ಕೇಸ್‌ನಲ್ಲಿ ತುಂಬಾ ಕೀಮತಿ ವಸ್ತುಗಳಿವೆ. ಆದರೆ ಬೀಗ ಮಾತ್ರ ಸರಿಯಿಲ್ಲ. ನಿಮ್ಮ ಮುಖ್ಯದ್ವಾರದ ಸೆಕ್ಯೂರಿಟಿ ಲಾಕ್ ಬೇರೆ ಹಾಕಿಸಿ. ಮೇಂ ಶಾಬ್ ನಿಮ್ಮ ಕಿವಿಯ ಓಲೆಗಳು ವಜ್ರದ್ದು. ನಿಮ್ಮ ಕೈ ಬಳೆಗಳು, ಮಂಗಳ ಸೂತ್ರ ಮತ್ತು ಉಂಗುರ ಕೂಡ ಈಗ ತುಂಬಾ ಬೆಲೆಯವು. ನಿಮ್ಮ ಮೇಲೆ ಯಾರಾದರೂ ಹಲ್ಲೆ ಮಾಡಿದರೆ ಏನು ಗತಿ?'' ಭೀಮ್ ಬಹದೂರ್ ಸಿಂಹನ ಗರ್ಜನೆಯಿಂದ ನನ್ನ ಕಾಲುಗಳು ಥರ ಥರ ನಡುಗುತ್ತವೆ. ''ನೀವು ರಿಟೈರ್ ಆದ ಜನ ಮಕ್ಕಳು ನಿಮ್ಮ ಜೊತೆಯಲಿಲ್ಲ. ಹೀಗಾಗಿ ನೀವು ತುಂಬಾ ಹುಷಾರಾಗಿರಬೇಕು'' ಎನ್ನುತ್ತಾ ತನ್ನ ಏಜನ್ಸಿ ವೃದ್ಧರಿಗಾಗಿ ತಯಾರಿಸಿರುವ ಯೋಜನೆ ಬಗ್ಗೆ ವಿವರಣೆ ಕೊಡುತ್ತಾನೆ. ಮನೆಯ ತುಂಬಾ ಸೆಕ್ಯೂರಿಟಿ ಕ್ಯಾಮೆರಾ, ಎಮರ್ಜೆನ್ಸಿ ಕಾಲ್ ಸಿಸ್ಟಮ್ ಎಲ್ಲ ಸೇರಿ ತಿಂಗಳಿಗೆ ಬರೀ ಹತ್ತು ಸಾವಿರ ಖರ್ಚು ಎಂದು ಹೇಳುತ್ತಾನೆ. ನಮ್ಮ ಯಜಮಾನರು ನನಗೆ ಚಹಾ ಕೊಡಲು ಹೇಳಿ ಬಹದ್ದೂರ್ ಸಿಂಗ್ ಜೊತೆ ಅವನ ಯೋಜನೆಗಳ ಬಗ್ಗೆ ಚರ್ಚಿಸುತ್ತಾರೆ.

ಒಂದು ವಾರ ಕಳೆದ ನಂತರ ಪಕ್ಕದ ಬಿಲ್ಡಿಂಗಿನಿಂದ ಮಹಿಳೆ ಬಂದರು. ''ನೀವು ಈಗ ವೃದ್ಧರು ನಿಮ್ಮನ್ನು ಮಾತನಾಡಿಸಲು ಯಾರಿಗೂ ಪುರುಸೊತ್ತೇ ಇಲ್ಲ ನಮ್ಮ ಸಂಸ್ಥೆಯಿಂದ ಜನರನ್ನು ಕಳಿಸುತ್ತೇವೆ. ಅವರು ನಿಮ್ಮ ಎದುರಿಗೆ ಹಾಡುತ್ತಾರೆ, ಕುಣಿಯುತ್ತಾರೆ ಮತ್ತು ನಗಿಸುತ್ತಾರೆ ಕೇವಲ ತಿಂಗಳಿಗೆ 2 ಸಾವಿರ ರೂಪಾಯಿಗಳಿಗೆ'' ಎಂದು ತಮ್ಮ ಕಳಕಳಿ ವ್ಯಕ್ತಪಡಿಸಿದರು. ಪಾಪ ನಾವು ಬೇಡ ಅಂದಾಗ ನಿರಾಶರಾದರು. ಅವರ ಜತೆ ಬಂದಿದ್ದ ಇನ್ನೊಬ್ಬ ಮಹಿಳೆ ನಮಗೆ ಸಾಮಾನು ತರಲು ಸಹಾಯ ಮಾಡುವುದಾಗಿಯೂ, ಪ್ರತಿಸಲ 500 ರೂ. ಕೊಟ್ಟರೆ ಸಾಕೆಂದರು. ಅವರಿಗೂ ನಿರಾಶೆಯೇ.

ನಮ್ಮಿಬ್ಬರ ಲಾಫ್ಟರ್ ಕ್ಲಬ್, ಹೆಲ್ತ್ ಕ್ಲಬ್, ಬ್ರಿಜ್ ಆಟ, ಯೋಗ ಮತ್ತು ಪ್ರಾಣಾಯಾಮ ಹೀಗೆ ವಿವಿಧ ಚಟುವಟಿಕೆಗಳಿಗೆ ಬೇರೆ ಬೇರೆ ಕಡೆಯಿಂದ ಆಮಂತ್ರಣ ಬಂದವು. ಲಾಫ್ಟರ್ ಕ್ಲಬ್ ಬಿಟ್ಟು ಬೇರೆ ಎಲ್ಲಕ್ಕೂ ವಿವಿಧ ಬಗೆಯ ಫೀಸು. ಎಲ್ಲರಿಗೂ ನಿವೃತ್ತಿ ಹೊಂದಿದವರಿಂದ ವೃತ್ತಿ ಮಾಡುವ ಆಸೆ.

ಈಗ ಕಾಲ್ ಮಾಡಿದವರು ಟ್ರಾವೆಲ್ ಏಜನ್ಸಿಯವರು. ರಿಟೈರ್ ಆದ ಜನಗಳಿಗೆ ಎಂದು ಹೊಸ ಟ್ರಾವೆಲ್ ಪ್ಯಾಕೇಜ್ ಮಾಡಿದ್ದೇವೆ ಎಂದು ಪುಸಲಾಯಿಸುತ್ತಲೇ ತಮ್ಮ ಪ್ಯಾಕೇಜ್ ನಮಗೆ ಮಾರಿಬಿಟ್ಟರು. ನಾವು ಮಾರಿಷಸ್ ದ್ವೀಪಕ್ಕೆ ಪ್ರವಾಸ ಹೊರಟಾಗ ನಮಗೆ ಬೇಕಾದವರು

‘‘ಎಚ್ಚರಿಕೆಯಿಂದ ಖರ್ಚು ಮಾಡಿ. ನಿಮ್ಮ ಹತ್ತಿರವಿರುವ ಹಣ ಹೀಗೆ ಪೋಲು ಮಾಡಿದರೆ ನಾಳೆ ನಿಮಗೆ ತೊಂದರೆ ಆಗಬಹುದು’’ ಎಂದು ಹೇಳಿದ್ರೆ ಇನ್ನೊಬ್ಬ ಆಪ್ತೇಷ್ಟರು ‘‘ಪರವಾಗಿಲ್ಲ. ನೀವು ಚೆನ್ನಾಗೇ ದುಡ್ಡು ಮಾಡಿದ್ದೀರಾ. ರಿಟೈರ್ ಆದ ನಂತರವೂ ಹೀಗೆ ಫಾರಿನ್ ಹಾಲಿಡೇ ಮಾಡುತ್ತಿದ್ದಿರ’’ ಎಂದು ಕುಹಕ ನುಡಿದರು.

ನಮ್ಮ ಜತೆ ಬಂದಿದ್ದವರ ಕಥೆ ಕೇಳಿ ಇನ್ನೂ ಬೇರೆ ಬೇರೆ ವಿಷಯಗಳು ತಿಳಿದವು. ರಿಟೈರ್ ಆಗಿಬಂದ ಜನಗಳಿಗೆ ಮಕ್ಕಳ ತರಹವೇ ಕ್ಯಾಂಪ್‌ಗಳಂತೆ ಕೂಕರಿ ಕ್ಯಾಂಪ್‌ನಲ್ಲಿ ವಿವಿಧ ರೀತಿಯ ಅಡಿಗೆಗಳನ್ನು ಹೇಳಿ ಕೊಡುತ್ತಾರಂತೆ. ಚೈನೀಸ್, ಮೆಕ್ಸಿಕನ್, ಇಟಾಲಿಯನ್, ಲೆಬನೀಸ್ ಇತ್ಯಾದಿ. ಇದಲ್ಲದೆ ಹಾಬಿ ಕ್ಲಾಸ್ ಅಂತೆ. ಅದರಲ್ಲಿ ಡ್ರಾಯಿಂಗ್ ಪೇಂಟಿಂಗ್ ಅಲ್ಲದೆ ದಾರದ ಕೆಲಸ ಮರದ ಕೆಲಸ ಕೂಡ ಸೇರಿಸಿದ್ದಾರಂತೆ. ಮೊಮ್ಮಕ್ಕಳಿಗೆ ಅವರ ಪ್ರಾಜೆಕ್ಟ್‌ಗಳಲ್ಲಿ ಸಹಾಯ ಮಾಡಲು ಅನುಕೂಲಕ್ಕೆಂದು ಪ್ರೈಮರಿ ಸ್ಕೂಲ್‌ನ ಪಾಠ ಕ್ರಮವನ್ನು ಕೂಡ ಕಲಿಯಬಹುದನ್ತೆ.

ನಮ್ಮ ಜತೆ ಬಂದಿದ್ದ ಪರಾಂಜಪೆ ದಂಪತಿ ನಿವೃತ್ತ ಜನಕ್ಕೆ ಹೇಳಿಕೊಡುವ ಡಾನ್ಸ್ ತರಗತಿ ಸೇರಿ ಟ್ಯಾಂಗೋ ಝುಂಬಾ ಸಾಲ್ಸಾ ಮುಂತಾದ ಡಾನ್ಸ್ ಪ್ರಕಾರಗಳಲ್ಲಿ ತಮ್ಮ ಕೌಶಲ್ಯ ತೋರಿಸಿಕೊಳ್ಳಲು ಪ್ರತಿ ದಿನ ಮೊಬೈಲ್‌ನಲ್ಲಿ ಮ್ಯೂಸಿಕ್ ಹಾಕಿಕೊಂಡು ಕುಣಿದದ್ದೂ ಕುಣಿದದ್ದೇ. ಎಷ್ಟು ವಯಸ್ಸಾದರೂ ಹುಮ್ಮಸ್ಸು ಕಡಿಮೆಯಾಗಿರಲಿಲ್ಲ.

ವಾಪಸ್ಸು ಬಂದಮೇಲೆ ನಾವೂ ಏನಾದರೂ ಹೊಸದು ಮಾಡಬೇಕು ಎಂಬ ಇಚ್ಛೆ. ನಮ್ಮ ಹತ್ತಿರ ಯಾರೋ ಕೊಟ್ಟಿದ್ದ ನಂಬರ್ ನೋಡಿ ಫೋನಾಯಿಸಿದೆ. ಇಪ್ಪತ್ತೇ ನಿಮಿಷಗಳಲ್ಲಿ ಯುವಕ ಯುವತಿಯ ಜೋಡಿ ಆಗಮಿಸಿತು. ತುಂಬಾ ಉತ್ಸಾಹದಿಂದ ನಮ್ಮಿಬ್ಬರನ್ನೂ ಮಾತನಾಡಿಸುತ್ತ ನಾನಾ ತರಹದ ಆಕ್ಟಿವಿಟೀಸ್ ಎಂದು ಒಪ್ಪಿಸಿಬಿಟ್ಟರು. ನಂಗೆ ಬೊಂಬೆ ಮಾಡುವುದು ಥಾಯಿಚಿ ಕಲಿಯುವುದು, ಲೇಸು ಮಾಡುವುದು, ಗ್ರೀಟಿಂಗ್ ಕಾರ್ಡ್ ಮಾಡುವುದು ಹೀಗಾದರೆ ಯಜಮಾನರಿಗೆ ಉರ್ದು ಭಾಷೆಯ ಕವನ ಶಾಯರಿ ಕಲಿಯುವುದು, ಮರದ ಕೆಲಸ, ಮೊಬೈಲ್ ಕಂಪ್ಯೂಟರ್ ರಿಪೇರಿ ಇತ್ಯಾದಿ. ನಾವಿಬ್ಬರೂ ತುಂಬಾ ಹುಮ್ಮಸ್ಸಿನಿಂದಲೇ ಫಾರ್ಮ್ ತುಂಬಿ ಫೋಟೋ ಹಚ್ಚಿ ಕೊಟ್ಟೆವು. ಬೇಗ ಬೇಗ ತನ್ನ ಮೊಬೈಲ್ನಲ್ಲಿ ಲೆಕ್ಕ ಮಾಡಿ ನಂಗೆ ತಿಂಗಳಿಗೆ 10 ಸಾವಿರ ಮತ್ತು ಯಜಮಾನರಿಗೆ 15 ಸಾವಿರ ಎಂದರು. ನಾವಿಬ್ಬರು ಕಣ್ಣಿನಲ್ಲಿಯೇ ಮಾತನಾಡಿಕೊಂಡು ನಾಳೆ ಬನ್ನಿ ಎಂದೆವು. ಸೆಕ್ಯೂರಿಟಿ ಮ್ಯೂಚುಯಲ್ ಫಂಡ್, ತಿಂಗಳ ಮನೆ ಖರ್ಚು, ಔಷಧಿಗಳ ಖರ್ಚು, ಪೆಟ್ರೋಲ್ ಖರ್ಚು ಎಲ್ಲ ಸೇರಿ 50 ಸಾವಿರ. ಇನ್ನು ಆಕ್ಟಿವಿಟೀಸ್‌ಗೆ ಹೋದರೆ ಇನ್ನೊಂದು 25 ಸಾವಿರ ದೇವರೇ ಗತಿ!

ಸ್ವಲ್ಪ ಸಮಯದ ನಂತರ ಮೇರಿ ಆಂಟಿ ಬಂದರು ಅವರು 85 ವಯಸ್ಸಿನ ತರುಣಿ. ನಮ್ಮ ಎಲ್ಲ ಮಾತು ಕೇಳಿಸಿಕೊಂಡು ‘‘ಎಷ್ಟು ಹುಚ್ಚು ನಿಮಗೆ. ಬೀಚಿನ ಹತ್ತಿರ ಮನೆ, ದಿನಾ ವಾಕಿಂಗ್ ಮಾಡಿ, ನಿಮಗೆ ಗೊತ್ತಿರುವ ವ್ಯಾಯಾಮ ಮಾಡಿ, ಮ್ಯೂಸಿಕ್ ಸಿಸ್ಟಮ್‌ನಲ್ಲಿ ಸಂಗೀತ ಕೇಳಿ, ಮನೆ ಕೆಲಸ ಮಾಡಿ, ಪ್ರಾರ್ಥನೆ ಮಾಡಿ, ನಿಮಗೆ ಆಕ್ಟಿವಿಟಿ ಬೇಕು ತಾನೇ? ನಾನು ನಡೆಸುತ್ತಿರುವ ಅನಾಥಾಲಯಕ್ಕೆ ಬನ್ನಿ. ಮಕ್ಕಳಿಗೆ ಪಾಠ ಹೇಳಿ, ಹಾಡು ಕಲಿಸಿ ಮತ್ತು ಆಟ ಆಡಿ. ಅವರಿಗೆ ತಮ್ಮ ಕಾಲ ಮೇಲೆ ನಿಲ್ಲುವ ಶಕ್ತಿ ಕೊಡಿ. ಇದು ಯಾವುದಕ್ಕೂ ಫೀಸ್ ಇಲ್ಲ. ಮಕ್ಕಳ ಸಂಭ್ರಮ ನಗು ನೋಡಿ ಪೂರ್ಣ ಆನಂದ ಅನುಭವಿಸಿ. ನಿಮ್ಮ ಹತ್ತಿರ ಹೆಚ್ಚಾಗಿ ಹಣವಿದ್ದರೆ ನಮ್ಮ ಮಕ್ಕಳ ಶಿಕ್ಷಣಕ್ಕಾಗಿ ಕೊಡಿ. ಗಾಡ್ ಬ್ಲೆಸ್ ಯು’’ ಎಂದು ನಗುತ್ತಾ ವಾಪಸ್ಸು ಹೊರಟರು.

ಸದ್ಯ ದೇವರ ದಯ! ನಿವೃತ್ತಿ ಹೊಂದಿದವರಿಂದ ಸಮಾಜ ಕಲ್ಯಾಣವೂ ಸಾಧ್ಯ ಎಂದು ನಂಬುವ ಜನರೂ ಇದ್ದಾರೆ! ನಿವೃತ್ತರಿಂದ ತಮ್ಮ ವೃತ್ತಿ ನಡೆಸುವ ಈ ಜಗವು ಚಿತ್ರ ವಿಚಿತ್ರ!

❑

# SIR M. VISVESVARAYA CO-OPERATIVE BANK LIMITED

*Corporate Office:* #109, Shankar Mutt Road, Shankarapuram, Bangalore-560 004. Ph: 080-2661 1141
E-mail: corporate@vcb.co.in website : www.vcb.co.in

## One of the leading Urban Co-operative Banks in Karnataka.

**VARIOUS SERVICES OFFERED***

- **Loans for small & medium scale** industries
- **Housing Loan upto Rs.70.00** lakhs.
- **Mortgage Loan for various** purposes
- **Loans for higher education & professional courses**
- **Loans for Hospitals, Hotel Industry, Food processing etc.**
- **Loans for nonconventional energy systems**
- **Loans for educational institutions**
- **Loans for two wheelers and four** wheelers
- **Loans for self employed persons**
- **Gold Loan upto Rs.5.00 Lakhs**
- **Loans on Government Securities**
- **Personal Loan upto Rs.5.00 lakhs**
- **Safe Deposit Locker facility**
- **Local Pay Order and D.D facility for selected Cities**
- **Deposit insurance upto Rs.1.00** lakh
- **Issue of cheque books at free of charge for senior citizens**
- **Separate counters for senior** citizens
- **Any Branch Banking facility**
- **Opening of NRE/NRO rupee** account.
- **NEFT/RTGS/Foreign remittance facility for transfer of funds**
- **ATM facility**
- **E-stamping facility.**

*Terms & Conditions apply.*

Shortly Introducing
A T M Sharing



Eleven fully computerized Branches under Core Banking spread all over Bangalore City.

Introduced Personalised Cheque Books



Total Deposits Exceeds ₹1627 Crores

Total Working Capital Exceeds ₹1843 Crores

Total Business Mix Exceeds ₹2601 Crores

Interest on Home Loan
As low as 10% P.A.
No processing fees
This offer is for limited period only.
*Terms & Conditions apply.*



Share Capital ₹39.50 Crores

Reserves ₹85.87 Crores

Advances ₹974 Crores

Customer Base More than 1.70 lacs

Members More than 19758

### BOARD OF MANAGEMENT:

Sri. K.N. Venkatanarayana, President
Sri. Shankaranarayana Rao, Vice-President

Directors: Sri. H.K. Nanjunda Swamy, Sri H.R. Gopinath, Sri T. Shrinivasa Rao, Smt. Nalini Shivashankar, Sri. Ramananda, Sri D.S. Honnappa, Sri R. V. Krishna Murthy, Smt. Rekha Lakshman, Dr. V.R. Gowrishankar, Sri M. Ananth, Sri. S. Venkatesha Sastry, Sri B.S. Sripathi Rao, Sri B.S. Ravishankar, Sri. M. S. Vijaya Kumar

Smt. Y. S. Srividya, Assistant General Manager
Sri. L. Ganesh, Assistant General Manager
Sri. T. S. Guruprasad, Assistant General Manager
Sri. M. S. Sathyanarayana Rao, Chief Executive Officer

**BRANCHES : Kumara Park West : Ph. 22956401/402 - Shankar Mutt Road : Ph. 22956403/404 - Rajajinagar : Ph. 22956406/407 J.P. Nagar : Ph. 22956409/410 - BSK III Stage : Ph. 22956411/412 - Vijayanagar : Ph. 22956413/414 - Kengeri : Ph. 22956415 Mathikere:Ph. 22956416 - BTM Layout : Ph. 22956417/418 - Rajarajeshwarinagar : Ph. 22956421 - Konanakunte : Ph. 22956422**

# ಕಾಮಣ್ಣ ಮಕ್ಕಳೋ.........

**- ಗುಂಡುರಾವ್ ದೇಸಾಯಿ**

**ಮೊ**ನ್ನೆ ಊರಿಂದ ಬಂದ ಕೂಡಲೇ ಎರಡು ವರ್ಷದ ಮಗ 'ಸಮು' ತೊದಲು ಭಾಷೆಯಲ್ಲಿ ಹೊರಗೆ ಕೈ ತೋರಿಸುತ್ತಾ 'ಅಪ್ಪಾ.. ಅಪ್ಪಾ ಹೂಂ.. ಹೂಂ.. ಅಪ್ಪಾ' ಅಂತ 'ಲಬ ಲಬ' ಬಾಯಿ ಬಡಕೊಳ್ಳಾಕತ್ತಿದ. ನನಗ ಗಾಭರಿಯಾಯಿತು. ಸುಮ್ಮಸುಮ್ಮನ ಬಡಕೊಬಾರದು ಅಪಶಕುನ ಅಂತ ಹೇಳ್ತಾರ, ಹೇಳ್ತಾರೇನು ಬಂತು, ಸತ್ತಾಗ ಹಾಂಗ ಮಾಡತಿರತಾರ, ಅದಕ ಹಾಗ ಸಿಕ್ಕ ಸಿಕ್ಕ ಟೈಮಿನ್ಯಾಗ ಬಡಕೋಬಾರದು ಅಂತರ. ನಾನು ಹಿಂಗ್ಯಾಕ ಮಾಡಕತ್ಯಾನ ಇವ. ಏನಾಗೇದ! ಅಂತ ಈಕಿನ ಕೇಳಿದೆ. 'ಇಲ್ರೀ. ಇವತ್ತು ಹೋಳಿ ಹುಣ್ಣಿಮೆ ಅದಲ್ಲರಿ, ಹುಡುಗರು ಮನಿಮುಂದ ಬಂದು ಬಾಯಿ ಬಡಕೊಂಡು ಹೋದ್ವು. ಅದರಂಗ ತಾನು ಬಡಕೊಳ್ಳಕತಾನ' ಅಂದ್ಲು.

''ಸರ್ದಾರ ಮಗನ! ಎರಡು ವರ್ಷದಾಗ ಗಂಡೆಂಬುದು ತೋರಿಸಿ ಬಿಟ್ಟೆ ನೋಡು'' ಎಂದೆ ಹೆಮ್ಮೆಯಿಂದ.

''ಏನಂತ ಮಾತಾಡಕತಿರಿ ಬಾಯಿ ಬಡಕೊಳ್ಳೋದು ಚಲೋ ಅಂತೀರೇನು? ತಪ್ಪಾತು ಅನ್ನಿ''

''ಅಲ್ಲ, ಗಂಡಿಗಂತ ವರ್ಷದಾಗ ಇರೋದು ಇದೊಂದ ಹಬ್ಬ. ಇಷ್ಟೊರ್ಷ ಆತು ಇವರ ಅಕ್ಕನೋರು ಒಂದು ಸಾರಿಯಾದ್ರೂನೂ ಬಡಕೊಂಡಾರನೂ.....? ಬಡಕೊಳ್ಳೊದು ಗಂಡಿನಲ್ಲಿರುವ ಜೀನ್ಸಲೇ, ಬಡಕೊಳ್ಳಂಗ ಮಾಡೋದು ಹೆಣ್ಣಿನಲ್ಲಿರುವ ಜೀನ್ಸೂ.....'' ಎಂದು ಮಾತು ಮುಂದುವರೆಸತಿರಬೇಕಾದ್ರೆ.

''ಹೋಗ್ರೀ ಏನೇನೋ ಹೇಳಿ ವಿಷಯನ ಎಲ್ಲೆಲ್ಲೋ ಎಳಕೊಂಡು ಹೋಗ್ತೀರಿ'' ಎಂದು ಒಳ ನಡದ್ಲು.

ಮಗ ಬಾಯಿ ಬಡಕೊಂಡ್ರ ಅಪ್ಪ ಬಡಕೋಬಾರಲೇ ಅಂತ ಹಣೆ ಹಣೆ ಬಡಕೊಳ್ಳಬೇಕು. ಆದರ ಮಗನ ವರ್ತನ ಖುಷಿ ಕೊಡ್ತು. ನನ್ನ ಬಾಲ್ಯಕ್ಕ ಕರಕೊಂಡು ಹೋತು. ಈ ದಿನ ''ಕಾಮಣ್ಣ ಮಕ್ಕಳೋ, ಕತ್ತೆ ಸೂಳೆ ಮಕ್ಕಳೊ. ಭೀಮಣ್ಣ ಮಕ್ಕಳೋ ಬಿಟ್ಟಿ ಸೂಳೆ ಮಕ್ಕಳೋ. ಕಾಮ-ಭೀಮ ಕೂಡ್ಯಾರೋ ಕಟ್ಟಿಗಿ ಕುಳ್ಳು ಕದ್ದಾರೋ'' ಅಂತ ಪ್ರಾಸ ಬದ್ಧವಾಗಿ ಹಾಡಿ ಕಾಮ ಸತ್ತ್... ಭೀಮ ಹುಟ್ಯಾನಪೋ...... ಅಂತ ಜೋರಾಗಿ ಬಾಯಿ ಬಡಕೊಂತಿದ್ದಿವಿ. ಬಾಯಿ ಬಡಕೊಳ್ಳದು ಅನ್ನೊದು ಗ್ರಾಂಥಿಕ ಭಾಷೆ, ಸಂಸ್ಕಾರಯುತರ ಭಾಷೆ. ನೆಲದ, ಅಚ್ಚ ಹಳ್ಳಿಗರ ಭಾಷೆ ಹೊಯ್ಯಕೊಳ್ಳದು. ಫಾಲ್ಗುಣದ ಪೂರ್ಣಿಮೆಯ ದಿನ ಬರುವ ಕಾಮನ ಹಬ್ಬ ಹುಡುಗರಿಗೆಲ್ಲ ಕಮಾಲಿನ, ಸವಾಲಿನ ಹಬ್ಬ. ಎಲ್ಲಾ ಹಬ್ಬಗಳಿಗೆ ಕ್ಯಾಲಂಡರನ್ನ ನೋಡಿ ಹೋ.. ಇದು ಹಿಂಗ ಮಾಡಬೇಕು ಅಂತ ತಯಾರಿ ನಡಿತಾವ, ದೊಡ್ಡ ದೊಡ್ಡ ಉತ್ಸವ ಆದ್ರ ಅನೇಕ ಸಭೆ ಮಾಡಿ ಸಿದ್ಧತೆ ಮಾಡಿಕೊಂತಾರ. ಈ ಹಬ್ಬಕ ಸಿದ್ದತೆ ಇಲ್ಲ, ಪಂಚಾಂಗ ನೋಡಂಗನೆ ಇಲ್ಲ. ವರ್ಷದ ಮೂರನೇ ತಿಂಗಳಿನ ಮೊದಲಿಗೆ ಇಲ್ಲ ನಡುವೆ ಬರುತ್ತದಂತ ಅಷ್ಟಾ ಲೆಕ್ಕಾಚಾರ. ಭರತ ಹುಣ್ಣಿವಿ ಅಥವಾ ಶಿವರಾತ್ರಿ

ಅಮಾವಾಸ್ಯೆ ಆದ ಮ್ಯಾಲೆ ಬರುವ ಹುಣ್ಣಿಮೆನ ನಮ್ಮದು ಅಂತ ನಮ್ಮ ಲೆಕ್ಕಾಚಾರ. ಭರತ ಹುಣ್ಣಿಮೆ ಅಂದ್ರ ಅವತ್ತು ನಮ್ಮೂರ ಜಾತ್ರೆ, ಹಾಂಗಾಗಿ ಹೋಳಿ ಹುಣ್ಣಿಮಿನ ಅಷ್ಟು ಹಗರಾಗಿ ಮರತಿರಲಿಲ್ಲ. ಅಪ್ಪಿ ತಪ್ಪಿ ಮರೆತರು ಮನ್ಯಾಗಾತು, ಓಣ್ಯಾಗಾತು ಹೆಣ್ಮಕ್ಕಳು ಮಾತಾಡ ಹೊತ್ತಿನ್ಯಾಗ ಬರ ಹುಣ್ಣಿವಿ ಯಾವುದವ? ಅಂತ ಪ್ರಸ್ತಾಪ ಬಂದು ಅಯ್ಯಾ ಹೋಳಿ ಹುಣ್ಣಿವೆವಾ ಅಂತ ಕಿವಿ ಬಿದ್ರ ಸಾಕು ನಮ್ಮ ಕಾರ್ಯ ಚಟುವಟಿಕೆ ಆರಂಭ ಆಗತಿದ್ವು. ಲೇ ಕಾಮನ ಹಬ್ಬ ಬಂತಲೇ, ಎಲ್ಲೇರ ಹುಡಿಕ್ಯಾಡಿಕೊಂಡು ಪ್ಯಾಂಟ, ಷರ್ಟ, ಹಳೆ ಗಡಗಿ ತೋಂಬರಿ, ಆ ಕುಲಕರ್ಣಿಯವರ ಬಣಿವ್ಯಾಗ ಹುಲ್ಲು ತೊಂಬರ್‍ರಿ, ಅಂತ ಹೇಳಿ ಎಲ್ಲಾ ತಂದಾದ ಮೇಲೆ ಪ್ಯಾಂಟು ಷರ್ಟಿನ್ಯಾಗ ಹುಲ್ಲು ತುಂಬಿ, ಗಡಿಗಿ ನಿಲ್ಲಾಕ ಒಂದು ಕಟ್ಟಿಗಿ ಚುಚ್ಚಿ, ಕಣ್ಣು ಮೂಗು ಇಳಿಸಿ, ಜಾತ್ರೆಯಲ್ಲಿ ತಂದಿರತಿದ್ದ ಚಾಳೀಸನ್ನ ಹಾಕಿ, ಹಳೆ ಬೂಟು ಯಾರ ಮನ್ಯಾಗರ ಸಿಗತಿದ್ವು ಇಲ್ಲಂದ್ರ ತಿಪ್ಯಾಗ ಬಿದ್ದಿದವನ್ನ ತಂದು ಬೂಟು ತೊಡಿಸಿ ರೆಡಿ ಮಾಡಿತಿದ್ವಿ. ಕೆಲವರು ಕೈಯಾಗ ಒಂದು ಸಿಗರೇಟು ಬೇರೆ ಕೊಟ್ಟು ಬಿಡತಿದ್ರು. ಮೂಲ ಕಾಮ ಹೇಗಿದ್ದನೋ ಗೊತ್ತಿಲ್ಲ ನಮ್ಮ ಹುಡುಗರ ಕೈಯಾಗ ಸಿಕ್ಕ ಕಾಮಣ್ಣ ಥೇಟ್ ಹಳೆ ಸಿನೆಮಾದ ಮೇನ್ ವಿಲನ್ ತರಹ ಕಾಣೋನು. ಕಾಮ ಅಂದ್ರ ಕೆಟ್ಟವ ಅಂತ ಚಿತ್ರ ತಲಿಯಾಗ ಇತ್ತು. ಅಲ್ಲದೆ ದಕ್ಷಯಜ್ಞನದಲ್ಲಿ ಆಹುತಿಯಾದ ಪತ್ನಿಯ ವಿರಹದಿಂದ ಶಿವ ಶಾಂತಿಗಾಗಿ ತಪಸ್ಸಿಗೆ ಕುಳಿತು ಲೋಕವನ್ನೆ ಮೈಮರತಿರತಾನೆ. ಆ ಟೈಮಿಗೆ ತಾರಕಾಸುರ ಅನ್ನೋ ರಾಕ್ಷಸ ಶಿವ ಹ್ಯಾಂಗಾದ್ರೂ ಏಳಲ್ಲ, ಹಾಂಗಾಗಿ ಅವನ ಮಗನಿಂದನ ಮರಣ ಬರಲಿ ಎಂದು ಬ್ರಹ್ಮನಿಂದ ವರ ಪಡದು, ದೇವತೆಗಳನ್ನೆ ಹಿಂಸಿಸುತ್ತಾ ಮೆರೆತಿರಬೇಕಾದ್ರೆ ಶಿವನ ತಪೋ ಭಂಗಮಾಡಿ ಅವನಲ್ಲಿ ಅನುರಾಗ ಹುಟ್ಟುವಂತೆ ಮಾಡಲು ಎಲ್ಲರೂ ಮನ್ಮಥನನ್ನು ಕೇಳ್ಕೋತಾರೆ. ತನ್ನ ಮದನ ಬಾಣದಿಂದ ಶಿವನ ಮನಸ್ಸನ್ನು ಚಂಚಲಿಸಿದ ಮನ್ಮಥನನ್ನು ಕಂಡು ಶಿವನಿಗೆ ಪಿತ್ತ ನೆತ್ತಿಗೇರುತ್ತೆ. (ಮನ ಚಂಚಲಿಸಿದ ಸಮಯದಲ್ಲಿ ಪಕ್ಕದಲ್ಲಿ ಗಿರಿಜೆ ಇರುವಂತಹ ವ್ಯವಸ್ಥೆ ಮನ್ಮಥ ಮಾಡಿದ್ರೆ ಅವ ಸಾಯಿತಿರಲಿಲ್ಲೇನೋ? ಬಾಣ ಬಿಡುವಾಗ ಜೊತೆಗೆ ರತಿನು ಇದ್ಲು. ಅವರಿಬ್ಬರು ಪ್ರಣಯವನ್ನು ನೋಡಿ ಶಿವನಿಗೆ ಸಂಕಟ ಆಗಿರಲಿಕ್ಕೆ ಬೇಕು!) ತನ್ನ ಮೂರನೆ ಕಣ್ಣು ಬಿಟ್ಟು ಬೂದಿ ಮಾಡ್ತಾನೆ. ಆ ಘಟನೆಯ ನೆನಪಿಗೋಸ್ಕರ ಕಾಮನ್ನ ಸುಡತಾರೆ ಅಂತ ಕೇಳಿದ್ವಿ ಅಲ್ಲದೆ ಪಿಕ್ಚರಿನ್ಯಾಗ ನೋಡಿದ್ವಿ., ಹಾಂಗಲ್ಲದ ಹಿಂದಕ ಶಿವ ಪಾರ್ವತಿ ಸಭಾದಾಗ ಕುಳಿತಾಗ ಶಿವ ಸುಮ್ನೆ ಪಾರ್ವತಿಗೆ ಕೇಳಿದ್ನಂತೆ ''ಲೋಕದಾಗ ಚೆಂದಿರೋರು ಯಾರು?'' ಪಾರ್ವತಿ ಸಹಜವಾಗಿ ಮನ್ಮಥ ಅಂದ್ಲಂತೆ. ಪರಪುರಷರನ್ನ ಹೊಗಳಿದ್ರ ಯಾವ ಗಂಡಸು ತಡಿತಾನ್ರಿ! ಈಗ ಏನ ಲೋಕದಾಗ ನಡದಾದ ಆಗ ನಡದದ್ದು ಅದೆ. ಸಿಟ್ಟಗೆದ್ದ ಶಿವ ಮನ್ಮಥನನ್ನ ಕರೆಸಿ ಮೂರನೆ ಕಣ್ಣು ತೆಗೆದು ಸುಟ್ಟೇ ಬಿಟ್ಟ. ಜೊತಿಗೆ ಬಂದಿದ್ದ ರತಿದೇವಿ ಅಳಕತಿದ್ಲು. ಸಭಾಸದರು ಶಿವನ ಏಕಪಕ್ಷೀಯ ನಿರ್ಧಾರದಿಂದ ಅಸಂತೃಪ್ತಗೊಂಡರು. ರತಿದೇವಿನು ದಿಕ್ಕಾರ ಕೂಗಿದ್ಲು. ಪ್ರತಿಪಕ್ಷಗಳು ಗಲಾಟೆಯಾದಾಗ ಆಳುವ ಸರಕಾರನ್ನ ದಿಕ್ಕೆಡಸಾಕ ಬೆಂಬಲ ಕೊಡಾಕ ಬಂದಾಂಗ ರತಿಗೂ ಸಪೋರ್ಟ ಕೊಡಾಕ ಸಿದ್ಧರಾಗತಿದ್ದ ಸಂದರ್ಭದಾಗ ಪಾರ್ವತಿ ಎಚ್ಚೆತ್ತುಕೊಂಡು ಆಬ್ಜಕ್ಷನ್ ಹಾಕಿ ಗಂಡನಿಂದ ರತಿಗೆ ನಿನ್ನ ಗಂಡ ನಿನಗ ಕರದಾಗ ಬರುಹಾಂಗ ಎಲ್ಲರಲ್ಲಿ ಇರುವಾಂಗ ವರಪರಿಹಾರ ಕೊಡಿಸಿದ್ಲಂತೆ ಅನ್ನುವ ಕಥಿನೂ ಕೇಳಿದ್ವಿ.

ನಮ್ಮೂರು ವಾಸುದೇವಾಚಾರ್ಯರು ತಮ್ಮ ಇಷ್ಟದೇವ ಕೃಷ್ಣಗ ತಳಿಕಿ ಹಾಕಿಕೊಂಡ ಕಾಮನ ದಹನದ ಕತಿ ಹೇಳತಿದ್ರು. ಒಮ್ಮೆ ಅವ ಕೈಲಾಸ ಪರ್ವತದಾಗ ತಪಸ್ಸಿಗೆ ಕೂತಾಗ ವಕ್ರನೆಂಬ ರಾಕ್ಷಸ ತಪಸ್ಸು ಭಂಗ ಮಾಡಕ ಬರಲು ಧ್ಯಾನದಿಂದ ಏಳದೆ ತನ್ನ ಹೊಟ್ಟೆಯಲ್ಲಿದ್ದ ಕಾಮನಿಂದಲೆ ಆ ರಾಕ್ಷಸನ್ನು ಇದೆ ದಿನ ಕೊಂದನೆಂಬುದು ಅವರ ವಾದ. ಇನ್ನೂ ನಮ್ಮ ಪಠ್ಯ ಪುಸ್ತಕದಾಗ ಹೋಲಿಕಾ ರಾಕ್ಷಸಿಯ ಸಂಹಾರದ ಕಥೆಯಿತ್ತು. ಆಕಿ ಹಿರಣ್ಯಕಶಪುವಿನ ತಂಗಿ. ಬೆಂಕಿ ಜೊತೆ ಸರಸವಾಡಿದ್ರೂ ಏನಾಗಬಾರದೂ ಅಂತ ವರ ಪಡೆದಾಕಿ. ಪ್ರಹ್ಲಾದನ ಹರಿನಾಮ ಸ್ಮರಣೆಯಿಂದ ತಂದೆಗೆ ಸಾಕು ಸಾಕಾಗಿ ಹೋಗಿತ್ತು. ಕೊಲ್ಲುವ ಅನೇಕ ಪ್ರಯತ್ನಗಳು ವಿಫಲವಾಗಿದ್ವು. ಕೊನಿಗೆ ಹೋಲಿಕಾನ ಕರೆಸಿ ಪ್ರಹ್ಲಾದನ್ನ ಆಕಿ ತೊಡೆಮೇಲೆ ಕೂಡ್ರಿಸಿ ಬೆಂಕಿ ಹಚ್ಚಿದನಂತೆ. ಪಾಪ ಇಲ್ಲಿ ಸತ್ತಿದ್ದು ಪ್ರಹ್ಲಾದ ಅಲ್ಲ ಅವನ ಅತ್ತೆ. ಇವು ನಾಲ್ಕು ಕಥೆಗಳು ನನಗಾಗ ಸಿಕ್ಕಾ ಪಟ್ಟೆ ಕನ್‌ಫೂಜನ್! ಯಾವುದು ನಂಬುವುದು? ಅಲ್ಲಿ ದಹಿಸಿದ ವ್ಯಕ್ತಿಯ ಚರ್ಯೆಗೂ ನಮ್ಮ ಕಾಮಗೂ ಹೋಲಿಕೆನ ಇಲ್ಲ. ಅಲ್ಲದೆ ಮೊದಲ ಪ್ರಸ್ತಾಪಿಸಿದ ಹಾಡಿಗೂ, ಅಲ್ಲಿ ಬರುವ ಕಾಮ, ಭೀಮ, ಕಟ್ಟಿಗೆ ಕುಳ್ಳು ಒಂದಕ್ಕೊಂದು ಸಂಬಂಧವೆ ಇಲ್ಲ. ಕಾಮ ಸತ್ತು ಭೀಮ ಹುಟ್ಯಾನಪ್ಪ ಅಂತ ಹೊಯ್ಯಕೋತಿರುವಾಗ, ಭೀಮ ನಡುಕ್ಯಾಕ ಬಂದನಂತ ನನ್ನ ಪ್ರಶ್ನೆ. ಹಿಂದಕ ಕಾಮ, ಭೀಮ ಅಂತ ಇಬ್ಬರೂ ಉಡಾಳರಿದ್ದಿರಬೇಕು. ಅವರಿಬ್ಬರೂ ಕೂಡಿ ಕಟ್ಟಿಗಿ ಕುಳ್ಳನ್ನ ಕದ್ರು ಅನ್ನುವುದನ್ನು ಅತ್ತೆಯ ಕರಳನ್ನು ಕದ್ರು ಅರ್ಥಾತ್ ಅವಳ ಮಗಳನ್ನ ಕದ್ರು ಅಂತ ಅರ್ಥೈಸಿಕೊಂಡ್ರೆ ಈ ಕಥೆಗೆ ಒಂದು ಅರ್ಥ ಬರುತ್ತನಿಸುತ್ತೆ. ಕದ್ದ ಮೇಲೆ ಭೀಮನಿಗೆ ಪಶ್ಚಾತ್ತಾಪ ಆಗಿರಬೇಕು, ಮಾಡಿದ್ದು ತಪ್ಪೆಂದು ಗೊತ್ತಾಗಿ. ಮಾತು ಕೇಳದ ಕಾಮ ಆಕಿಗೆ ಏನ ಮಾಡಿರಬೇಕು. ಆ ಕಾರಣಕ್ಕಾಗಿ ಕಾಮನನ್ನು ಹಿಡದು ಶಿಕ್ಷಿಸಿ ಸುಟ್ಟಿರಬೇಕು, ಇಂದ್ರಿಯ ನಿಗ್ರಹ ಮಾಡಿದ ಭೀಮ ಉಳಕಂಡ ಅಂತ ಇದರಾಗ ಮೆಸ್ಸೆಜು ಇರಬೇಕು. ಏನೋ ಅಂತ ನನ್ನ ವೈಯಕ್ತಿಕ ಅಭಿಪ್ರಾಯ. ಅಥವಾ ಮಹಾಭಾರತದ ಸಂದರ್ಭಕ್ಕ ಹೋಲಿಸಿ ಕಾಮಕ್ಕೆ (ದ್ರೌಪದಿಗೆ) ಆಸೆಪಟ್ಟ ದುರ್ಯೋಧನ ವಿಧಿಗೆ ಬಲಿಯಾಗಿದ್ದು. ಅಣ್ಣನ ಹಿತನುಡಿಯಿಂದ ಆಸೆ ಆಕಾಂಕ್ಷೆ ಕೋಪವನ್ನು ನಿಗ್ರಹಿಸಿ ಭೀಮ ಅಜೇಯನಾಗಿದ್ದು ತಿಳಿಸುವ ಸಂಕೇತವೇ? ಅಥವಾ ಪ್ರಸ್ತುತ ಸಂದರ್ಭಕ್ಕೆ ಹೋಲಿಸಿ ಕಾಮ ಅನ್ನುವದು ಕೆಟ್ಟದರ ಸಂಕೇತ, ಅದನ್ನು ವಿಧಿಪೂರ್ವಕವಾಗಿ ಬಳಸಿದರೆ ಶ್ರೇಯಸ್ಸು. ಅಪ್ರಾಮಾಣಿಕವಾಗಿ ಬಳಸಿಕೊಂಡರೆ ಆಪತ್ತು ಎಂದು ತಿಳಿಸುವಂತಹದ್ದೆ ಅಥವಾ ಉದ್ದೇಶ ಪೂರ್ವಕವಾಗಿ ಬಾಲ್ಯ ಹರೆಯಕಾಲದಲ್ಲಿ ಅರಳುತ್ತಿರುವ ಅವರ ಕಾಮದಾಹವನ್ನು ನಿಯಂತ್ರಿಸಲು, ಅದು ಹೊರ ತೋರ್ಪಡಿಸಿದರೆ ಅಪಾಯ ಅಂತ ತಿಳಿಸಲು ಹಿರಿಯರು ಕಾಮದಹನದ ಅನುಷ್ಠಾನಕ್ಕೆ ತಂದಿದ್ದಾರೆಯೇ? ಎನ್ನುವ ಸಂದೇಹವೂ ನನ್ನದು. ಈ ಹಬ್ಬದ ಆಚರಣೆಗೆ ಯಾವ ಕಟ್ಟುಪಾಡುಗಳಿಲ್ಲ, ಆ ಎರಡು-ಮೂರು ದಿನ ಏನೆ ಮಾಡಿದ್ರೂ ಅಸಹ್ಯ ಅಂತ ಜರಿಯೋದೆ ಇಲ್ಲ. ಮನಿಮುಂದ ಹೊಯ್ಯಕೊಂಡರೆ ಬೇಜಾರು ಮಾಡಿಕೊಳ್ಳುವುದೆ ಇಲ್ಲ, ಕಟ್ಟಿಗೆ ಕುಳ್ಳು ಕದ್ದರೂ ಕಂಪ್ಲೆಂಟ್ ಕೊಡುವುದೆ ಇಲ್ಲ, ಮೇಲಾಗಿ ಇಲ್ಲಿ ಹಿರಿಯರಾರು ಭಾಗವಹಿಸುವುದೇ ಇಲ್ಲ. ಇದು ಪ್ಯೂರಲಿ ಗಂಡು ಹುಡುಗರ ಹಬ್ಬನ. ಇದರ ಅರ್ಥ ಏನು ಕಾಸಿ ಬಡದಂಗ ಅಂತಾರಲ್ಲ ಹಾಗಲ್ವೇ? ಅಲ್ಲದೆ ಮರುದಿನ ಪಾಪ ಮೂರು ದಿನ ಭಾರಿ ಚಲೊ ಹೊಯ್ಕೊಂಡು ಕಾಮದಹನದ ಅರ್ಥ ತಿಳಕೊಂಡಿ ಅಂತ ಹೊಯ್ಕೊಂಡು ಬಾಯಿಗೆ ಹೋಳಿಗೆ ತುಪ್ಪ ಅಂತ ಹೋಳಿಗೆ ಮಾಡಿ

ಮಕ್ಕಳಿಗೆ ತಿನ್ನಸ್ತಾರೆ. ಅಂದರೆ ಅವನ ವರ್ತನೆಯ ಬಗ್ಗೆ ಅವಲೋಕನ ಮಾಡಿಕೊಂಡು ಬದುಕು ರೂಪಿಸಿಕೊಳ್ಳಿ ಎಂದು ಫ್ರೀ ಬಿಡತಿದ್ರೇನೋ.

ಕ್ಷಮಿಸಿ ಕಾಮದಹನದ ಕಾರಣಗಳ ಪ್ಲಾಷಬ್ಯಾಕಿಗೆ ಕರಕೊಂಡು ಕೃತ, ತ್ರೇತಾ, ದ್ವಾಪರಯುಗಕ್ಕೋಗಿ ಸುತ್ತಾಡಿಸಿಕೊಂಡು ಬಂದಂಗಾತು, ವಿಚಾರಕ್ಕ ಬರೋಣ. ಕಾಮನ ಪ್ರತಿಷ್ಠಾಪಿಸಿದ ಮ್ಯಾಲೆ ಅತನ್ನ ಸುಡಾಕ ಕಟ್ಟಿಗಿ ಕುಳ್ಳು ಬೇಕಲ್ಲ. ಅದರ ಸಂಗ್ರಹಕ್ಕಾಗಿ ತಟ್ಟನ್ನ ಹಿಡಕೊಂಡು ಒಬ್ರನ್ನ ಹೆಣವಾಗಿ ಮಲಗಿಸಿ ಕೋರಸ್ಸನೊಂದಿಗೆ ಕಾಮಣ್ಣ ಮಕ್ಕಳು ಕತ್ತೆ ಸೂಳೆ ಮಕ್ಕಳೋ, ಭೀಮಣ್ಣ.. ಲಾಸ್ಟಿಗೆ ಮೈಕೈ ಛಳಿ ಬಿಟ್ಟು ಕಣ್ಣಾಗ ನೀರ ಬರೋ ಹಾಂಗ ಕಾಮ ಸತ್ತು ಭೀಮ ಹುಟ್ಯಾನಪ್ಪೊ ಅಂತ ಹೊಯ್ಕಂತಿದ್ವಿ.. ಮನಿ ಮುಂದು ಬಂದು ಕಾಮನ ಸುಡಾಕ ಕಟ್ಟಿಗಿ ಕುಳ್ಳು ಹಾಕರಿ ಅಂತ ಬೇಡಿಕೆ ಇಡೋರು, ಹಾಕಿದ್ರೂ ಅದೆ ಹಾಡ ಹಾಡಿಕೊಂತ ಮುಂದಿನ ಮನಿಗೆ ಹೋಗೋದು. ಹಾಕಲಿಲ್ಲ ಅಂದ್ರ ಹೆಣ ಮನಿಮುಂದ ಮಲಗಿಸಿ ಸತ್ತಾಗ ಹಾಡಾಡಿ ಅಳೊ ಹಾಂಗ ಎಂತಾ ಚಂದಿದ್ದಲ್ಲೋ ಎಪ್ಪಾ, ಎಂಗರಾ ಬಿಟ್ಟೋಗಾಕ ಮನಸು ಬಂತೋ ಯವ್ವಾ, ಮೊನ್ನಿನ ಸಿರಿ ತಂದು ಕೊಡತಿನಿ ಅಂತ ಹೇಳಿದ್ದೆಲ್ಲೋ ಯವ್ವಾ, ಯುಗಾದಿಗೆ ಕಾಸಿನ ಸರ ಮಾಡಿಸಿಕೊಡತಿನಿ ಅಂತ ಹೇಳಿದ್ದೆಲ್ಲೋ ಯಪ್ಪ, ಇದ್ದಕ್ಕಿದ್ದಂಗಾ ನೆಗದು ಬಿದ್ದು ಹೊದಿಯಲ್ಲೋ ಯಪ್ಪಾ, ಇನ್ನಾರು ನನಗ ಗತಿಯೋ ಯವ್ವಾ, ಸುಡಾಕ ರೊಕ್ಕಿಲ್ಲ ಅಂತ ಈ ಮನಿಗೆ ಬಂದ್ರ ನಿನಗ ಸುಡಕಾ ಕುಳ್ಳು ಇಲ್ಲಾ ಅಂತಾರಲ್ಲೋ ಯಪ್ಪ. ಕಟಿಗಿ ಕುಳ್ಳ ಕೊಡದ ಮನಿಯಾಗ ತಗಣಿ ಬೀಳೊ ಅಂತ ಶಾಪ ಕೊಡೊ ಎಪ್ಪ ಅನ್ನುತಲೇ ತಗಣಿಕಾಟದ ಬಗ್ಗೆ ಗೊತ್ತಿದ್ದವರು ಬಡಬಡ ಕಟ್ಟಿಗಿ ಕುಳ್ಳು ತಂದು ಹಾಕಿ ಮುಂದ ಸಾಗಹಾಕತಿದ್ರು. ಏನಾಕೇನ ಪ್ರಕರಣ ಅಂಬಂತೆ ಕಟ್ಟಿಗಿ ಕುಳ್ಳು ಕೊಡದವರ ಮನ್ಯಾಗ ತಗಣಿ ಬಿದ್ದು ನಂಬಿಕಿನ ಗಟ್ಟಿಗೊಳಸ್ತಿದ್ವು. (ತಗಣಿಗಳು ಅಂದ್ರ ಪರೋಪ ಜೀವಿಗಳು. ಗೋಡೆಯ ಕಂಬದ ಸಂದುಗಳಲ್ಲಿ ಅವುಗಳ ಆವಾಸ. ರಾತ್ರಿ ಹರಿದು ಹಾಸಿಗೆಗೆ ಬಂದು ಮಲಗಿದವರ ರಕ್ತ ಹೀರುವವು. ಅವನ್ನು ವರೆದರೆ ಅರ್ಥಾತ್ ಹೊಸಗಿ ಹಾಕಿದರೆ ಅದರಿಂದ ಮತ್ತೆ ಅವುಗಳ ಸಂತತಿ ಹೆಚ್ಚುವುದೆಂಬ ಊಹೆ. ಇದಕ್ಕೆ ಪುಷ್ಠಿ ಕೊಡುವಂತೆ ಕೆಲದಿನದಲ್ಲೆ ಮನಿತುಂಬ ಎದ್ದಿರುತ್ತಿದ್ದವು. ರಕ್ತ ಬೀಜಾಸುರರು ಅಂತ ಹಿಂದಕ ಇದ್ರಂತಲ್ಲ ಅವರೆ ಈಗ ತಗಣಿಗಳಾಗಿರೊ ನಂಬಿಕ) ಒಂದೊಂದು ದಿನ ಇಷ್ಟಿಷ್ಟಂತ ಮನೆಯಿಂದ ಕಟ್ಟಿಗೆ ಕುಳ್ಳು ಎತ್ತಗೊಂಡು ಬಂದು ಹಾಳ ಮನ್ಯಾಗೂ, ತಿಪ್ಯಾಗೋ, ಯಾವದಾದರೂ ಸಂದೂರ್ಯಾಗೋ ಗುಂಪಿ ಮಾಡತಿದ್ವಿ. ಆಗ ಓಣಿ ಓಣ್ಯಾಗ ಕಾಮನ ಕೂಡಸೋರು. ಒಂದು ಗುಂಪಿಗೆ ಇಟ್ಟ ಸ್ಥಳ ಗೊತ್ತಾದ್ರೆ ಎತ್ತಿಬಿಡತಿದ್ರು. ಸಂಜೆ ಮನೆ ಮನೆ ತಿರಗೋ ಕೆಲಸ ಆದ್ರೆ ರಾತ್ರಿ ಹಾಕೋ ಸ್ಕೆಚ್ ಬ್ಯಾರೇ, ನಾವು ಸಂಗ್ರಹಿಸಿದ ಕಟ್ಟಿಗೆ ಕುಳ್ಳಿನಿಂದ ಬೆಳತನಕ ದಹಿಸಾಕ ಆಗತಿರಲಿಲ್ಲ. ಪಿಯುಸಿ, ಡಿಗ್ರಿ ಓದೋರು, ಅರ್ಧ ಓದಿ ಬಿಟ್ಟವರು ಸ್ಕೆಚ್ ಹಾಕಿ ಕೊಡತಿದ್ರು, ನಮ್ಮಿಂದ ಕಟ್ಟಿಗೆ ಎಲ್ಲಿ ಬಾಳವ, ತುಂಡು ಯಾರಮನ್ಯಾಗವ ಅಂತ ಮಾಹಿತಿ ತಿಳದುಕೊಂಡು ಯೋಜನೆ ರೂಪಿಸೊದಲ್ಲದೆ ಎತ್ತಿಹಾಕಿಕೊಂಡು ಬರತಿದ್ರು. ಈ ಕಾರ್ಯ ಸುಡದಿವಸ ತೀವ್ರವಾಗಿ ನಡಿತಿತ್ತು. ಸದ್ದಾಗದಂತೆ, ಯಾರಿಗೂ ಗೊತ್ತಾಗದಂತೆ ದೇವದೇವಾನಂತಹ ತುಂಡು ಹೊತ್ತುಕೊಂಡು ಬರುವುದು ಸಾಮಾನ್ಯನೇ? ಕಾಮದಹನ ದಿನ ಅನ್ನುವಷ್ಟಿಗೆ ಒಂದು ಹಂತಕ್ಕೆ ಸಂಗ್ರಹ ಬರತಿತ್ತು. ಅವತ್ತು ಸಂಜೆ ರೌಂಡಿನಲ್ಲಿ ಪಟ್ಟಿ ಎತ್ತ

ಕೆಲಸ. ಬಂದ ಕಾಸಿನಿಂದ ರಾತ್ರಿಯ ಪೂಜಾ ಸಾಮಗ್ರಿ, ಉಳಿದ ಹಣದಲ್ಲಿ ಮರುದಿನ ಕಾಮ ದಹನಕ್ಕೆ ಸಹಕರಿಸಿದ ಎಲ್ಲರಿಗೆ ಒಗ್ಗರಣಿ ಮಿರ್ಚಿ ತಿನ್ನಿಸುವ ವ್ಯವಸ್ಥೆ ದೊಡ್ಡವರು ಮಾಡುತ್ತಿದ್ದರು. ಮಕ್ಕಳನ್ನು ದ್ವೇಷಿಸುವ, ವಿನಾಕಾರಣ ಬಯ್ಯುವಂತವರಿಗೆ ಶಾಸ್ತಿ ಕಲಿಸುವ ಅವಕಾಶ ಈಗೆ ಇರುತ್ತಿತ್ತು, ನಡಾ ರಾತ್ರಿ ಹೋಗಿ ಹೊರಗ ಚಿಲಕ ಹಾಕಿ ಸಿಕ್ಕಂಗ ಬಯ್ದು, ಹೊಯ್ಕೊಂಡು ಬಾಗಲ ತಗದು ಅವರಿಗೆ ಸಿಗದಾಂಗ ಓಡಿ ಬರತಿದ್ವಿ. ಒಳ್ಳೆ ಕಾರ್ಯಕ್ಕ ವಿಘ್ನ ಬಾಳಂತ ಬ್ರಾಹ್ಮಣ ಓಣ್ಯಾಗ ಒಬ್ಬ ಮೇಷ್ಟ್ರ ಮನೆ ಮುಂದ ಸುಡಬೇಕಾಗಿತ್ತು. ಅದು ಅವರ ಅಂಗಳ ಮಾತ್ರವಾಗಿರದೆ ಸುತ್ತಲೂ ಇದ್ದ ಎಲ್ಲ ಮನೆಯವರ ಅಂಗಳವು ಆಗಿತ್ತು. ಆ ಜಾಗ ಬಿಟ್ರೆ ವಿಶಾಲ ಸ್ಥಳ ಇರಲಿಲ್ಲ. ಸತ್ತಾಗ ಸುಡುವ ಕ್ರಿಯೆ ನೆನಪಿಗೆ ಬರುತ್ತಿತ್ತೇನೋ, ಅವರು ಬಾಳ ಕುಡಿತಿದ್ದರಾದ್ದರಿಂದ ಅದರ ಬಗ್ಗೆ ಅಂಜಿಕೆ ಇತ್ತೇನೋ ಅದಕ್ಕ ಅಡ್ಡಿಯಾಗಿದ್ರೂ. ಅಷ್ಟೆಲ್ಲ ತಯ್ಯಾರಿ ಮಾಡಿಕೊಂಡಿದ್ದ ನಮಗೆ ಅವರ ಕಣ್ಣ ತಪ್ಪಿಸಿ ಕಾಮನ್ನು ಸುಡುವುದೆ ದೊಡ್ಡ ಸವಾಲಾಗಿತ್ತು. ಇವರು ಯಾಕಾದ್ರೂ ಈ ಓಣಿಗೆ ಒಕ್ಕರಿಸದ್ರೋ, ಎಷ್ಟು ಚೆಂದ ಸ್ವಚ್ಛಂದವಾಗಿ ಸುಡತಿದ್ವಿ, ಈಚೆಗೆ ಎರಡು ವರ್ಷದಿಂದ ಕಿರಿಕಿರಿ ಜಾಸ್ತಿಯಾಗಿತ್ತು. ಒಂದು ಪುಣ್ಯಾ ಅಂದ್ರ ಅವರು ಕುಡುದು ಮನಿಗೆ ಬರೊಷ್ಟಿಗೆ ರಾತ್ರಿ ಹನ್ನೆರಡು ಸಮೀಪಿಸುತ್ತಿತ್ತು. ಅಷ್ಟರೊಳಗ ನಮ್ಮ ಕಾರ್ಯ ಸಾಧಿಸಿಬಿಡತಿದ್ವಿ. ಒಂದು ಸಾರಿ ಅವರ ಮನೆಮಾಲಿಕ ಅವರ ಸುಪರ್ದಿಯಲ್ಲಿ ಕೊಟ್ಟು ಹೋಗಿದ್ದ, ಹೊರಗೆ ಇಟ್ಟಿದ್ದ ದೊಡ್ಡ ಕಟ್ಟಿಗೆಯ ರ್‍ಯಾಕನ್ನು ಅವರಿಂದ ಹಿಗ್ಗಾ ಮುಗ್ಗಾ ಬಯ್ಯಿಸಿಕೊಂಡಿದ್ದ ಹುಡುಗರು ಎತ್ತಿ ತಂದು ಬೆಂಕಿಯಲ್ಲಿ ಹಾಕಿದ್ರು. ಆಗಿನ ಕಾಲಕ್ಕೆ ಎಂಟು ಸಾವಿರ ರೂಪಾಯಿ ಬೆಲೆಬಾಳುವಂತಹದ್ದು. ಪೊಲೀಸ್ ಸ್ಟೇಷನ್‌ತನ ಹೋತಾದ್ರೂ ಅಪರಾಧಿಗಳನ್ನ ಬಿಟ್ಟಕೊಡಲು ಯಾರು ತಯಾರಿರದೆ, ಪೋಲಿಸರು ''ಇದು ಹುಡುಗರ ಹಬ್ಬ ಅವರ ಜೊತೆ ಹೊಂದಿಕೊಂಡು ಹೋಗಿದ್ರೆ ಈ ಸಮಸ್ಯೆ ಎದುರಾಗತಿತ್ತಾ?'' ಅಂತ ಬುದ್ಧಿವಾದ ಹೇಳಿ ಕಳಿಸಿದ್ರಂತೆ. ಕಾಮನ ಸುಡುವ ತಯಾರಿ ನಡಸೋದು ಹತ್ತರ ನಂತರ. ಅದಕ್ಕೂ ಮುನ್ನ ಅನೇಕ ಮನೆಯವರು ಎಡಿ ಕೊಟ್ಟಗೊಂಡು ಕಾಯಿ ಒಡಕೊಂಡು ಹೋಗತಿದ್ರು, ಕಾಮನ ಪೂಜೆ ಮಾಡಿದ್ರೆ ಸಂತಾನ ಭಾಗ್ಯ ಸಿಗತ್ತ ಅಂತ ನಂಬಿಕೆ ಇತ್ತು. ಕಟ್ಟಿಗೆ ಲೆಕ್ಕಾಚಾರದ ಮೇಲೆ ಸುಡುವ ತೀರ್ಮಾನ ತೊಂತಿದ್ವಿ ಕಟ್ಟಿಗೆ ಬೆಳಗಿನವರೆಗೂ ಉರಿಯುವಂತಿದ್ದರೆ ಹನ್ನೊಂದಕ್ಕೆ ದಹನ ಕ್ರಿಯೆ ಸುರು ಹಚ್ಚಗೊಂತಿದ್ವಿ. ಕಾಮಣ್ಣಗ ಕಾಯಿ ಒಡದು ಮಂಡಾಳು ಬೆಲ್ಲ ನೈವೇದ್ಯ ಮಾಡಿ, ಕೊಬ್ಬರಿನ ಸಣ್ಣಾಗಿ ಹೋಳು ಮಾಡಿ ಮಂಡಳಾಗ ಹಾಕಿ ಪ್ರಸಾದ ರೂಪದಲ್ಲಿ ಅದುವರೆಗೆ ಎದ್ದು ಕುಳಿತಿರದಿದ್ದ ಎಲ್ಲರಿಗೂ ಹಂಚಿ ಬಹು ದುಃಖದ ಭಾರದಿಂದ ಕಾಮನನ್ನ ಓರಣವಾಗಿ ಜೋಡಿಸಿದ್ದ ಕಟ್ಟಿಗೆ ಮೇಲೆ ಕೂಡ್ರಿಸಿ ಸುತ್ತಲು ಇರಿಸಿ ಮತ್ತೊಮ್ಮೆ ಪೂಜೆ ಸಲ್ಲಿಸಿ ಜೋರಾಗಿ ಭೂಮಿ ಆಕಾಶ ಒಂದಾಗಂಗ, ಮಲಕೊಂಡರೆಲ್ಲರೂ ಎಚ್ಚರಾಗೋ ಹಾಂಗ ಹೋಯ್ಕೊಳ್ಳತಾ ಬೆಂಕಿ ಹಚ್ಚತಿದ್ವಿ, ಆಕಾಲಿಕವಾಗಿ ವಿಧೆಯವೆಯರಾದ ಹೆಣ್ಣುಮಕ್ಕಳು ಆ ದೃಶ್ಯ ನೋಡಲಾಗದೆ ಒಳ ಹೋಗುತ್ತಿದ್ದರು. ಚಿಕ್ಕೋರೆಲ್ಲ ಏನೋ ಸಾಧಿಸಿದ ಛಲದಲ್ಲಿ ಗೂಡು ಸೇರಿದರೆ ಆಗ ಹಿರಿ ಹುಡುಗರ ಪ್ರಕ್ರಿಯ ಸ್ಟಾರ್ಟ ಆಗುತ್ತಿತ್ತು. ರಾತ್ರಿಯಲ್ಲ ನಿಶಾಚರರಂತೆ ಅಡ್ಡಾಡಿ ದೊಡ್ಡ ದೊಡ್ಡ ತುಂಡುಗಳನ್ನು ತಂದು ದೊಪ್ಪೆಂದು ಬೆಂಕಿಯಲ್ಲಿ ಒಗೆಯುತ್ತಿದ್ದ ಸದ್ದು ನಮಗೆ ಮಲಗಿದಲ್ಲೆ ಕೇಳುತ್ತಿತ್ತು. ಬೆಳಿಗ್ಗೆ ಆದೊಡನೆ ಕಾಮನ ಸುಟ್ಟ ಬೆಂಕಿಯಲ್ಲಿ ಉಳ್ಳಾಗಡ್ಡಿ, ಗೆಣಸು, ಕಡ್ಲಿ, ಬೊಳ್ಳೊಳ್ಳಿ ಸುಟ್ಟುಕ್ಕೊಳ್ಳೊ ಸಂಭ್ರಮ. ಅದಕ್ಕಾಗಿ ಮಲಗುವ ಮೊದಲೆ ಎಲ್ಲಾ

ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಬೆಳಿಗ್ಗೆ ಬೇಗ ಎಬ್ಬಿಸಲು ಅಪ್ಪಗ, ಅವ್ವಗ ಹೇಳಿ ಮಲಗತಿದ್ವಿ. ಬೆಳಿಗ್ಗೆ ಎದ್ದು ಹಲ್ಲುಜ್ಜಿದೊಡನೆ ಉಳ್ಳಾಗಡ್ಡಿ ಎಲ್ಲವನ್ನು ತೊಂಡು ದಹಿಸಿದ ಸ್ಥಳಕ್ಕೆ ಬರತಿದ್ವಿ. ಬರಬೇಕಾದ್ರ, ನಮ್ಮ ಮನಿ ಮುಂದ ಇಟ್ಟ ತುಂಡು ಹೊತ್ತ ಬಿಟ್ಟಾವವ ಈ ಹುಡ್ರು ಇಲ್ಲೆ ಲಿಚ್ಚಣಿಕೆ ಇತ್ತು ಅದನ್ನು ಬೆಂಕ್ಯಾಗ ಹಾಕಿ ಬಿಟ್ಟಾವವ ಯಾ ಮಾಯದಿಂದ ಬಂದವೂ ಗೊತ್ತಿಲ್ಲ, ರೀಪೇರಿ ಮಾಡಸೋಣ ಅಂತ ಹೊರಸ ಇಟ್ಟಿದ್ದೆ, ಇಲ್ಲೆ ಮಲಗಿದ್ದೆ ಎತ್ತಿಕೊಂಡು ಒಯ್ದು ಹಾಕ್ಯಾರವ ಅಂತ ಮಾತಾಡುವ ಸುದ್ದಿ ಕೇಳೋವು. ಅಲ್ಲಿ ಹೋದಾಗ ಸತ್ಯ ಎನ್ನುವಂತೆ ಅರ್ಧ ಸುಟ್ಟು ಉಳಿದಿರುವ ಬೊಂಬು, ಹಗ್ಗ, ದೊಡ್ಡ ತುಂಡುಗಳು ಸಾಕ್ಷಿ ಹೇಳೊವು, ಕಳಕೊಂಡ ಮಂದಿ ಹಾಂಗ ಬೈಕೊಂಡು ಸುಮ್ಮನಾಗತಿದ್ರೆ ಹೊರತು ಮನಸಿನ್ಯಾಗ ಇಟ್ಟುಗೊಂಡು ಚಿಂತಿ ಮಾಡತಿರಲಿಲ್ಲ, ಜಗಳಕ್ಕ ಬರತಿರಲಿಲ್ಲ. ಆ ಬೆಂಕಿಯಿಂದ ಅರಳಿದ ಕೆಂಡದಲ್ಲಿ ಸುಟ್ಟುಕೊಂಡು ತಿನ್ನುವ ಸ್ವಾದವೇ ಬೇರೆ. ಬ್ರಾಹ್ಮಣರಿಗೆ ಉಳ್ಳಾಗಡ್ಡಿ ಬೊಳ್ಳೊಳ್ಳಿ ವರ್ಜ್ಯ ಆಗಿದ್ರು ಅವತ್ತು ಒಂದು ದಿನ ಹುಡುಗರು ತಿನ್ನುಕೊಳ್ಳಿ ಅಂತ ಅಪ್ಪ ಫ್ರೀ ಬಿಡತಿದ್ದ. ಬಾಳ ತಿನ್ನ ಬೇಡ ನಾಲಿಗೆ ದಪ್ಪಾಗತ್ತ, ಹೊಲಸು ವಾಸನೆಯಾಗತ್ತ ಅನ್ನುವ ಕಿವಿಮಾತು ಜೊತಿಗೆ ಇರತಿತ್ತು. ಕರ್ಮಠರು ಮಾತ್ರ ನಮ್ಮತ್ತ ಆಸೆಯಿಂದ ನೋಡುತ್ತ ಆ ಅದೃಷ್ಟ ನಮಗಿಲ್ವೆ ಎಂದು ಕೊರಗುತ್ತ ಗೆಣಸು, ಕಡ್ಲಿ ಸುಟಗೊಂಡು ಹೋಗತಿದ್ರು. ಅಂದು ಅಲ್ಲಿರುವ ಕೆಂಡವೆ ಅನೇಕ ಮನೆಯ ಅಡುಗೆಗೆ ಉರುವಲು ಆಗಿ ಬಳಕೆಯಾಗುತ್ತಿತ್ತು. ಕಳಕೊಂಡವರು ಅಲ್ಲಿ ಬಿದ್ದಿರುವ ತಮ್ಮ ಅವಶೇಷಗಳನ್ನು ನೋಡಿ ಬಯ್ಯೊಕೋತ, ನಕ್ಕೋತ ಎಲ್ಲಾ ಸುಟಗೊಂಡು, ಉರವಲಿಗೆ ಕೆಂಡ ಒಯ್ತಿದ್ರು..

ಆದ್ರೆ ಈಗ ಕಾಲ ಬದಲಾಗಿದೆ ಅನ್ನುವಕ್ಕಿಂತಲೂ ಕಟ್ಟಿಗೆ ಕುಳ್ಳುಗಳ ಕೊರತೆ ಹೆಚ್ಚಿಗಿದೆ, ಇಪ್ಪತ್ತು ಮೂವತ್ತು ಓಣಿಗಳಲ್ಲಿ ಕಾಮನನ್ನು ಸುಡತಿದ್ದ ಊರಲ್ಲಿ ಬೆರಳಣಿಕೆಯಷ್ಟು ಓಣಿಗಳಲ್ಲಿ ಮಾತ್ರ ಉಳಿದುಕೊಂಡಿವೆ. ಈಗಿನವರಿಗೆ ಕಾಮನ ಹಬ್ಬ ಅಸಹ್ಯ, ಅಸಹನೀಯ, ಅಶ್ಲೀಲ ಅನಸ್ತಿದೆ. ನಮ್ಮ ಓಣಿಯ ಕಾಮದಹನ ಪ್ರಕ್ರಿಯೆ ನಿಂತು ಹೋಗಿದೆ. ಮನೆ ಮನೆಗೆ ಹೋದರೆ ಗ್ಯಾಸನ ಪ್ರಭಾವದಿಂದ ಕಟ್ಟಿಗೆ ಕುಳ್ಳುಗಳು ಗತಕಾಲದ ಪಟ್ಟಿ ಸೇರಿರುವುದರಿಂದ ಅವು ಮಕ್ಕಳಿಗೆ ಸಿಗದಾಗಿವೆ. ಅಡ್ಡೆಯಲ್ಲಿ, ಉಳ್ಳವರ ಮನೆಯಲ್ಲಿ ಕದಿಯಬೇಕೆಂದರೆ ಭದ್ರ ಕಾವಲಿದೆ. ಇಷ್ಟೆಲ್ಲ ಕಷ್ಟಗಳ ಮಧ್ಯೆಯು ಹುಡುಗರು ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ಆಗ ಎಲ್ಲರೂ ಕೂಡಿ ಆಚರಿಸುತ್ತಿದ್ದ ಈ ಹಬ್ಬದಿಂದ ಏಕೋ ಸುಶಿಕ್ಷಿತರು ಮಕ್ಕಳನ್ನು ಈ ಹಬ್ಬದಿಂದ ದೂರ ಇಟ್ಟಿದ್ದಾರೆ. ಮೊನ್ನೆ ಹುಣ್ಣಿವಿ ದಿನಾ ಕಟ್ಟಿಗೆ ಕುಳ್ಳು ಇಚ್ಛಿತ ಪ್ರಮಾಣದಲ್ಲಿ ದೊರೆಯದೆ ಕಾಮಣ್ಣನ ಕೈಬಿಟ್ಟು ಬಿಡಮಲೇ, ಕಳುವುಮಾಡಿ ಬೈಸಿಕೊಳ್ಳುದು, ಹೊಡೆಸಿಕೊಳ್ಳೊದು ಯಾವನಿಗಿ ಬೇಕು, ಅದರ ಬದುಲು ಗಣಪನ್ನ ಇಟ್ಟ ಬಿಡಮಾ, ಗಣಪಗಂದ್ರ ಯಾರೂ ಇಲ್ಲ ಅನ್ನಲ್ಲ. ಏನಂತಿರಲೇ? ಮಕ್ಕಳ ಗುಂಪಿನ ಮುಂದಾಳು ಅಂದಾಗ ಹೌದೌದು, ಈ ಸಾರಿ ಚೌತಿಗೆ ನಮ್ಮ ಓಣ್ಯಾಗ ಕಾಮನ ಇಡೋ ಜಾಗಕ್ಕನ ಕೂಡಸಾಮ ಅಂತ ಉಳಿದವರು ಧ್ವನಿಗೂಡಿಸಿದ್ರು. ನನಗ ಬಾಳ ಖೇದ ಅನಿಸ್ತು. ನಾನಾದ್ರೂ ರಾಜಕಾರಣಿ ಆಗಿದ್ರೆ ಹುಡುಗರ ಏಕೈಕ ಹಬ್ಬನ್ನ ಸರಕಾರದಿಂದನ ಆಚರಸಬೇಕು ಅಂತ ಟೇಬಲ ಕುಟ್ಟತಿದ್ದೆ.

❑

**- ದಂನಆ**

- ಮನೆ ಊಟಕ್ಕೆ ಕಾದಿದ್ರೆ, ಹೊರಗೆ ಬಿಸ್ಲು ಅಂತ ಕುಂತಿದ್ರೆ ಅಲೆಕ್ಸಾಂಡರ್ ದಿ ಗ್ರೇಟ್ ದೇಶ ದೇಶ ಗೆಲ್ಲೋಕೆ ಆಗ್ತಿತ್ತಾ ಏಳು?
- ತನ್ನ ರಕ್ತವನ್ನೇ ಹಾಲು ಮಾಡಿ ಮಗುವಿಗೆ ಕುಡಿಸುವ ವ್ಯಕ್ತಿಯೇ ತಾಯಿ.
- ತನ್ನನ್ನು ತುಳಿದು ಸಾಗಿದವರನ್ನು ರಸ್ತೆ ಯಾವತ್ತೂ ನಿರಾಸೆ ಮಾಡಿದ್ದಿಲ್ಲ. ಹೊರಟವರನ್ನು ಹೊರಟಲ್ಲಿಗೆ ತಲುಪಿಸಿ ಮರಳಿ ಕರೆತಂದ ಖ್ಯಾತಿ ಅದಕ್ಕಿದೆ.
- ಗ್ರೇಟ್ ಮೈಂಡ್ಸ್ ಡಿಸ್‌ಕಸ್ ಐಡಿಯಾಸ್; ಸ್ಮಾಲ್ ಮೈಂಡ್ಸ್ ಡಿಸ್‌ಕಸ್ ಪೀಪಲ್.
- ಪ್ರತಿ ಯಶಸ್ವಿ ವಿದ್ಯಾರ್ಥಿ ಹಿಂದೆ ಒಬ್ಬ ಉತ್ತಮ ಕ್ಲಾಸ್ ಟೀಚರ್ ಇರಬಹುದೆ?
- ನಮಗೆ ಭಾರಿ ಎಂದರೆ ಮೋಹ. ಅತ್ಯಂತ ದೊಡ್ಡ ಸಗಣಿ ರಾಶಿ ಇದೆ ಎಂದರೂ ಸಹ ಜನ ಟಿಕೆಟ್ ಕೊಂಡು ಅದನ್ನು ನೋಡಲು ಸಿದ್ಧರಿರುತ್ತಾರೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಬದುಕಿನ ಹಳೆಯ ಅಧ್ಯಾಯಗಳನ್ನೇ ಓದುತ್ತಾ ಕುಳಿತರೆ ಮುಂದಿನ ಅಧ್ಯಾಯ ಬರೆಯಲು ಸಾಧ್ಯವಿಲ್ಲ.
- ಹಲವಾರು ದೇಶಗಳಲ್ಲಿ ಸಾವಿರಾರು ಮಹಿಳೆಯರು ಮಾತನಾಡುವ ಭಾಷೆ ನಿಶ್ಯಬ್ದ.
- ಸ್ಮೋಕಿಂಗ್ ಕಿಲ್ಸ್ ಯು ಇಫ್ ಯು ಆರ್ ಅಲೈವ್.
- ಇಬ್ಬರೂ ಧಡೂತಿಗಳು ಮಾತನಾಡುತ್ತಿದ್ದರೆ ಅದನ್ನು ಏನೆಂದು ಕರೆಯಬಹುದು? ತೂಕದ ಮಾತು.
- ಕಾಮನಬಿಲ್ಲು ಒಟ್ಟಿಗಿದ್ದರೇ ಚೆನ್ನ. ಬಣ್ಣಗಳು ಬಿಡಿ ಬಿಡಿಯಾಗಿರಬಾರದು.
- ಅವನಿಗೆ ಊದುಬತ್ತಿ ಕೊಟ್ಟರೆ ಸಾಕು ಊರಿಗೇ ಬೆಂಕಿ ಹಚ್ಚುತ್ತಾನೆ.
- ರಿಚ್ ಆರ್ ಬಿಹೇವಿಂಗ್ ಪೂರ್ಲಿ.
- ಬಡವರಿಗೆ ಬರುವ ರೋಗಗಳಿಗೆ ಹೆಸರೇ ಇರದು.
- ಬದುಕೊಂದು ಕಠಿಣ ಪರೀಕ್ಷೆ. ಅನೇಕರು ನಪಾಸಾಗಲು ಕಾರಣ ಬೇರೆಯವರನ್ನು ನಕಲು ಮಾಡಲು ಪ್ರಯತ್ನಿಸುವುದರಿಂದ. ಎಲ್ಲರ ಪ್ರಶ್ನೆ ಪತ್ರಿಕೆಗಳೂ ಬೇರೆ ಬೇರೆ ಎಂಬುದನ್ನು ಮರೆತಿರುತ್ತಾರೆ.

❑

Advertisement

# Advertisement

# ಅರ್ಧ ಹೊಟ್ಟೆಯ ಊಟ

**- ಬೇಲೂರು ರಾಮಮೂರ್ತಿ**

**ಆ** ಮನೆಯಲ್ಲಿ ಇರುವುದು ನಾಲ್ಕು ಜನ. ತಾಯಿ, ಮಗಳು, ಮಗ, ಮೈದುನ. ಗಂಡ ತೀರಿಕೊಂಡು ಐದಾರು ವರ್ಷಗಳಾಗಿವೆ. ಮನೆಯ ಜವಾಬ್ದಾರಿ ತಾಯಿಯದೇ. ಅವಳೇನು ದುಡಿಯುವ ಹೆಣ್ಣಲ್ಲ. ಮಗ ಓದಿಯಾಗಿದೆ. ಇನ್ನೂ ಕೆಲಸ ಸಿಕ್ಕಿಲ್ಲ. ಮಗಳು ಅಷ್ಟೇನೂ ಓದಿಲ್ಲ, ಕೆಲಸವೋ, ಮದುವೆಯೋ ಏನೊಂದೂ ಗೊತ್ತಿಲ್ಲ. ಮೈದುನ ಜೊತೆಗೇ ಇದ್ದಾನೆ. ಅವನಿಗೆ ಮದುವೆಯಿಲ್ಲ, ಮಕ್ಕಳಿಲ್ಲ. ನಿಯಮಿತವಾದ ಸಂಪಾದನೆಯಿಲ್ಲ. ಮನೆಯಲ್ಲಿ ಒಂದಿಷ್ಟು ತರಕಾರಿ ಬೆಳೆಯುತ್ತಾರೆ. ಹೂ ಗಿಡಗಳಿವೆ. ಸ್ವಂತ ಮನೆ ಇರುವುದರಿಂದ ಹೇಗೋ ಕಾಲ ಕಳೀತಿದ್ದಾರೆ. ಮಗ ಇಷ್ಟೋ ಅಷ್ಟೋ ಓದಿದಾನೆ. ಮುಂದೆ ಓದೋದು ಕಷ್ಟ. ಏನಾದರೂ ಕೆಲಸ ಹುಡುಕಬೇಕು. ಯಾವುದೂ ಆಗುತ್ತಿಲ್ಲ. ಅಲ್ಲಿ ಇಲ್ಲಿ ಓಡಾಡುತ್ತಲೇ ಇರುತ್ತಾನೆ. ಮಗ ಏನೋ ಮಾಡ್ತಾ ಇದಾನೆ, ಇವತ್ತಲ್ಲ ನಾಳೆ ಏನಾದರೂ ಒಂದು ಕೆಲಸ ಸಿಕ್ಕೇ ಸಿಗುತ್ತೆ ಅಂತ ಮನೆಯಲ್ಲಿ ಎಲ್ಲರೂ ಹಾತೊರೀತಿದ್ದಾರೆ. ಮನೆಯಲ್ಲಿ ಎಲ್ಲರೂ ಎಲ್ಲಾ ದಿನವೂ ಹೊಟ್ಟೆ ತುಂಬಾ ಊಟ ಮಾಡ್ತಾರೆ ಅಂತಿಲ್ಲ. ಅದರಲ್ಲೂ ಕೊನೆಗೆ ಊಟ ಮಾಡುವ ತಾಯಿಗಂತೂ ಎಷ್ಟಿದ್ದರೆ ಅಷ್ಟೇ. ಮಗಳು ಅಮ್ಮಾ ನಿಂಗೆ ಅನ್ನ ಇದೆ ತಾನೇ ಅಂತ ಕೇಳಿದ್ರೆ ಇದೆ ಕಣೆ ಅಂತಾಳೆ. ಮಗಳು ಬಿಟ್ಟು ನಿನಗೆ ಅನ್ನ ಇದೆಯಾ ಅಂತ ಇನ್ಯಾರೂ ಕೇಳೋದಿಲ್ಲ. ಇಬ್ಬರು ಮಕ್ಕಳಿಗೂ ಮೈದುನನಿಗೂ ಊಟ ಆದರೆ ಆಯಿತು ಅಂತ ತಾಯಿ ಅಭಿಮತ. ಒಂದೊಂದು ದಿನ, ಬಹಶಃ ತಿಂಗಳಲ್ಲಿ ಬಹಳಷ್ಟು ದಿನ ತಾಯಿಗೆ ಅರ್ಧ ಹೊಟ್ಟೆ ಊಟ ಅಂತ ಮಗಳಿಗೆ ಮಾತ್ರ ಗೊತ್ತು.

ಅವತ್ತು ಸಂಜೆ ಮಗ ಎಲ್ಲಿಗೋ ಹೊರಟ. ಅಮ್ಮ ಬರೋದು ಸ್ವಲ್ಪ ಲೇಟಾಗುತ್ತೆ, ಯಾರನ್ನೋ ನೋಡ್ಕೊಂಡು ಬರಬೇಕು ಅಂದು ಹೊರಟ. ಹಾಗೆ ಹೊರಟವನು ನೋಡಿದ್ದು ಟೆಂಟ್‌ನಲ್ಲಿ ನಡೀತಾ ಇದ್ದ ಸಿನಿಮಾನ. ನಡುವೆ ಕಡ್ಲೆಕಾಯಿ ತಿಂದ. ಮದ್ಯಂತರದಲ್ಲಿ ಬಾಳೆ ಕಾಯಿ ಬಜ್ಜಿ ಕಟ್ಟಿಸಿಕೊಂಡು ಹೋಗಿ ಸಿನಿಮಾ ನೋಡ್ತಾ ತಿಂದ. ಅವತ್ತು ಇದ್ದಕ್ಕಿದ್ದಂತೆ ಕರೆಂಟು ಮೂರು ನಾಲ್ಕು ಸಾರಿ ಕೈ ಕೊಟ್ಟಿದ್ರಿಂದ ಒಂಭತ್ತು ಗಂಟೆಗೆ ಬಿಡೋ ಸಿನಿಮಾ ರಾತ್ರಿ ಹನ್ನೊಂದು ಗಂಟೆಗೆ ಬಿಡ್ತು. ಹೊಟ್ಟೆ ಬೇರೆ ಹಸಿತಾ ಇತ್ತು. ಬೇಗ ಬೇಗ ಮನೆಗೆ ಬಂದ. ತಾಯಿ ಇನ್ನೂ ಮಲಗಿರಲಿಲ್ಲ. ಮಗ ಬಟ್ಟೆ ಬದಲಾಯಿಸಿ ಕೈ ಕಾಲು ತೊಳೆದು ಬರೋದ್ರಲ್ಲಿ ತಟ್ಟೆ ಹಾಕಿದ್ದಳು. ಮಗ ಚೆನ್ನಾಗಿ ಬಾರಿಸೋಣ ಅಂತ ತಟ್ಟೆ ಮುಂದೆ ಕೂತ. ತಾಯಿ ಅನ್ನ ಬಡಿಸುವಾಗ ಪಾತ್ರೆಗೆ ಕೈ ತಗುಲಿ ಸದ್ದಾಗಿ ಅನ್ನ ಇರೋದು ಸ್ವಲ್ಪವೇ ಅನ್ನೋದು ಸೂಚಿಸಿತು. ಪಾತ್ರೆನಲ್ಲಿ ಇದ್ದ ಅನ್ನಾನೆಲ್ಲಾ ಮಗನ ತಟ್ಟೆಗೆ ಬಡಿಸಿದಳು. ಮಗನಿಗೆ ಎಗ್ಗಾ ಮಗ್ಗಾ ಕೋಪ ಬಂತು. ಇದೇನು ಎಲ್ಲಾರೂ ಊಟ ಮಾಡಿ ನನಗೆ ಇಷ್ಟೇ ಅನ್ನ ಇಟ್ಟಿದಾರೆ ಅಂತ ತಾಯಿ ತಟ್ಟೆಗೆ ಬಡಿಸಿದ ಅನ್ನನ ಸಾರಿನಲ್ಲಿ ಕಲಸಿಕೊಂಡು ತುತ್ತು ಮಾಡಿ ನುಂಗಿ ಎದ್ದೇ ಬಿಟ್ಟ. ತಾಯಿ ಏನಾದರೂ ಹೇಳೋಣ ಅನ್ನೋಷ್ಟರಲ್ಲಿ ಮಗ ತಟ್ಟೆ ಕುಕ್ಕಿ, ಲೋಟ ಜಜ್ಜಿ ಬಚ್ಚಲು ಮನೇಲಿ ಬಕೀಟು ಎತ್ತಿ ಹಾಕಿ ಬಾಗಿಲನ್ನು ದಬಾರನೆ ಹಾಕಿ

ತನಗೆ ಬಂದಿರುವ ಕೋಪಾನೆಲ್ಲಾ ತೋರಿಸಿದ. ಮುಖ ಅಸಹನೆಯಿಂದ ಕುದಿಯುತ್ತಿತ್ತು. ತಾಯಿಗೆ ಚೆನ್ನಾಗಿ ಬೈಯ್ಯಬೇಕು ಅನಿಸಿದರೂ ಬಾಯಿ ಬರಲಿಲ್ಲ. ತಾಯಿ ಮಗನ ಆರ್ಭಟ ನೋಡಿ ನಿಟ್ಟುಸಿರು ಬಿಟ್ಟು ಒಂದು ಲೋಟ ನೀರು ಕುಡಿದು ಮಲಗಿದಳು. ವರಾಂಡದ ಒಂದು ಕೊನೆಗೆ ಮಲಗಿದ್ದ ಮಗ ಇನ್ನೂ ಭುಸುಗುಡುತ್ತಿದ್ದ. ಒಂದು ಕಡೆ ಮಗನಿಗೂ ನಿದ್ದೆ ಬರಲಿಲ್ಲ, ಇನ್ನೊಂದು ಕಡೆ ತಾಯಿಗೂ ನಿದ್ದೆ ಬರಲಿಲ್ಲ.

ಮರುದಿನ ಬೆಳಗಾದಾಗ ತಾಯಿಗೆ ಯಥಾಪ್ರಕಾರ ಮನೆಗೆಲಸ. ನೋಡಿದರೆ ಕಾಫಿ ಪುಡೀನೇ ಇಲ್ಲ. ಪಕ್ಕದ ಮನೆಯವರ ಹತ್ತಿರ ಕಾಫಿ ಪುಡಿ ಕೇಳಿ ತಂದಳು. ಅವರು ಮೀನಾಕ್ಷಮ್ಮ ಇರಿ ಒಂದು ತೊಟ್ಟು ಕಾಫಿ ಕೊಡ್ತೀನಿ ಕುಡ್ಕೊಂಡು ಹೋಗ್ತೀರಂತೆ ಅಂದ್ರೆ, ಬೇಡ ಮಕ್ಕಳದ್ದು ಕಾಫಿ ಆಗಿಲ್ಲ, ಹೀಗಿರುವಾಗ ನಾನು ಇಲ್ಲಿ ಕೂತು ಕಾಫಿ ಕುಡಿದರೆ ಏನು ಚೆನ್ನ ಅಂದು ಹಾಗೇ ಬಂದು ಡಿಕಾಕ್ಷನ್ ಹಾಕಿ ಹಾಲು ಕಾಯಿಸಿ ಕಾಫಿ ಮಾಡಿ ಎಲ್ಲರಿಗೂ ಕೊಟ್ಟಳು. ಹಿಂದಿನ ರಾತ್ರಿ ಸಿಟ್ಟು ಮಾಡಿಕೊಂಡು ಮಲಗಿದ್ದ ಮಗ ಇನ್ನೂ ಹಾಗೇ ಇದ್ದ. ಮಗನಿಗೆ ಕಾಫಿ ಕೊಟ್ಟ ತಾಯಿ ''ನೆನ್ನೆ ಅದ್ಯಾರ್ನೋ ನೋಡೋಕೆ ಹೋಗಿದ್ಯಲ್ಲ, ಸಿಕ್ಕಿದ್ರಾ, ಕೆಲಸದ ವಿಚಾರ ಏನಾದರೂ ತಿಳೀತಾ'' ಅಂತ ಕೇಳಿದಳು. ಸಿಟ್ಟಿನಿಂದಲೇ ಇಲ್ಲ ಅಂದ. ಪಾಪ ತಾಯಿಗೆ ತನ್ನ ಮಗ ಹಿಂದಿನ ರಾತ್ರಿ ಎಲ್ಲಿ ಹೋಗಿದ್ದ ಅನ್ನೋದು ತಿಳಿದಿರಲಿಲ್ಲ. ಕಾಫಿ ಕುಡೀತಾ ಅವನ ತಂಗಿ ಹೇಳಿದಳು, ''ಲೋ ಪ್ರಕಾಶ, ಬೇಡದಿರೋ ಪೇಪರ್‌ಗಳನ್ನೆಲ್ಲಾ ತೆಗೆದಿಟ್ಟಿದೀನಿ ಕಾಫಿ ಆದ ಮೇಲೆ ಅದನ್ನು ಅಂಗಡಿಗೆ ಮಾರಿ ಅಕ್ಕಿ ಬೇಳೆ ಎಲ್ಲಾ ತಗೊಂಡು ಬಾ ಇಲ್ಲದಿದ್ರೆ ಇವತ್ತು ಊಟಾನೇ ಇಲ್ಲ'' ಅಂದಳು. ಪ್ರಕಾಶ ''ಯಾಕೇ, ಚಿಕ್ಕಪ್ಪ ನೆನ್ನೆ ಮನೆಗೆ ಬೇಕಾದ ಪ್ರಾವಿಷನ್ ಎಲ್ಲಾ ತರ್ತೀನಿ ಅಂದಿದ್ರಲ್ಲ'' ಅಂದ. ಅಷ್ಟೊತ್ತಿಗೆ ಅಲ್ಲಿಗೆ ಬಂದ ಚಿಕ್ಕಪ್ಪ ''ಇಲ್ಲಪ್ಪ ನೆನ್ನೆ ಅವರು ಹಣ ಕೊಡಲಿಲ್ಲ. ನಾಳೆ ಕೊಡ್ತೀನಿ ಅಂದಿದಾರೆ. ಹಾಗೆ ನನಗೆ ಒಂದು ಕೆಲಸಾನೂ ಕೊಡ್ತಾರಂತೆ. ಮುಂದಿನ ತಿಂಗಳಿನಿಂದ ಅಷ್ಟೊಂದು ತಾಪತ್ರಯ ಇರೋಲ್ಲ. ಹಾಗೆ ನಿನಗೂ ಒಂದು ಕೆಲಸ ನೋಡಿ ಅಂತ ಹೇಳಿದೀನಿ. ಇವತ್ತು ಹೇಗಾದರೂ ಮಾಡಿ ನಾವು ಹೊಟ್ಟೆ ಹೊರೀಬೇಕು'' ಅಂದ.

ಮಗ ಪೇಪರ್‌ಗಳನ್ನು ಜೋಡಿಸ್ತಿದ್ದಾಗ ಅವನ ತಂಗಿ ಹೇಳಿದಳು, ''ಪ್ರಕಾಶ ಸ್ವಲ್ಪ ಬೇಗ ಹೋಗಿ ಬಾರೋ, ಅಮ್ಮನಿಗೆ ತುಂಬಾ ಹಸಿವಾಗಿರಬೇಕು. ನೆನ್ನೆ ಮಧ್ಯಾಹ್ನ ಅವಳು ಊಟ ಮಾಡಿದ್ದು ಆಮೇಲೆ ಇನ್ನೇನೂ ತಿಂದೇ ಇಲ್ಲ'' ಅಂದಳು. ''ಯಾಕೆ ರಾತ್ರಿ ಊಟ ಮಾಡಿರ್ಲಿಲ್ವಾ'' ಅಂತ ಕೇಳಿದ. ''ಇಲ್ಲ ಕಣೋ ಅಕ್ಕಿ ಇದ್ದಿದ್ದೇ ಸ್ವಲ್ಪ. ಹಾಗಂತ ಅವಳು ನಮಗ್ಯಾರಿಗೂ ಹೇಳೇ ಇಲ್ಲ. ನಾನು, ಚಿಕ್ಕಪ್ಪ ಇಬ್ಬರೂ ಊಟ ಮಾಡಿದೆವು. ನೀನೂ ಮಾಡು ಅಂದ್ರೆ ಪ್ರಕಾಶನೂ ಬರ್ಲಿ ಅಂದಳು. ಆಮೇಲೆ ನೋಡಿದರೆ ಬಂದು ಹಾಗೇ ಮಲಗಿದಳು. ಅಮ್ಮಾ ನೀನು ಊಟ ಮಾಡು ಪ್ರಕಾಶ ಬಂದು ಊಟ ಮಾಡಿ ಮಲ್ಕೊತಾನೆ ಅಂದೆ. ಅದಕ್ಕೆ ಅಮ್ಮ ಅನ್ನ ಇರೋದೇ ಸ್ವಲ್ಪ ಅದು ಅವನ ಹೊಟ್ಟೆಗೇ ಸಾಲ್ದು. ಇನ್ನು ನಾನೂ ಅದರಲ್ಲಿ ಸ್ವಲ್ಪ ಊಟ ಮಾಡಿಬಿಟ್ಟರೆ ಅವನಿಗೆ ಯಾವ ಮೂಲೆಗೂ ಆಗಲ್ಲ ಅಂದು ಹಸಿದುಕೊಂಡೇ ಮಲಗಿದಳು. ಪಾಪ ಹಸಿವಿಂದ ಅಮ್ಮ ರಾತ್ರಿ ನಿದ್ದೆನೂ ಮಾಡಿದ ಹಾಗಿಲ್ಲ. ಅದಕ್ಕೆ ಬೇಗ ಹೋಗಿ ಬಾರೋ'' ಅಂದಳು. ಇದ್ದಕ್ಕಿದ್ದಂತೆ ಪ್ರಕಾಶನಿಗೆ ಅಳು ಬಂತು. ಹಿಂದಿನ ದಿನ ನೋಡಿದ ಸಿನಿಮಾ, ತಿಂದ ಕಡ್ಲೆಕಾಯಿ, ಬಜ್ಜಿ ಎಲ್ಲಾ ನೆನಪಾಗಿ ಹೊಟ್ಟೆ ಉರಿದುಹೋಯಿತು. ತಾನು ಊಟಕ್ಕೆ ಕೂತಾಗ ಸಿಟ್ಟು ಮಾಡಿದ್ದು, ತಟ್ಟೆ ಕುಕ್ಕಿದ್ದು, ಲೋಟ

ಎತ್ತಿಹಾಕಿದ್ದು, ಬಕೀಟು ಬೀಳಿಸಿದ್ದು, ಎಲ್ಲಾ ನೆನಪಾಗಿ ಥತ್ತೇರಿಕೆ ಅನಿಸಿಬಿಟ್ಟಿತು. ಅಮ್ಮನ ಊಟ ಆಗಿಲ್ಲ ಅಂತ ಗೊತ್ತಾಗಿದ್ರೆ ಇರೋದ್ರಲ್ಲೇ ಇಬ್ಬರೂ ಒಂದೊಂದು ತುತ್ತು ತಿಂದು ಮಲಗಬಹುದಾಗಿತ್ತಲ್ಲ ಅನಿಸಿತು.

ಅಮ್ಮನ ಮುಖ ಕಂಡ ತಕ್ಷಣ ಅಳು ಬಂತು. ಇದ್ಯಾಕೋ ಅಳ್ತಿದೀಯ ಏನಾಯ್ತು ಅಂತ ಅಮ್ಮ ಕೇಳಿದರೆ ಅವನ ಬಾಯಿಂದ ಮಾತೇ ಹೊರಡಲಿಲ್ಲ. ನಾವು ಮಕ್ಕಳು ಮಾಡೋದು ಇದೇ ಕೆಲಸ. ಯಾವತ್ತೂ ತಾಯಿನ ಅರ್ಥ ಮಾಡ್ಕೊಳೋ ಪ್ರಯತ್ನ ಮಾಡೋದೇ ಇಲ್ಲ. ನಾನು ಉಪವಾಸ ಇದ್ರೂ ಪರವಾಗಿಲ್ಲ ಮಗನಿಗೆ ಅರ್ಧ ಹೊಟ್ಟೆ ಊಟನಾದ್ರೂ ಸಿಗ್ಲಿ ಅಂತ ಬಯಸ್ತಾಳಲ್ಲ ಅದಿಕ್ಕೇ ಅವಳನ್ನು ತಾಯಿ ಅನ್ನೋದು. ಹಿಂದಿನ ರಾತ್ರಿ ಊಟಕ್ಕೆ ಕೂತಾಗ ಅಮ್ಮನನ್ನು ನಿನ್ದು ಊಟ ಆಯ್ತೇನಮ್ಮ ಅಂತ ಒಂದು ಮಾತು ಕೇಳಬಹುದಾಗಿತ್ತು. ನಾನು ಕೇಳಲಿಲ್ಲ. ಅದಕ್ಕೆ ನನ್ನನ್ನು ಮಗ ಅನ್ನೋದು. ಅಥವಾ ಅವಳ ಮುಖ ನೋಡಿ ಅವಳದು ಊಟ ಆಗಿಲ್ಲ, ಹಸಿದುಕೊಂಡಿದಾಳೆ ಅಂತ ಅರ್ಥ ಮಾಡ್ಕೊಳೋ ಪ್ರಯತ್ನ ಮಾಡಬಹುದಾಗಿತ್ತು. ಅದೂ ಮಾಡಲಿಲ್ಲ. ಅವಳು ಹೊಟ್ಟೆ ಬಿರಿಯಾ ತಿಂದು ನನಗೆ ಮಾತ್ರ ಇಷ್ಟೆ ಅನ್ನ ಉಳಿಸಿದಾಳೆ ಅಂತ ಊಹಿಸಿಕೊಂಡುಬಿಟ್ಟೆ. ತಾನು ಮಾತ್ರ ಹೊಟ್ಟೆ ಭರ್ತಿ ಊಟ ಮಾಡಿ ಮಕ್ಕಳಿಗೆ ಮಾತ್ರ ಅರ್ಧಹೊಟ್ಟೆ ಊಟ ಹಾಕೋ ತಾಯಿನ ಇಡೀ ಪ್ರಪಂಚ ಹುಡುಕಿದರೂ ಸಿಗೋದಿಲ್ಲ. ಸಾವಿಲ್ಲದ ಮನೆಯ ಸಾಸಿವೆಯ ಹಾಗೇ ಇದೂನೂ.

ಪ್ರಕಾಶ ಬೇಗ ಬೇಗ ಹೋಗಿ ಪೇಪರ್ ಮಾರಿ ಬಂದ ದುಡ್ಡಿಂದ ಮನೆಗೆ ಬೇಕಾದ ಅಕ್ಕಿ ಬೇಳೆ ಎಲ್ಲಾ ತಂದ. ತಾಯಿ ಅಡಿಗೆ ಸಿದ್ದ ಮಾಡಿದಳು. ತಟ್ಟೆ ಹಾಕಿದಾಗ ಪ್ರಕಾಶ ಹೇಳಿದ. ''ಅಮ್ಮಾ ಇದೊಂದು ದಿನ ನಾನು ಊಟ ಬಡಿಸ್ತೀನಿ ನೀವೆಲ್ಲ ಊಟ ಮಾಡಿ ಆಮೇಲೆ ನಾನು ಮಾಡ್ತೀನಿ'' ಅಂದ. ತಾಯಿ ಬೇಡ ಅಂತ ಎಷ್ಟು ಹೇಳಿದರೂ ಕೇಳದೇ ತಾಯಿನ ಊಟಕ್ಕೆ ಕೂರಿಸಿ ಚಿಕ್ಕಪ್ಪ, ತಂಗಿ ಜೊತೆಗೆ ಅಮ್ಮನಿಗೂ ಊಟ ಬಡಿಸಿದ. ಅಮ್ಮ ಅನ್ನ ಕಲಸಿ ಒಂದು ತುತ್ತು ಬಾಯಿಗೆ ಇಟ್ಕೊಂಡಾಗ ಅವನ ಮನಸ್ಸಿಗೆ ತುಸು ನೆಮ್ಮದಿ. ದೇವರೇ ನನಗೆ ಬೇಗ ಕೆಲಸ ಸಿಗಲಪ್ಪಾ ಅಂತ ಬೇಡಿದ. ಅಮ್ಮ ಹುಳೀಲಿ, ಸಾರಲ್ಲಿ, ಮಜ್ಜಿಗೇಲಿ ಒಂದೊಂದು ತುತ್ತು ಕಲಸಿ ಬಾಯಿಗೆ ಇಟ್ಕೊಕಾ ಇದ್ದಾಗ ಪ್ರಕಾಶನ ಹೊಟ್ಟೆಯೂ ತುಂಬುತ್ತಾ ಇತ್ತು. ❑



# ಪಿನ್ ಡ್ರಾಪ್ ಸೈಲೆನ್ಸ್

**- ಕೆ.ಎಲ್. ರಾಮದಾಸ್**

ನಿಮಗೆ ಪಿನ್ ಡ್ರಾಪ್ ಸೈಲೆನ್ಸ್ ಎಂದರೆ ಗೊತ್ತೆ?

ಗುಜರಾತಿನ ಅಹಮದಾಬಾದಿನಲ್ಲಿ ಒಂದು ದಿನ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಬಹಿರಂಗ ಸಭೆ ಉದ್ದೇಶಿಸಿ ಭಾಷಣ ಮಾಡಲು ಎದ್ದರು. ಇಂಗ್ಲಿಷ್‌ನಲ್ಲಿ ಮಾತು ಪ್ರಾರಂಭಿಸಿದ ತಕ್ಷಣ ಜನರೆಲ್ಲ 'ಗುಜರಾತಿಯಲ್ಲಿ ಮಾತನಾಡಿ, ಗುಜರಾತಿಯಲ್ಲಿ ಮಾತನಾಡಿ' ಎಂದು ಕೂಗಾಡಲಾರಂಭಿಸಿದರು. ಮಾತು ನಿಲ್ಲಿಸಿ, ಸಭಿಕರನ್ನು ದುರುಗುಟ್ಟಿಕೊಂಡು ನೋಡಿ 'ಗೆಳೆಯರೆ, ನಾನು ಅನೇಕ ಯುದ್ಧಗಳಲ್ಲಿ ಹೋರಾಡಿದ್ದೇನೆ. ಸಿಖ್ ರೆಜಿಮೆಂಟ್‌ನಿಂದ ಪಂಜಾಬಿ ಕಲಿತೆ, ಮರಾಠಾ ರೆಜಿಮೆಂಟ್‌ನಿಂದ ಮರಾಠಿ ಕಲಿತೆ, ಮದ್ರಾಸ್ ಸ್ಯಾಪರ್ಸ್‌ನಿಂದ ತಮಿಳು ಕಲಿತೆ, ಬೆಂಗಾಲ್ ಸ್ಯಾಪರ್ಸ್‌ನಿಂದ ಬೆಂಗಾಳಿ ಕಲಿತೆ, ಬಿಹಾರ್ ರೆಜಿಮೆಂಟಿನವರು ಹಿಂದಿ ಕಲಿಸಿದರು, ಗೂರ್ಖಾ ರೆಜಿಮೆಂಟಿನಿಂದ ನೇಪಾಳಿ ಕಲಿತೆ. ಆದರೆ ದುರಾದೃಷ್ಟವಶಾತ್ ಯಾವ ಗುಜರಾತಿ ಯೋಧನೂ ಇರಲಿಲ್ಲ ಇಲ್ಲದಿದ್ದರೆ ಗುಜರಾತಿ ಕಲಿಯಬಹುದಿತ್ತು' ಎಂದರು.

ಆಗ ಸಭೆ ಮೌನ.

ಪಿನ್ ಡ್ರಾಪ್ ಸೈಲೆನ್ಸ್ ಅಂದರೆ ಅದೇ.

★★★

ಭಾರತ ಸ್ವತಂತ್ರವಾದ ಮೇಲೆ ನಿಯೋಜಿತ ಪ್ರಧಾನಿ ನೆಹರು ಹಿರಿಯ ಸೈನ್ಯಾಧಿಕಾರಿಗಳ ಸಭೆ ಕರೆದರು. ಭಾರತದ ಸೈನ್ಯದ ಪ್ರಥಮ ದಂಡಾಧಿಕಾರಿಯನ್ನು ಆಯ್ಕೆ ಮಾಡುವ ಬಗ್ಗೆ ಚರ್ಚೆ ಮಾಡುವುದಿತ್ತು. 'ನಮ್ಮಲ್ಲಿ ಅನುಭವಿಗಳು ಯಾರೂ ಇಲ್ಲ ಆದುದರಿಂದ ಸದ್ಯಕ್ಕೆ ಒಬ್ಬ ಬ್ರಿಟಿಷ್ ಅಧಿಕಾರಿಯನ್ನೇ ನೇಮಿಸೋಣ' ಎಂದರು ನೆಹರು. ಅಲ್ಲಿದ್ದ ಎಲ್ಲರೂ ಬ್ರಿಟಿಷರ ಕೈಕೆಳಗೇ ಕೆಲಸ ಮಾಡಿದ್ದರಿಂದ ಆ ಸಲಹೆಗೆ ಅನುಮೋದನೆ ಸಿಗುವುದರಲ್ಲಿತ್ತು. ಆಗ ನಾಥುಸಿಂಗ್ ರಾಥೋಡ್ ಎಂಬ ಹಿರಿಯ ಅಧಿಕಾರಿ ಮಾತಾಡಲು ಅನುಮತಿ ಕೇಳಿದರು. ಅವರು ತೋರಿದ ಆ ಧೈರ್ಯಕ್ಕೆ ನೆಹರು ಚಕಿತರಾದರೂ ನಿರ್ಭಿಡೆಯಿಂದ ಮಾತಾಡಲು ರಾಥೋಡ್‌ಗೆ ಹೇಳಿದರು.

ರಾಥೋಡ್ : ಸರ್, ನಮ್ಮಲ್ಲಿ ದೇಶ ನಡೆಸಲು ಅನುಭವದ ಕೊರತೆ ಇದೆ. ಆದುದರಿಂದ ಒಬ್ಬ ಬ್ರಿಟಿಷನನ್ನೇ ಭಾರತದ ಪ್ರಧಾನಿ ಆಗಿ ನೇಮಿಸಿದರೆ ಹೇಗೆ?

ಆಗ ಸಭೆಯಲ್ಲಿ ಪಿನ್ ಡ್ರಾಪ್ ಸೈಲೆನ್ಸ್.

ನೆಹರು : ನೀವು ಹುದ್ದೆ ವಹಿಸಿಕೊಳ್ಳಲು ತಯಾರೆ?

ರಾಥೋಡ್ : ಇಲ್ಲ ಸರ್, ನನ್ನ ಸೀನಿಯರ್ ಲೆ.ಜ. ಕಾರಿಯಪ್ಪ ಸಮರ್ಥರು. ಅವರಿಗೇ ಆ ಹುದ್ದೆ ಲಭಿಸಬೇಕು.

ಹಾಗೇ ಆಯಿತು.

★★★

83 ವರ್ಷದ ರಾಬರ್ಟ್ ವೈಟಿಂಗ್ ಎಂಬಾತ ಪ್ಯಾರಿಸ್ ವಿಮಾನ ನಿಲ್ದಾಣ ಇಳಿದ. ಕಸ್ಟಂಸ್ ವಿಭಾಗದಲ್ಲಿ ನಿಂತು ತನ್ನ ಪಾಸ್‌ಪೋರ್ಟಿಗಾಗಿ ತಡಕಾಡಿದ. ಆಗ ಕಸ್ಟಂಸ್ ಅಧಿಕಾರಿ ನೀವು ಪ್ಯಾರಿಸ್‌ಗೆ ಈ ಹಿಂದೆ ಬಂದಿದ್ದರಲ್ಲವೆ? ಎಂದು ಕೇಳಿದ.

ಹೌದು ಎಂದ ವೈಟಿಂಗ್.

'ಹಾಗಿದ್ದರೆ ಇಳಿದ ತಕ್ಷಣ ಪಾಸ್‌ಪೋರ್ಟ್ ರೆಡಿಯಾಗಿ ಇಟ್ಟುಕೊಂಡಿರಬೇಕು ಎಂದು ನಿಮಗೆ ಗೊತ್ತಿರಬೇಕಲ್ಲವೆ?'

ಕಳೆದ ಬಾರಿ ನಾನು ಇಲ್ಲಿಗೆ ಬಂದಾಗ ನಾನು ಯಾರಿಗೂ ಪಾಸ್‌ಪೋರ್ಟ್ ತೋರಿಸಬೇಕಿರಲಿಲ್ಲ ಎಂದ ವೈಟಿಂಗ್.

ಅದು ಅಸಾಧ್ಯ. ಅಮೆರಿಕನ್ನರು ಪಾಸ್‌ಪೋರ್ಟ್ ತೋರಿಸದೆ ಫ್ರಾನ್ಸ್‌ನೊಳಗೆ ಪ್ರವೇಶಿಸಲು ಸಾಧ್ಯವೇ ಇಲ್ಲ ಎಂದು ಅಧಿಕಾರಿ ಜರಿದ.

ಹೌದೆ? ಆದರೆ 1944ರಲ್ಲಿ ನಿಮ್ಮ ದೇಶವನ್ನು ಹಿಟ್ಲರ್‌ನಿಂದ ಪಾರುಮಾಡಲು ನಾನು ಇಲ್ಲಿಗೆ ಬಂದಾಗ ಪಾಸ್‌ಪೋರ್ಟ್ ಕೇಳಲು ಯಾರೂ ಇರಲೇ ಇಲ್ಲವಲ್ಲ? ಎಂದಾಗ ಕಸ್ಟಂಸ್ ವಿಭಾಗದಲ್ಲಿ ಪಿನ್ ಡ್ರಾಪ್ ಸೈಲೆನ್ಸ್.

*(ಇಂಟರ್‌ನೆಟ್‌ನಿಂದ)*

❑



# ಯಕ್ಷ ಪ್ರಶ್ನೆ

**- ಎಚ್.ಆರ್. ಹನುಮಂತ ರಾವ್**

ಸ್ವರ್ಗದಲ್ಲಿ ಇಂದ್ರನ ಆಸ್ಥಾನದಲ್ಲಿ ನೆಮ್ಮದಿಯಾಗಿದ್ದ ಧರ್ಮದೇವತೆಯೆನಿಸಿಕೊಂಡ ಯುಧಿಷ್ಠಿರನಿಗೆ ಮಹಾವಿಷ್ಣು@ವೈಕುಂಠ ಡಾಟ್ ಕಾಮ್‌ನ ಹುಕುಮ್ಮೊಂದು ಐ-ಮೇಲ್ ಮೂಲಕ (ಐ = I = Indra = ಮಿಂಚು, ಮೇಲ್ = ಅಂಚೆ, ಅರ್ಥಾತ್ ಮಿಂಚಂಚೆ) ಕೈ ಸೇರಿತು. 'ನೀನು ಈ ಕೂಡಲೇ ಮಾನವ ರೂಪದಲ್ಲಿ ಭೂಮಿಗಿಳಿದು, ಒಂದು ಕಾಲದಲ್ಲಿ ನಿವೃತ್ತರ, ಸುಸಂಸ್ಕೃತರ ಸುಂದರ, ಶುಭ್ರ ಸ್ವರ್ಗವೆಂದೇ ಪ್ರಸಿದ್ಧಿಯಾಗಿದ್ದ ಬೆಂಗಳೂರೆಂಬ ಹೈಟೆಕ್ ನಗರ ಈಗಲೀಗ ಜನರ ಹಾಹಾಕಾರ, ಕೋಪ, ಕ್ರೌರ್ಯ, ಅಶೌಚದ, ಹೇಯ ಕೃತ್ಯಗಳಿಗೆ ಆಗರವಾಗಿದೆಯೆಂದು ವರದಿಗಳು ಬರುತ್ತಿವೆ. ಈ ಜನರ ಪೂರ್ವಾಪರ ಸ್ಥಿತಿಗತಿಯನ್ನು ಅಧ್ಯಯನ ಮಾಡಿ, ಆ ಬಗ್ಗೆ ಶೀಘ್ರ ಸಮೀಕ್ಷೆಯನ್ನು ಕಳುಹಿಸುವುದು. ಈಗಲೀಗಲೇ, ಅಲ್ಲಿಯ ಬೃಹತ್ ಬಕಾಸುರರ ಮಹಾ ಸಂಘದ ಚುನಾವಣೆಯೂ ನಡೆಯುವುದಿದೆ. ಶೋಷಿತ ಜನರ ಸಂಕಟ, ಗೋಳಾಟಗಳೇನು, ಪ್ರಜೆಗಳು ಯೋಗ್ಯ, ಅಯೋಗ್ಯರೆನ್ನದೆ, ಆಮಿಷಗಳನ್ನು ಒಡ್ಡುವವರಿಗೆ ಕಂಡಾಪಟ್ಟೆ ವೋಟು ಕೊಟ್ಟು ತಮ್ಮ ತಲೆಯ ಮೇಲೆ ತಾವೇ ಚಪ್ಪಡಿ ಎಳೆದುಕೊಳ್ಳುವರೋ, ಇಲ್ಲವೆ ಯೇಮಾರದೇ, ವೋಟ ಪಡೆದವರು ತಮ್ಮ ಮಾತಿನಂತೆ ನಡೆಯಬಲ್ಲವರನ್ನ ಆರಿಸುವರೋ ಹೇಗೆಂದು, ಜನರ ಮನವನ್ನ ಅರಿತುಕೊ, ನಗರವನ್ನು ಹರಿದು, ಹಂಚಿ, ಹೋಳುಮಾಡಲು ಹೊರಟವರ ಇಲ್ಲವೇ ಹಾಗೆ ಮಾಡದೆಯೂ ತಾವೇ ಚೆನ್ನಾಗಿ ಮೇಯ್ದು, ಜನರ ಬಾಯಿಗೆ ಕೈ ಒರಸುವಂತಹವರ ಹಿಂದೆ ಹೋಗುವರೋ ಅಥವಾ ಪ್ರಾಮಾಣಿಕರನ್ನು ಗುರುತಿಸಬಲ್ಲ ಇಚ್ಛಾಶಕ್ತಿ ಹೊಂದಿರುವರೋ ಅಧ್ಯಯನ ಮಾಡು. ''ಅಬ್ಬರದ ಪ್ರಚಾರಗಳಿಂದ ದೂರವಿದ್ದು, ಭೂಲೋಕದ ಎನ್‌ಕ್ವಯಿರಿ ಕಮೀಷನ್ನಗಳ ವರದಿಗಳಂತಾಗದೆ, ವಾಸ್ತವವನ್ನು ನಿನ್ನ ರಿಪೋರ್ಟಿನಲ್ಲಿ ಬಿಂಬಿಸು'' ಎಂಬ ಷರಾ ಜೊತೆಗೆ ಸೇರಿಸಿದ್ದರು.

ಧರ್ಮಜ ಹೌಹಾರಿದ. 'ಹೋದೆಯಾ ಮಾರಿ, ಉಸ್ಸಪ್ಪ,' ಅಂತಿದ್ದರೆ, 'ಹಿತ್ಲಲ್ಲೇ ಇರುವೆ, ಇಗೋ ಛಾವಣಿ ಮೇಲಿಂದ ಲಾವಣಿ ಹಾಡುತ್ತಾ ಬಂದೆ' ಅನ್ನೋ ತರಾ ಆಗೋಯ್ತಾ? ಈ ಧರ್ಮನಂದನ ದ್ವಾಪರದ ನಂತರ ಯಾವ ಕೌರವ, ಶಕುನಿಗಳ ಕಾಟಕ್ಕೆ ಸಿಕ್ಕಿಕೊಳ್ಳದೆ, ಬರೀ ಕಣ್ಣೊಂದೇ ಅಲ್ಲದೆ ಹೃದಯ, ಮನಸ್ಸು ಕೂಡ ಕುರುಡಾಗಿದ್ದ ದೃತರಾಷ್ಟ್ರನಂತಹವರ ಕೈಗೂ ಸಿಕ್ಕದೆ, ಚುಚ್ಚಿ, ಚುಚ್ಚಿ, ಹಂಗಿಸಿ ಮಾತಾಡುವ ದ್ರೌಪದಿಯ ಬಾಯಿಗೂ ಬೀಳದೆ ನೆಮ್ಮದಿಯಾಗಿ ಅಪ್ಸರೆಯರ ನೃತ್ಯ, ಸೌಂದರ್ಯವನ್ನ ಆಸ್ವಾದಿಸುತ್ತಾ, ಇತರ ದೇವ, ಋಷಿಗಣಗಳ ಜಿದ್ದಾಜಿದ್ದಿ, ಕೆರಳಿಸುವ ಮಾತುಗಳ ಇತ್ಯಾದಿ ಸರಸ-ವಿರಸಗಳನ್ನು ಆನಂದದಿಂದ ನೋಡಿ ನೆಮ್ಮದಿಯಾಗಿದ್ದವ.

'ತನಗ್ಯಾಕಿದ್ದೀತು ಈ ಭಂಡರ ರಾದ್ಧಾಂತ' ಎಂದು ಯೋಚಿಸುತ್ತ, ತಲೆ ಸಾಕಷ್ಟು ಕೆರೆದರೂ ಪ್ರಯೋಜನವಾಗಲಿಲ್ಲ. ಸ್ವಲ್ಪ ಯೋಚಿಸಿದರೆ, ಈಗಿನ ಇಲ್ಲಿನ ಅನೇಕ ಸರ್ಕಾರಗಳೂ ದುರ್ಯೋಧನನಂತೆ ದುಷ್ಟ ಚತುಷ್ಟಯರ ಸಂಗದಲ್ಲೋ ಅಥವಾ ಅದಕ್ಕೂ

ಹೆಚ್ಚಿನ ಕೆಟ್ಟ ಜನರ ಸಂಪರ್ಕ, ಶಕುನಿಯಂತಹ 'ಅತಿ ಮಾನವ' ಬುದ್ಧಿಜೀವಿಗಳ ಸಂಗ, ಸಮಾಲೋಚನೆ, ಆದೇಶ, ಉಪದೇಶಗಳನ್ನು ಪಡೆದು ಜನರನ್ನು ಆಳುವದಿದ್ದು, ಇದರಲ್ಲೇನು ಅತಿಶಯವೆಂದು ತಾನು ಈ ಕೆಲಸಕ್ಕೆ ಕೈ ಹಚ್ಚಬೇಕು? ಏನೂ ಹೊಳೆಯಲಿಲ್ಲ. ಹೋಗಲಿ, ನಾರದರನ್ನು ಕೇಳೋಣವೆಂದರೆ ಆತ, ಕಟ್ಟಾಗಿ, ಕೆಟ್ಟು ಕೂತಿದ್ದ ತನ್ನ ತಂಬೂರಿಯಿಂದ ಕೀರಲು ಧ್ವನಿ ಮಾತ್ರ ಹೊರಹೊಮ್ಮಿಸುತ್ತಾ, ಅಫ್ಘನಿಸ್ತಾನದಲ್ಲೋ, ಅಬು ದುಬೆಯಲ್ಲೋ, ವಿದೇಶಗಳಲ್ಲಿ ಮೋದಿ ಎಲ್ಲೆಲ್ಲಿ ಪ್ರವಾಸದಲ್ಲಿದ್ದರೋ ಅಲ್ಲಲ್ಲಿ ಸುತ್ತುತ್ತಿದ್ದವರು. ಹರಿನಾಮವನ್ನೂ ಆಗಾಗ್ಗೆ ತಪ್ಪಿದರೂ, ಟೆಂಟುಹಾಕುವದರಲ್ಲೇ ಮಗ್ನರಾಗಿದ್ದ ಇವರ ಬಳಿ ಜನ ಸಾಮಾನ್ಯನಾಗಿ ಹೋಗಿ, ಆ ಸ್ಥಳಗಳ ಕೀಚಕ, ಜರಾಸಂಧ, ಮಾರೀಚರಂತಹ ಉಗ್ರರಿಗೆ ತಾನು ಬಲಿಯಾಗುವುದು ಸರಿಯಲ್ಲವೆಂದು ಆ ಯೋಚನೆ ಬಿಟ್ಟನು. ಉಳಿದವರೆಂದರೆ ವಸಿಷ್ಠ, ವಿಶ್ವಾಮಿತ್ರಗಳು. ಮೂಗಿನ ಮೇಲೆಯೇ ಸದಾ ಕೋಪ ಇರುವ ವಿಶ್ವಾಮಿತ್ರರ ತಂಟೆಗೆ ಹೋಗುವುದೂ ಒಂದೇ, ಗಾಂಧಿ ತತ್ವಕ್ಕೇ ಈ ದೇಶದ ಜನ ಎಳ್ಳು ನೀರು ಬಿಡುತ್ತಿರುವಾಗ ಹರಿಶ್ಚಂದ್ರನಂತೆ ಇಲ್ಲದ ತಕರಾರುಗಳನ್ನು ತನ್ನ ಮೇಲೆಯೇ ಎಳೆದುಕೊಳ್ಳುವುದೂ ಒಂದೇ ಎಂದು ಯೋಚಿಸಿ ಅದನ್ನೂ ಕೈಬಿಟ್ಟ. ಹಲವಾರು ಟೀವಿ ಚಾನೆಲ್ಲುಗಳಲ್ಲಿ ತಪ್ಪದೆ ಗಡ್ಡಧಾರಿ, ಜರತಾರಿ ವಸ್ತ್ರಚ್ಛಾದಿತ, ನಾಮಧಾರಿ ಗುರುಗಳು – 'ಜಟಿಲೋ ಮುಂಡಿ, ಲುಂಛಿತ ಕೇಶ: ಕಾಶಾಯಮ್ಬರ, ಬಹು ಕೃತ ವೇಷ:' ಎಂಬ ಶಂಕರರ ಮಾತನ್ನು ಜ್ಞಾಪಿಸುವ ಮಹಾ ಮಹಾ ಋಷಿಗಳು ಆ ನಗರದಲ್ಲೇ ಇರುವಾಗ, ವಯೋವೃದ್ಧ ವಸಿಷ್ಟರನ್ನೇಕೆ ಈ ಹಂತದಲ್ಲಿ ಕಾಣಬೇಕೆಂದು ತರ್ಕಿಸಿ ಆ ವಿಚಾರವನ್ನು ಅಲ್ಲಿಗೇ ಬಿಟ್ಟ. ಸ್ವರ್ಗಕ್ಕೆ ಹೇಗೋ ದಾರಿ ಮಾಡಿಕೊಂಡು ಬಂದವರನೇಕ ಮಂದಿಯ ತುರ್ತು ಅಹವಾಲಿನ ಒತ್ತಡಕ್ಕೆ ಬಿದ್ದು, ಶೇಷಶಾಯಿಯಾಗಿ ಹಾಯಾಗಿರುವುದ ಬಿಟ್ಟು ಈ ಮಹಾ ವಿಷ್ಣು ಅರ್ಥಾತ್ ಶ್ರೀಕೃಷ್ಣ ತನ್ನನ್ನು ಎಡವಟ್ಟಿಗೆ ಸಿಕ್ಕಿಸುವುದು ಯಾವ ಸೌಭಾಗ್ಯಕ್ಕೆಂದು ಮೂಗನ್ನು ಉಜ್ಜಿಕೊಂಡ. ಮೂಗಿನ ಮೇಲೇ ಕೂತು ಕಿರಕು ಮಾಡುತ್ತಿದ್ದ ಸೊಳ್ಳೆಯನ್ನು ಓಡಿಸಲು ಹೋಗಿ, ಮೂಗಿಗಿನ್ನಷ್ಟು ಏಟು ಬೀಳಿಸಿಕೊಂಡದ್ದಷ್ಟೆ ಲಾಭ. ಬಿಬಿಎಂಪಿ ಸಾಕಿದ ಬೆಂಗಳೂರಿನ ನಾಯಿ, ಸೊಳ್ಳೆಗಳೆಂದರೆ ಸುಮ್ಮನೇ ಏನು? ಚಿಕನ್ ಗುನ್ಯಾ, ಡೆಂಗು ಜ್ವರ, ತಪ್ಪಿದರೆ ಟೈಫಾಯಿಡ್, ಕಾಲರ, ನಾಯಿ ಕೆಮ್ಮು ಅಂತಹ ವರಗಳನ್ನು ಕರುಣಿಸುವ, ಭ್ರಷ್ಟರಲ್ಲಿ ಭ್ರಷ್ಟರೆಂಬ ಪ್ರತ್ಯಕ್ಷ ದೇವರುಗಳಲ್ಲವೇ ಅವು ಕೂಡಾ?

ಒಂದು ಕಾಲದಲ್ಲಿ, ಯಕ್ಷರಿಗೆ ಸೇರಿದ ಸರೋವರದಲ್ಲಿ ನೀರು ಕುಡಿಯಲು ಹೋಗಿ ತನ್ನ ತಮ್ಮಂದಿರು ಮೂರ್ಛೆ ಹೋಗಿದ್ದು, ತಾನು ಆ ಯಕ್ಷರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತು, ಬಿಡಿಸಿಕೊಂಡಿದ್ದನ್ನ ಜ್ಞಾಪಿಸಿಕೊಂಡ, ಅದೇ ಧಾಟಿಯಲ್ಲೇ ಒಂದು ಯೋಜನೆಯನ್ನು ಸಿದ್ಧಪಡಿಸಿ, ತಾನೂ ಒಂದು ಪ್ರಶ್ನೆಮಾಲಿಕೆಯನ್ನು ತಯಾರಿಸಿದ. ತಾನೇ ಆರಿಸಿದ ಪ್ರಭಾವೀ ನೇತಾರರ, ವ್ಯಕ್ತಿಗಳ, ಸಾಮಾನ್ಯರ ಉತ್ತರವನ್ನು ಪಡೆದು, ಕೊನೆಗೆ ತನ್ನ ಅಂತಿಮ ವರದಿ ತಯಾರಿಸಿ ಮೇಲಕ್ಕೆ ಕಳುಹಿಸಿ ಕೈ ತೊಳೆದುಕೊಂಡನು. ಆ ಪ್ರಶ್ನೆಮಾಲಿಕೆಯೇನು? ಅದರಿಂದೇನು ಉಪಕಾರವಾಯಿತೆಂಬುದನ್ನ ತಿಳಿಯಲು ಕುತೂಹಲವಿದ್ದರೆ, ನಮ್ಮನ್ನು ಸಂಪರ್ಕಿಸದೆ, ವಿಷ್ಣುವಿಗೇ ನೇರವಾಗಿ ವೈಕುಂಠದ ವೆಬ್ಸೈಟ್ ಮೂಲಕ ಹೋಗಿ, ಆರ್‌ಟಿಐ ಹಕ್ಕಿನಡಿ ವಿಚಾರಿಸಿಕೊಳ್ಳಲು ನಮ್ಮ ಅಭ್ಯಂತರವಿಲ್ಲ. ಆ

ಕಡತಗಳಿಂದ ಸಿಕ್ಕ ಕೆಲವೇ ಅಣಿಮುತ್ತುಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ಅತಿ ಹೆಚ್ಚು ಸರಿ ಉತ್ತರ ಬಂದದ್ದು ಯಾವುದೆಂದು ಅದರಡಿಯಲ್ಲೇ ಪ್ರಕಟಿಸಿದೆ. ಇಲ್ಲಿ ಕೊಟ್ಟಿರುವ ಅಭಿಪ್ರಾಯಗಳು ನಮ್ಮದಲ್ಲವಾದ್ದರಿಂದ, ಇದನ್ನು ಪ್ರಕಟಿಸಿದವರಿಗೂ ಸಂಬಂಧವಿಲ್ಲದಾಗಿ, ನಾವು ಯಾರೂ ಆ ಉತ್ತರಗಳಿಗೆ ಯಾವ ರೀತಿಯಲ್ಲೂ ಹೊಣೆಗಾರರಲ್ಲವೆಂದು ಪ್ರತ್ಯಕ್ಷ, ಪರೋಕ್ಷ ಪ್ರಾಮಾಣಿಸಿ ಹೇಳುತ್ತೇವೆ. ಸರಿಯಾದ ಉತ್ತರ ಯಾವುದೆಂಬುದನ್ನು ಓದುಗರಿಗೇ ಬಿಟ್ಟಿದ್ದೇವೆ:

**1. ಈ ಬೆಂಗಳೂರು (ಬ್ಯಾಂಗ್ಲೂರ್) ನಗರ ಯಾರಿಂದ ಮೊದಲು ಗುರುತಿಸಲ್ಪಟ್ಟಿತು?**

1. ಕೆಂಪೇಗೌಡ, 2. ಟಿಪ್ಪುಸುಲ್ತಾನ್, 3. ವಿಶ್ವೇಶ್ವರಯ್ಯ, 4. ಯಾರೋ ಬ್ರಿಟಿಷ್ ಅಧಿಕಾರಿ. ಕೆಂಪೇಗೌಡ ಹೆಸರು ಬಸ್‌ಸ್ಟಾಂಡ್ ಮತ್ತು ಈಗ ಏರ್‌ಪೋರ್ಟಿಗಷ್ಟೇ ಇಟ್ಟ ಹೆಸರು.

★ ಅತಿ ಹೆಚ್ಚು ಉತ್ತರಗಳು: ನಂ. 4

**2. ಮೊದಲಿಗೆ ಈ ನಗರಕ್ಕೆ ನೀರು ಎಲ್ಲಿಂದ ತರಿಸಿದರು?**

1. ಆಗ ಈ ನಗರವೊಂದು ಮರುಭೂಮಿ, ಹಾಗಾಗಿ ಕೆರೆ ಇರಲು ಸಾಧ್ಯವಾದರೂ ಹೇಗೆ? ಜನರ ಹಾಹಾಕಾರವೆದ್ದುದೇ ಕಾರಣ ಕೆಆರ್ ಸಾಗರದಿಂದ ತರಿಸಬೇಕಾಯಿತು, ಈಗಲೂ ಅಷ್ಟೆ. 2. ಮೊದಲೆರಡೂ ಸುಳ್ಳಿನ ಕಂತೆಗಳು. ಕೆರೆಗಳು ಮಸ್ತಾಗಿದ್ದವು, ಲೆಕ್ಕಕ್ಕೆ ಸಿಗುತ್ತಿರಲಿಲ್ಲ. ಈಗಲೀಗ ಡೆವಲಪರ್ಸ್ ಮತ್ತು ಪರಭಾಷೆಯವರು ಇಲ್ಲಿ ಗುಳೆ ಹೂಡಿದ್ದೇ ನೀರಿಗೆ ಬಂತು ಅಭಾವ. ಇತ್ತೀಚಿನವರೆಗೆ ಕೆಆರ್ ಸಾಗರದಿಂದ, ಈಗ ಅದೂ ಖಾಲಿ. ಬಹುಶಃ ಕೆಲವು ದಿನಗಳಲ್ಲಿ ಮರುಭೂಮಿಯೂ ಆಗಬಹುದು. 3. ತಿಪ್ಪಗುಂಡನ ಹಳ್ಳಿ ಜಲಾಶಯ, ಈಗ ಅಲ್ಲಿ ನೀರಲ್ಲ, ಬರೀ ಕೆಸರು ಮಣ್ಣು ಸಿಗುತ್ತೆ. ಯಾರಿಗೆ ಎಷ್ಟು ಬೇಕಾದರೂ ಕೊಡಬಲ್ಲರು. 4. ಯಾರಿಗೂ ಗೊತ್ತಿಲ್ಲದ ನಿಗೂಢ, ಅಪ್ರಬುದ್ಧ ಪ್ರಶ್ನೆ, ಬುದ್ಧಿಜೀವಿಗಳಷ್ಟೇ ಬಹುಶಃ ಉತ್ತರಿಸಬಲ್ಲರು. ಅವರನ್ನು ಕೇಳಿ ನೋಡಿರಿ.

★ ಅತಿ ಹೆಚ್ಚು ಉತ್ತರಗಳು: ನಂ. 3

**3. ಈ ನಗರಕ್ಕೆ ಹೇಗೆ ಈ ಹೆಸರು ಬಂತು?**

1. ಕೆಂಪೇಗೌಡನಿಗೆ ಇಷ್ಟವಾಗಿ ಈ ಹೆಸರು ಅದೇ ವಾಡಿಕೆಯಲ್ಲಿ ಬಂತು. 2. ಸಿಲ್ಲಿ ಕೊಶ್ಚನ್, ನೋ ಒರಿಜಿನಲ್ ಬಂಗಲೋರಿಯನ್ ಲಿವ್ ನೌ ಟು ಆನ್ಸರ್ ಇಟ್. ವೆರಿ ಫ್ಯು ಹೂ ಲಿವ್ ಬೀಯಿಂಗ್ ಓಲ್ಡ್ ಸಫರ್ ಡಿಮೆಂಟಿಯ. ನೋವೊನ್ ಸ್ಪೀಕ್ ಲೋಕಲ್ ಲಾಂಗ್ವೇಜ್. 3. ಜಯಾ ಅಮ್ಮಕು ಅಮ್ಮ ಸಂಧ್ಯ ಮೈಸೂರಲಿ ಇರಿಂದರ್, ಅವಂಗ ಕೇಟು ಪಾರ್ಕಲ, ತೆರೆಯುದಿ. ನಮಗೆ ಕೊತ್ತಿಲ್ಲ. 4. ಕಳ್ಳೇಕಾಯಿ ಮಾರುವ ಮುದುಕಿ. ಆಕೆ ಹೆಸರು ಸಾಲುಮರದ ನಿಂಗಮ್ಮ.

★ ಅತಿ ಹೆಚ್ಚು ಉತ್ತರಗಳು: ನಂ. 2

**4. ಒಂದು ಕಾಲದಲ್ಲಿ ಈ ನಗರ ಸಿವಿಲ್ ಏರಿಯಾ, ದಂಡು ಹಾಗೂ ಪೇಟೆ ಯಾ ಸಿಟಿ**

**ಎಂಬ ಮೂರು ಭಾಗಗಳಾಗಿ ಮಾಡಿಕೊಂಡಿದ್ದರು. ಈಗಿನ ವಾಸ್ತವ ಸ್ಥಿತಿಯೇನು? ಕನ್ನಡಿಗರ ಗತಿಯೇನು?**

1. ಮೂರೂ ಭಾಗಗಳು ಕಲಬೆರಕೆಯಾಗಿವೆ. ಕನ್ನಡಿಗರು ಎಲ್ಲೆಲ್ಲೂ ಕೊಂಚಂ, ಕೊಂಚಂ ಮಟ್ಟುದಾ. 2. ಈ ನಗರವನ್ನ ಹೋಳು ಮಾಡಿ ಹಂಚಬೇಕೆಂದಿರುವವರನ್ನ ಕೇಳಿ ನೋಡಿ. ಅವರಿಗೆ ತಿಳಿದಿರಬಹುದು. 3. ಇತ್ತೀಚೆಗೆ ಅಲ್ಲಲ್ಲಿಯ ಕೋಮು, ಭಾಷೆ ಮಾತಾಡುವವರ ಸಂಖ್ಯೆಗೆ ಅನುಸಾರವಾಗಿ ಭಾಗ ಮಾಡಿರಬೇಕು. ಎಲ್ಲರಿಗೂ ಪ್ರಾತಿನಿಧ್ಯ ಸಿಗುತ್ತದೆ. ಜೈ ಕರ್ನಾಟಕ. 4. ಯಾವುದೂ ಅಲ್ಲ. ಆಗಿನ ದಿನಗಳಲ್ಲಿ ಮಿಲಿಟರಿ ಬೀಡು ಬಿಟ್ಟಿದ್ದಕ್ಕಾಗಿ ಅದು ದಂಡು, ಅವರಿಗೆ ಸಪ್ಲೈ ಮಾಡಲು ಸುತ್ತಲೂ ಇರುವ ನಾಗರಿಕರು ಅದಕ್ಕೆ ಸಿವಿಲ್ ಏರಿಯಾ, ಮಿಕ್ಕೆಡೆ ಹಳೇ ಬೆಂಗಳೂರಿಗರು, ಈಗಲೂ ಅಷ್ಟೆ. ಆದರೆ ಈ ಕೊನೆಯದು ಬಳೇಪೇಟೆ ಗಲ್ಲಿಗಳಲ್ಲೂ ಮಾಯವಾಗುತ್ತಿದೆ.

★ ಅತಿ ಹೆಚ್ಚು ಉತ್ತರಗಳು: ನಂ. 1

5. **ಕಾವೇರಿ ನದಿಯಿಂದ ನೀರು ಬೇಕೇಬೇಕೆಂದು ಅಮ್ಮ ಯಾವಾಗಲೂ ಹಠ ಹಿಡಿಯುತ್ತಾರೆ. ಕೊಡುವುದಿಲ್ಲ, ಕೊಡುವುದಿಲ್ಲ, ಅನ್ನುತ್ತಾ ಎಲ್ಲಾ ಸರ್ಕಾರಗಳು ನೀರು ಬಿಟ್ಟೇಬಿಟ್ಟವೆ, ಮುಂದೆಯೂ ಬಿಡಬಹುದು ಹೆಚ್ಚು ಹೆಚ್ಚಾಗಿ. ಅಕಸ್ಮಾತ್, ಕಾವೇರಿಗೆ ಭಾಗಮಂಡಲದಿಂದ ನೀರೇ ಬರದಿದ್ದ ಪಕ್ಷದಲ್ಲಿ ಆ ತಾಯಿ ಏನು ಮಾಡಬಹುದು?**

1. ಕರ್ನಾಟಕದ ಯಾವುದೇ ಭಾಗದಲ್ಲಿರುವ ನದಿಯಾದರೂ ಸರೆ, ನಮಗದರ ಕಾಳಜಿಯಿಲ್ಲ, ಆದರೆ ನೀರು ಮಾತ್ರ ಬಿಡಿ, ಬಿಟ್ಟೇ ತೀರಬೇಕು, ಹುಷಾರು! ಕೋರ್ಟು!! 2. ಕೋರ್ಟ್ನಲ್ಲಿಸರ್ಕಾರ ಪಾಪರ್ಚೀಟಿಗೆ ಹಾಕಿಕೊಂಡು ನಿದ್ದೆ ಮಾಡಬಹದು. 3. ನೀರಲ್ಲ ಬೇಕಿದ್ದರೆ ಟನ್‌ಗಟ್ಟಲೆ ಯಾವುದೇ ಪಾನೀಯ ಕೊಡಬಲ್ಲೆವು, ಬೀರಿನ ರಾಜ ಮಲ್ಯ ಕೂಡ ಇಲ್ಲಿನವರೆ. ಒಪ್ಪಿಕೊಳ್ಳಿ ಎಂದು ನ್ಯಾಯಾಧಿಕರಣದ ಮುಂದೆ ಬಕೆಟ್ ತುಂಬ ಬೀರು ಮಿಶ್ರಿತ ಕಣ್ಣೀರು ಸುರಿಸಬಹುದು. 4. ಮಂತ್ರಿಮಂಡಲ ಸಾಮೂಹಿಕವಾಗಿ ರಾಜಿನಾಮೆ ಕೊಟ್ಟು ಸಂವಿಧಾನಾತ್ಮಕ ಸಮಸ್ಯೆ ತಂದು ಕೇಂದ್ರ ಸರ್ಕಾರದ ಹೆಗಲಿಗೆ ವರ್ಗಾಯಿಸಬಹುದು.

★ ಅತಿ ಹೆಚ್ಚು ಉತ್ತರಗಳು: ನಂ. 3ಕ್ಕೆ. ಕಡೆಯದಕ್ಕೆ ಸೊನ್ನೆ ಉತ್ತರಗಳು.

6. **ಆಡಳಿತಾಂಗದಲ್ಲಿ ಲಂಚವೆಂಬುದು ಅಘೋಷಿತ ಕಟ್ಟಾ ನಿಯಮವಾಗಿದೆ. ಲಂಚ ತೆಗೆದುಕೊಳ್ಳದವನು ಸರ್ಕಾರದಲ್ಲಿರಲೇಕೂಡದು. ಅದೇ ಸ್ವಧರ್ಮ. ಗೀತೆಯಲ್ಲಿ ಹೇಳಿಲ್ಲವೇ – 'ಸ್ವಧರ್ಮೇ ನಿಧನಂ ಶ್ರೇಯಃ'**

1. ಮಂಚವೆಂಬುದು ಎಷ್ಟು ಅಪ್ಯಾಯಮಾನವೋ, ಲಂಚವೂ ಅಷ್ಟೇ, ಅದು ಸರ್ಕಾರದಲ್ಲಿ ಕೆಲಸ ಮಾಡುವವರ ಮಾನಸಿಕ ಹಾಗೂ ಭೌತಿಕ ಧರ್ಮ. ಸತ್ತಮೇಲೆ ಪಾರಮಾರ್ಥಿಕವೂ ಕೂಡ. ಕಾರಣ ಆ ಹಣದಿಂದಲೇ ಕರ್ಮ ಮಾಡಿದರಷ್ಟೇ

ಸತ್ತವನಿಗೆ ಮುಕ್ತಿ, ಇಲ್ಲವಾದರೆ ಪ್ರೇತವಾಗಿಯೇ ಇರುತ್ತಾನೆ. 2. ಎಲ್ಲ ಸುಳ್ಳು, ಲಂಚ ಪಡೆಯುವವರನ್ನು ಸಮುದ್ರದ ಆಳದಲ್ಲಿ ಎದ್ದು ಬರಲಾರದಂತೆ ಮುಳುಗಿಸಿ ಬನ್ನಿ, ಅದೇ ಸರಳ ಶಿಕ್ಷೆ. 3. ಮನುಷ್ಯನು ಅದೆಷ್ಟೋ ಮಾನಸಿಕ ವ್ಯಾಧಿಗಳಿಂದ ನರಳುತ್ತಾನೆ. ಈ ಲಂಚದ ವಿಷಯವೂ ಅಷ್ಟೇ. ಆದ್ದರಿಂದ ಇದು ಅಪರಾಧವೆನ್ನಲಾಗದು. ಆ ಕಾರಣ, ವ್ಯಾಧಿಗೆ ಪರಿಹಾರವಾಗಿ ಸರ್ಕಾರವೇ ಲಂಚ ಪಡೆಯುವುದನ್ನು ಅವಿರೋಧವಾಗಿ ಅಂಗೀಕರಿಸತಕ್ಕದ್ದು. 4. ಇದರ ಬಗ್ಗೆ ಮತ್ತಷ್ಟು ಚರ್ಚೆಗಳಾಗಿ, ಸುಪ್ರೀಮ್‌ಕೋರ್ಟ್‌ನಲ್ಲಿ ಫುಲ್ ಬೆಂಚ್‌ನ ತೀರ್ಮಾನಕ್ಕೆ ಬಿಡಬೇಕು. ನಂತರ ಸಂವಿಧಾನವನ್ನ ಬದಲಾಯಿಸತಕ್ಕದ್ದು. ಆದರೆ ಆ ಬೆಂಚಲ್ಲಿ ಕನಿಷ್ಟ ಐದು ಜಡ್ಜಿಗಳಾದರೂ ತಮ್ಮ ವೃತ್ತಿಯಲ್ಲಿ ಒಂದು ಬಾರಿಯಾದರೂ ಲಂಚ ಪಡೆದಿರಲೇಬೇಕು. ಮಿಕ್ಕವರು ಎಲ್ಲ ಕೋಮಿನವರನ್ನು ಪ್ರತಿನಿಧಿಸಬೇಕು.

★ ಅತಿ ಹೆಚ್ಚು ಉತ್ತರಗಳು: ನಂ. 2

**7. ಈ ನಗರ ಕರ್ನಾಟಕದ ರಾಜಧಾನಿ ಎಂಬುದು ಎಲ್ಲರಿಗೂ ಗೊತ್ತು. ಹಾಗಾಗಿ ಕನ್ನಡವೇ ಇಲ್ಲಿಯ ಜನರಾಡುವ ಭಾಷೆ ಆಗಿರಬೇಕು. ಹೌದಲ್ಲವೇ?**

1. ತೆಲುಸುಲೇದಂಡಿ. 2. ಎಪ್ಪಡಿ ತೆರಿಯಂ? 3. ಸ್ವಾತಂತ್ರ್ಯಪೂರ್ವ ಇಲ್ಲಿ ವಾಸಿಸುತ್ತಿದ್ದವರ ಭಾಷೆ, ಈಗಲ್ಲ. 4. ನಾವು ಹಾಗೇ ಅಂದುಕೊಂಡಿದ್ದೆವು. ಕನ್ನಡ ಓರಾಟಗಾರರೇ ಹೇಳಬೇಕು.

★ ಅತಿ ಹೆಚ್ಚು ಉತ್ತರಗಳು: ನಂ. 4

**8. ಈ ನಗರ ಚುನಾವಣೆಯಲ್ಲಿ ವೋಟು ಮಾಡಿದ ನಂತರ ಜನಗಳ ಪಾತ್ರವೇನು?**

1. ಹಾಯಾಗಿ ಎಲ್ಲವನ್ನೂ ಮರೆತು, ಮೊದಲಿನಂತೆ, ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುತ್ತಾ, ಅಶೌಚ ಮಾಡುತ್ತಾ, ವಾಹನಗಳನ್ನು ಎರ್ರಾಬಿರ್ರಿ ಓಡಿಸುತ್ತಾ, ನೆಮ್ಮದಿಯಾಗಿ ಇರುವುದು. ಯಾರು ಗೆದ್ದರೇನು? 2. 'ನಾಯಿ ಬೊಗಳಿದರೆ ಸ್ವರ್ಗ ಲೋಕ ಹಾಳಾಗುವುದಾ?' ಎಂಬಂತೆ ಬೆಂಗಳೂರಿಗರ ಹಣೆಬರಹ ಬದಲಾಗುವುದಿಲ್ಲ, ವೋಟು, ನೋಟು, ಜಾತಿ ಎಲ್ಲ ಒಂದೇ ಆಗಿರುವಾಗ. 3. ಸರ್ಕಾರ ಪಾಲಿಕೆಯನ್ನು ಶಾಶ್ವತವಾಗಿ ಹರಿದು, ಭಾಗ ಮಾಡಿ ತಮಗೆ ಬೇಕಾದವರನ್ನು ಪಾಳೆಯಗಾರರಾಗಿ ಮಾಡುವುದನ್ನು ನೋಡಿ ಗಿನೆಸ್ ಬುಕ್ನಲ್ಲಿ ದಾಖಲಿಸಬೇಕು. 4. ಏನಾದರೇನು ನಾವು ನಿದ್ದೆಯಿಂದ ಏಳುವುದು ಇಷ್ಟವಿಲ್ಲ. ನಮ್ಮ ದಾರಿ ನಮಗೆ.

★ ಅತಿ ಹೆಚ್ಚು ಉತ್ತರಗಳು : ನಂ. 2

**9. ಬೆಂಗಳೂರು ನಗರವನ್ನ ಮತ್ತೆ ಸ್ವಚ್ಛ, ಸುಂದರ, ಸಾಂಸ್ಕೃತಿಕ ಮೆಟ್ರೋ ಬೀಡಾಗಿ ಮಾಡಲು ಏನು ಮಾಡಬೇಕು?**

1. ಮೆಟ್ರೋ ನಗರವನ್ನ ಸ್ವದೇಶಿ ಇಲ್ಲವೇ ಪರದೇಶಿ ಐಟಿ, ಬಿಟಿ ಮುಖ್ಯಸ್ಥರ ಕೈಗೆ ಕೊಟ್ಟು ಕಾದು ನೋಡಬೇಕು. 2. ಈ ರಾಜಕಾರಣಿಗಳು ಮತ್ತು ಅರೆ ಪ್ರಜ್ಞ

ನಾಗರಿಕರ ಹೃದಯ ಪರಿವರ್ತನೆ ಆಗುವವರೆಗೂ ನಮ್ಮ ಹಣೆಬರಹ ಸರಿಯಿಲ್ಲವೆಂದು ದಾಸರು ಹೇಳುವ ಹಾಗೆ 'ಆದದ್ದೆಲ್ಲ ಒಳಿತೇ ಆಯಿತು' ಎಂದುಕೊಂಡು ಭಜನೆಯಲ್ಲಿ ನಿರತರಾಗಿರಬೇಕು. 3. ಆ ಬ್ರಹ್ಮನಿಗೂ ಆಗದ್ದು ನಮ್ಮಿಂದೇನು ಸಾಧ್ಯ ಎಂದು ವಾಸ್ಕೋಡಗಾಮನಂತೆ ನಾವೂ ಪರದೇಶಗಳಿಗೆ ವಲಸೆ ಹೋಗಬೇಕು. 4. ಯಾವ ಪರಿಹಾರವೂ ತೋಚುವುದಿಲ್ಲ. ಆ ಕಾರಣ ಮಾರ್ಗದರ್ಶನಕ್ಕಾಗಿ ಕಾವಿ ಬಟ್ಟೆಯವರನ್ನ ಕರೆಸಿ ಅವರಿಂದಲೇ ಆಡಳಿತ ಯಾಕೆ ನಡೆಸಬಾರದು? ಹೇಗಿದ್ದರೂ ಪರೋಕ್ಷವಾಗಿ ಆಡಳಿತದಲ್ಲಿ ಅವರ ಕೈ ಇದ್ದರೂ ಇರಬಹುದು.

★ ಅತಿ ಹೆಚ್ಚು ಉತ್ತರಗಳು : ನಂ. 1. ಆದರೆ ನಾಳೆ ಅಧಿಕಾರದ ರುಚಿ ಕಂಡರೆ ಇವರೂ ಅದೇ ದಾರಿ ಹಿಡಿಯಬಯದೇನೋ. ಇದೀಗ ಈ ಬಗ್ಗೆ ಮತ್ತಷ್ಟು ವಿವೇಚನೆಗಾಗಿ ಓದುಗರಿಗೇ ಬಿಟ್ಟಿದೆ. ಕಾರಣ ಧರ್ಮಜನಂತೂ ಕೈಗೆ ಸಿಕ್ಕುವವನಲ್ಲ. ವಿಷ್ಣುವೂ ನುಣುಚಿಕೊಂರೆ?

❑

---

## ಇನ್ನಷ್ಟು ಯಕ್ಷ ಪ್ರಶ್ನೆಗಳು

1 ಬೆಂಗಳೂರಿನಲ್ಲಿ ರಸ್ತೆ ಅಪಘಾತವೇ ನಡೆಯದ ದಿನ ಮುಂದೆಂದಾದರೂ ಬರಬಹುದೇ ?

2 ನನಗೆ ಲಂಚ ಬೇಡವೇ ಬೇಡ ಎನ್ನುವ ಯಾರಾದರೊಬ್ಬ ಸರ್ಕಾರೀ ನೌಕರ ಕಾಣಬಹುದೇ ?

3 ನನಗೆ ಹೊಸ ಕಾರು ಬೇಡ, ಹೊಸ ಮನೆ ಬೇಡ, ಮಂತ್ರಿಯಾಗಿರುವಷ್ಟು ದಿವಸ ಇರುವ ಹಾಗೆಯೇ ಇರುತ್ತೇನೆ ಎಂದು ಆಡಿದ್ದನ್ನು ಮಾಡಿ ತೋರಿಸುವ ಒಬ್ಬರಾದರೂ ಮಂತ್ರಿ ಮುಂದೆಂದಾದರೂ ಕಾಣಸಿಗಬಹುದೇ ?

3 ದೈನಂದಿನ ಪದಾರ್ಥಗಳ ದರಗಳು ಇಳಮುಖವಾಗುವುದೇ ?

4 ವಾರ್ತಾ ವಾಹಿನಿಗಳು ಪದೇ ಪದೇ ಅದೇ ಹಾಸ್ಯ ಕಾರ್ಯಕ್ರಮಗಳನ್ನು ಬಿತ್ತರ ಮಾಡುವುದನ್ನು ನಿಲ್ಲಸುವರೇ ?

5 ವಾರ್ತಾ ವಾಹಿನಿಗಳು ಜನತೆಗೆ ಬೇಡದ ಸಿನಿಮಾ ನಟರ ವೈಯಕ್ತಿಕ ವಿಷಯಗಳ ಬಗೆಗೆ ದಿನಗಟ್ಟಲೆ ಕಾರ್ಯಕ್ರಮ ಮಾಡುವುದನ್ನು ನಿಲ್ಲಿಸುವರೇ

6 ನಮ್ಮ ಎಲ್ಲಾ ಶಾಸಕರೂ ವಿಧಾನ ಸಭೆಯ ಎಲ್ಲಾ ದಿನಗಳೂ ವಿಧಾನ ಸಭೆಯಲ್ಲಿ ಹಾಜರಿರುವರೇ ?

– ಸುಕೇಶವ

# ಸಮಸ್ಯೆಯ ಸುಳಿಯಲ್ಲಿ

**- ವೈ.ಎಸ್. ಸುಬ್ರಮಣ್ಯ**

**ಶಾ**ಮರಾಯರು ಮನೆಯಿಂದ ಆತುರದಲ್ಲಿ ಶಾಲೆಗೆ ಹೊರಟಿರುವಾಗ, ಮೊಮ್ಮಗ ಅಡ್ಡಬಂದು ''ತಾತ, ತಾತ, ಒಂದೇ ಒಂದು ಲೆಕ್ಕ ಹೋಮ್‌ವರ್ಕ್ ಕೊಟ್ಟಿದ್ದಾರೆ, ಹೇಳಿಕೊಡಿ'' ಅಂತ ದುಂಬಾಲು ಬಿದ್ದ. ಸೊಸೆ ನೋಡ್ತಾನೇ ಇದ್ಲು ಏನ್ ಮಾಡ್ತಾರೆ ನೋಡೋಣ ಅಂತ.

''ಏನ್ ಲೆಕ್ಕ, ಬೇಗ ಹೇಳು'' ಅಂದರು ಶಾಮರಾಯರು.

''888,888,881 ಅನ್ನೋ ಸಂಖ್ಯೆ ಭಾಜ್ಯವೇ, ಅಥವಾ ಅವಿಭಾಜ್ಯವೇ? ಅಂತ ಹೇಳಬೇಕು.''

''ಈ ಲೆಕ್ಕಾನ ತಕ್ಷಣ ಮಾಡಲು ಸಾಧ್ಯವಿಲ್ಲ. ಶಾಲೆಯಿಂದ ಬಂದ ಮೇಲೆ ಹೇಳ್ತೀನಿ.''

''ಏನು ತಾತ ಇದೊಂದು ಲೆಕ್ಕ ಮಾಡಕ್ಕೆ ಆಗಲ್ವೇ? ಅಪರೂಪವಾಗಿ ನಿಮ್ಮನ್ನು ಕೇಳ್ತಾ ಇದೀನಿ, ನಾನು ಇವತ್ತೇ ಮಾಸ್ತರಿಗೆ ಉತ್ತರ ಹೇಳಬೇಕಲ್ಲಾ.''

''ಬೆಳಗ್ಗೆಯಿಂದ ಏನು ಮಾಡ್ತಾ ಇದ್ದೆ, ಹೊರಡೋ ಸಮಯದಲ್ಲಿ ಕೇಳ್ತಾ ಇದ್ದೀಯಲ್ಲಾ.''

ತಾತ, ಮೊಮ್ಮಗನ ಮಾತುಕತೆ ನಡೀತಾ ಇದ್ದಾಗ, ಅಜ್ಜಿ ಬಂದು, ''ಏನೊಂದ್ರೆ, ಮೊಮ್ಮಗು ಅಪರೂಪಕ್ಕೆ ಒಂದು ಲೆಕ್ಕ ಕೇಳ್ತಾಯಿದೆ. ತಕ್ಷಣ ಹೇಳಕ್ಕೆ ಆಗಲ್ವೆ? ಇದೊಂದು ಸಣ್ಣ ಲೆಕ್ಕಕ್ಕೋಸ್ಕರ ಶಾಲೆಯಿಂದ ನೀವು ಬರುವ ತನಕ ಅವನು ಕಾಯಬೇಕೆ?'' ಎಂದು ದಬಾಯಿಸಿದಳು.

ಶಾಮರಾಯರು ಸಂದಿಗ್ಧಕ್ಕೆ ಸಿಲುಕಿದರು. ಉತ್ತರ ಗೊತ್ತಿಲ್ಲ ಅಂತ ಒಪ್ಪಿಕೊಳ್ಳಕ್ಕೆ ಆಗಲ್ಲ. ಶಾಲೆಗೆ ಹೊತ್ತಾಗಿದೆ, ನಿಮ್ಮ ಅಪ್ಪನ್ನ ಕೇಳು ಅಂತ ಹೇಳೋಣಾಂದ್ರೆ, ಅಪ್ಪ ಬೆಳಗ್ಗೇನೇ ಬೇಗ ಎದ್ದು ಆಫೀಸಿಗೆ ಹೋಗಿದ್ದಾನೆ. ಇನ್ನು ವಿದ್ಯಾವಂತೆ ಸೊಸೇನ ಅರ್ಥಾತ್ ತಾಯೀನೇ ಕೇಳು ಅಂತ ಹೇಳಕ್ಕಾಗುತ್ತದೆಯೇ? ಕಡೇಗೆ, ಏನೂ ತೋಚದೆ ತುಂಬಾ ಹೊತ್ತಾಗಿದೆ ಅಂತ ಹೇಳ್ತಾ ಮನೆಬಿಟ್ಟು ಹೊರಟೇ ಬಿಟ್ಟರು. ಶಾಲೆಯ ಪ್ರಾರ್ಥನೆ ಮುಗಿದಿತ್ತು. ರಾಯರು ನೇರವಾಗಿ ತರಗತಿಗೆ ಹೋದರು. ಪಾಠ ಮಾಡುವಾಗಲೆಲ್ಲಾ ಮೊಮ್ಮಗ ಕೇಳಿದ್ದ ಸಮಸ್ಯೆಯ ಬಗ್ಗೆಯೇ ಮನಸ್ಸು ಚಿಂತಿಸುತ್ತಿತ್ತು. ಇಷ್ಟು ವರ್ಷ ಸಾವಿರಾರು ಹುಡುಗರಿಗೆ ಪಾಠ ಮಾಡಿದ್ದೇನೆ. ಮೊಮ್ಮಗ ಕೇಳಿದ ಪ್ರಶ್ನೆಗೆ ಉತ್ತರಿಸಲಾಗಲಿಲ್ಲವಲ್ಲಾ ಎಂಬ ಯೋಚನೆ ಅವರನ್ನು ಕಾಡಿತು. ಸಹೋದ್ಯೋಗಿಗಳನ್ನು ಕೇಳೋಣ ಅಂದರೆ ಇವರೇ ಅವರೆಲ್ಲರಿಗೂ ಹಿರಿಯರು. ಸ್ವಾಭಿಮಾನದ ಪ್ರಶ್ನೆ!

ಮುಂದಿನ ತರಗತಿ ಇತ್ತಿಲ್ಲ. ಕ್ಯಾಂಟೀನ್‌ನಿಂದ ಬೋಂಡಾ ಕಾಫಿ ತರಿಸಿ ಮುಗಿಸಿದರು.

ಅನಂತರದ ತರಗತಿಯಲ್ಲಿ ರೇಖಾಗಣಿತದ ಪಾಠ. ಒಂದು ಚೌಕಳಿ ಕಾಗದದ ಮೇಲೆ ಒಂದು ಸರಳ ರೇಖೆಯನ್ನು ಸೂಚಿಸಲು ಕಡೇ ಪಕ್ಷ ಎರಡು ಬಿಂದುಗಳಾದರೂ ಇರಲೇ


ಬೇಕು. ಮೂರನೆಯ ಬಿಂದು ಅನಗತ್ಯ ಎಂದು ಮಾಸ್ತರು ಪಾಠ ಹೇಳಿದರು. ಕೊನೆಯ ಬೆಂಚಿನಲ್ಲಿ ಕೂತಿದ್ದ ರಸಿಕ ವಿದ್ಯಾರ್ಥಿಯೊಬ್ಬ, ''ನಮ್ಮ ತಾಯಿ ಕೂಡಾ ನಮ್ಮಪ್ಪನ ಹತ್ತಿರ ಎರಡು ಸಾಕು ಮೂರನೆಯದು ಬೇಡ ಅಂತಲೇ ಹೇಳ್ತಿರ್ತಾರೆ ಸಾರ್'' ಅಂತ ಚಟಾಕಿ ಹಾರಿಸಿದ. ಶಾಮರಾಯರು ಹಾಸ್ಯಪ್ರಿಯರು. ಹುಡುಗನ ಬೆನ್ನು ತಟ್ಟಿ ''ಕ್ಲಾಸಿನಲ್ಲಿ ಹಾಗೆಲ್ಲಾ ಮಾತನಾಡಬಾರದು'' ಅಂತ ನಗುತ್ತಲೇ ಹೇಳಿದರು.

ರಾಯರ ಸಮಸ್ಯೆಗೆ ಪರಿಹಾರ ದೊರಕದೇ ಮನೆಯಲ್ಲಿ ಮುಖ ತೋರಿಸುವುದು ಹೇಗೆ ಅಂತ ಚಿಂತಿಸುತ್ತಿದ್ದಾಗ, ಶಾಲೆಯ ಪಕ್ಕದಲ್ಲಿದ್ದ ಗ್ರಂಥಾಲಯ ನೆನಪಿಗೆ ಬಂತು. ಅಲ್ಲಿ ಹೋಗಿ, ಮಹಾನುಭಾವರೊಬ್ಬರು ಬರೆದಿದ್ದ, ''ನಾವೆಷ್ಟು ಬುದ್ಧಿವಂತರು?'' ಎಂಬ ಪುಸ್ತಕದ ಮೇಲೆ ಕಣ್ಣಾಡಿಸಿದರು. ಉತ್ತರ ಸಿಕ್ಕೇಬಿಟ್ಟಿತು.

ಲಾಟರಿಯಲ್ಲಿ ಒಂದು ಕೋಟಿ ಬಹುಮಾನ ಸಿಕ್ಕಿದ ಹಾಗಾಯಿತು. ಶಾಲೆ ಮುಗಿದ ಮೇಲೆ ನೇರವಾಗಿ ಮನೆಗೆ ಹೋದರು. ಮೊಮ್ಮಗ ತಾತ ಬರೋದನ್ನೇ ಕಾಯ್ತಾ ಇದ್ದ. ತಾತನ್ನ ನೋಡಿದ ತಕ್ಷಣ ''ತಾತ, ಇವತ್ತು ನಮ್ಮ ಮೇಷ್ಟ್ರು ಬಂದಿರಲಿಲ್ಲ. ನನ್ನ ಪ್ರಶ್ನೆಗೆ ಉತ್ತರ ಸಿಕ್ತಾ?'' ಅಂತ ಮುದ್ದುಮುದ್ದಾಗಿ ಕೇಳಿದ.

''ಉತ್ತರ ಸಿಕ್ತು ಮರಿ, 888888881 ಒಂದು ಭಾಜ್ಯ ಸಂಖ್ಯೆ 10903 ಮತ್ತು 81527 ಇವೆರಡೂ ಸಂಖ್ಯೆಗಳಿಂದ ಅದನ್ನ ಭಾಗಿಸಬಹುದು. ತಮಾಷೆ ಅಂದ್ರೆ, ಈ ಎರಡು ಭಾಗಿಸುವ ಸಂಖ್ಯೆಗಳೂ ಅವಿಭಾಜ್ಯ ಸಂಖ್ಯೆಗಳೇ, ಅಂದ್ರೆ ಪ್ರೈಮ್ ನಂಬರುಗಳು.'' ಅಂತ ತಾತ ಉತ್ತರಿಸಿದ್ದನ್ನು ನೋಡಿ ಅಜ್ಜಿಗೆ ಆನಂದ. ಸೊಸೆಗೆ ಪರಮಾನಂದ. ''ರಾತ್ರಿ ಫಲಹಾರಕ್ಕೆ ಏನು ಮಾಡಿಕೊಡಲಿ?'' ಎಂದು ಸೊಸೆ ಬಾಯ್ತುಂಬಾ ಕೇಳಿದಳು. ಸಮಸ್ಯೆಯ ಸುಳಿ ತಾನಾಗಿಯೇ ಕರಗಿತ್ತು.

❑



# 45 ನಿಮಿಷ ಆಯ್ತಾ?

**- ನುಗ್ಗೆಹಳ್ಳಿ ಪಂಕಜ**

''**ಯಾ**ವುದಾದ್ರೂ ಒಂದು ಸ್ವಾರಸ್ಯಕರ ಕ್ಯಾರಕ್ಟರನ್ನೋ, ಅದ್ಭುತ ಸನ್ನಿವೇಶವನ್ನೋ ರಸವತ್ತಾಗಿ ಕವರೇಜ್ ಕೊಡ್ಬೇಕು, ನಮ್ಮ ಪತ್ರಿಕೆಗೆ - ಎಂದು ಹುಕುಂ ಮಾಡಿದ್ರು, ನಮ್ಮ ಪತ್ರಿಕೆಯ ಸಂಪಾದಕರು.

ಅದಕ್ಕಾಗಿ ಎಲ್ಲೆಲ್ಲೋ ಅಲೆಯೊಕ್ಕೆ ಆರಂಭಿಸಿದ್ದೆ, ರಸ್ತೆಯಲ್ಲಿರೋವ್ರನ್ನೆಲ್ಲಾ ನಿರುಕಿಸಿ ನಿರುಕಿಸಿ ನೋಡ್ತಾ ನೋಡ್ತಾ..... ಒಬ್ರಿಗಿಂತ ಒಬ್ರು ಬಿಸಿ...... ಎಲ್ರೂ ಓಡುವವರೇ!

ಹೋಗಲಿ, ಬಸ್ಸಿನಲ್ಲಾದ್ರೂ ಸಿಕ್ಕರೇ? ಊಹು..... ಆಟೋದವನಾದ್ರೂ ಏನಾದ್ರೂ ಹೇಳ್ತಾನೇನೋ ಎಂದ್ರೆ, ಆತ ಬಾಯೇ ಬಿಡ್ಲಿಲ್ಲ! ನನ್ನನ್ನೂ ಒಂದು ಮೀಟರ್ ಎಂದು ಪರಿಗಣಿಸಿದ ಹಾಗಿತ್ತು.

''ಏನಪ್ಪಾ ಮಾಡೋದು?'' ಅಂತ ತಲೆಮೇಲೆ ಕೈಯಿಟ್ಟು ನಡೀತಾ ಬರ್ತಿದ್ದಾಗ, ಇದ್ದಕ್ಕಿದ್ದಂತೆ ಒಂದು ವಿಚಿತ್ರ ದೃಶ್ಯ ಬಿತ್ತು ಕಣ್ಣಿಗೆ.

ಅದೇನೆಂದ್ರೆ -

ಬಾಗಿಲು ಕಿಟಕಿ ಇಲ್ಲದ, ಚಿಕ್ಕದೂ ಅಲ್ಲ, ದೊಡ್ಡದೂ ಅಲ್ಲ ಎಂಬ ಜಾಗ. ಅದ್ರಲ್ಲಿ ಸಾಲಾಗಿ ಕುರ್ಚಿಗಳು; ಒಂದೊಂದು ಕುರ್ಚಿಯ ಮೇಲೂ ಒಬ್ಬೊಬ್ಬರು ಕಣ್ಮುಚ್ಚಿಕೊಂಡು ಹೆಂಗಸರು, ಗಂಡಸರು, ಮುದುಕರು, ಮುದುಕಿಯರು..... ಏನ್ಮಾಡ್ತಿದಾರೆ? ಯೋಗಾಭ್ಯಾಸವನ್ನೇ? ಟ್ರಾಫಿಕ್ ತುಂಬಿದ ಈ ರಸ್ತೆಯಲ್ಲಿ? ಇಷ್ಟೂ ಮಿಸುಕಾಡ್ದೆ ಕೂತಿರೋದನ್ನ ಗಮನಿಸಿದೆ; ಒಳ್ಳೆ ದಸರಾ ಬೊಂಬೆಗಳ ಹಾಗೆ ಕೂತಿದ್ವು ಸಾಲಾಗಿ. ಹತ್ರ ಹೋಗಿ ನೋಡಿದಾಗ ಖಾತ್ರಿಯಾಯ್ತು ಅವರೆಲ್ಲಾ ಮನುಷ್ಯರು! ಅಂತ. ಅದ್ಸರಿ, ಸಿನಿಮಾಗೋ, ನಾಟಕಕ್ಕೋ, ಹೋಟಲಿಗೋ ಹೋಗದೆ, ಇದೇನೀ ಅವತಾರ, ಮ್ಯಾಡಮ್ ಟುಸಾಡ್ ಅವರ ಕೃತಿಗಳಂತೆ?

ವಿಚಾರಿಸೋದೇ ವಾಸಿ ಅಂತ, ಮೆಲ್ಲಗೆ ಹೋದೆ. ಒಂದು ಕುರ್ಚಿ ಖಾಲಿ ಇತ್ತು. ಮೆಲ್ಲಗೆ ಕೂತೆ. ಆತನ ಷರಟನ್ನ ಹಿಡಿದೆ - ಎಚ್ಚರಗೊಳಿಸಲು.

ತಕ್ಷಣ ಅವನು ಪಿಸುದನಿಯಲ್ಲಿ ಕೇಳಿದ - ''ನಲವತ್ತೈದು ನಿಮಿಷ ಆಯ್ತಾ?''

ತಬ್ಬಿಬ್ಬಾಯ್ತು. ಇದೆಂಥಾ ಪ್ರಶ್ನೆ! ಅವನನ್ನ ಬಿಟ್ಟು ಬೇರೊಬ್ಬನನ್ನ ಸಮೀಪಿಸಿದೆ. ಮೆಲ್ಲಗೆ ಅವನ ಭುಜ ತಟ್ಟಿದೆ. ಅವನೂ ಅದೇ ಪ್ರಶ್ನೆ ಕೇಳ್ಬೇಕೇ? ಇನ್ನೊಬ್ಬ ಆಸಾಮೀನೂ ಅಷ್ಟೆ-ಅದೇ ಪ್ರಶ್ನೆ!

ಏನಾಗಿದೆ ಇವರುಗಳಿಗೆ? 45 ನಿಮಿಷ ಅಂದರೆ ಏನರ್ಥ?

ಇದ್ದಕ್ಕಿದ್ದಂತೆ, ನೆನಪಿಗೆ ಬಂತು, ಹಿಂದೆ ಓದಿದ್ದ ಆಲಿಬಾಬಾ ಮತ್ತು ನಾಲ್ವರು ಕಳ್ಳರ ಕಥೆ.

ಎಣ್ಣೆ ಪಾತ್ರೆಗಳಲ್ಲಿ ಅಡಗಿಕೊಂಡಿದ್ದ ಆ ಕಳ್ಳರು ಇದೇ ಪ್ರಶ್ನೆಯನ್ನ ಕೇಳಿದ್ದರಲ್ಲವೇ, ಆ ಚಾಲೂಕು ಹುಡುಗಿ–ಯಾರವಳು? ಮಾರ್ಜಿಯಾನ ಎಂತಲೇ ಹೆಸರು?

ಅಂದರೆ, ಇವರುಗಳೂ, ಅವರಂತೆ ಡಕಾಯಿತರೇ ಆಗಿರ್ಬಹುದೇ? ಬೆಂಗಳೂರಿಗೆ ಡಕಾಯಿತರ ಗುಂಪು ಬಂದಿದೆ ಅಂತ ಎಲ್ಲೊ ಓದಿದ್ದೆ. ಈ ಮೂಲೇಲಿ ಕೇಳೋವ್ರೇ ಇಲ್ಲ ಅಂತ, ಕ್ಯಾಂಪ್  ಮಾಡಿದಾರೋ ಹೇಗೆ?

ಬಿಸಿಬಿಸಿ ಸುದ್ದಿ ನಿಜ, ಆದ್ರೆ, ಬೆವರು ಸುರೀತಿತ್ತು. ಸುಧಾರಿಸ್ಕೊಂಡು ಹೋಗೋಣ ಅಂತ ಎದುರಿಗಿದ್ದ ಹೋಟೆಲಿಗೆ ನುಗ್ಗಿದೆ. ನನ್ನ ಪುಣ್ಯ ಸ್ನೇಹಿತ ಕೂತಿದ್ದ. ''ಬಾರಯ್ಯಾ ಗುರು, ನಿನ್ನನ್ನ ಕಾಣೋದೇ ಅಪರೂಪ ಸದಾ ಇನ್ನೊಬ್ರ ವಿಷಯಗಳಲ್ಲಿ ತಲೆ ತೂರಿಸ್ಕೊಂಡು ಸಾಯೋ ವ್ಯಕ್ತಿಗಳು ನೀವು! ಸುಸ್ತಾಗಿ ಕಾಣ್ತೆದಿ, ಕಾಫಿ ಕುಡಿ...'' ಎಂದು ಉಪಚರಿಸಿದ. ''ನಾನು ನನ್ನ ವೈಫಾಗ್ಗಿ ಕಾಯ್ತಿದೀನಿ.. ಅಗೋ, ಅಲ್ಲಿದಾಳೆ, ಆ ಓಪನ್ – ಕ್ಲಿನಿಕ್‌ನಲ್ಲಿ.''

ಎದುರಿಗಿರೊ ಜಾಗವನ್ನ ತೋರಿಸಿದ – ''ಕಣ್ಣಾಸ್ಪತ್ರೆ. ಎಲ್ರ ಕಣ್ಣಿಗೂ ಡ್ರಾಪ್ಸ್ ಹಾಕಿ ಡಾಕ್ಟರ್ ರೌಂಡ್ ಹೊರಟುಬಿಡ್ತಾನೆ – ರಿಸೆಪ್ಷನಿಸ್ಟ್ ಅನ್ನ ಕಾವಲಿಗೆ ಬಿಟ್ಟು. ನಲವತ್ತೈದು ನಿಮಿಷ ಆದ್ಮೇಲೆ ಬರ್ತಾನೆ, ಕಣ್ಣುಗಳನ್ನ  ಪರೀಕ್ಷೆ ಮಾಡೋಕ್ಕೆ'' ಎಂದು ತಿಳಿಸಿದಾಗ ನಾನು ಬೆಪ್ಪಾಗಿ ನೊಡಿದೆ.

''ಅಲ್ಲೊಬ್ಬ ಮುದುಕಿ ಕೂತಿದಾಳೆ ನೋಡು? ಅವಳ ಹತ್ರ ಮಾತಾಡಿದ್ರೆ ನಿನ್ನ ಪತ್ರಿಕೇಗೆ ಬಿಸಿಬಿಸಿ ಸುದ್ದಿ ಸಿಗತ್ತೆ. ಮೊನ್ನೆ ಸಾಕ್ಷತ್ ದೇವರು ಬಂದಿದ್ರಂತೆ – ಶಂಖಚಕ್ರ ಗದಾಧಾರಿಯಾಗಿ!'' ಲಕ್ಷ್ಮಿ ನನ್ನನ್ನ ಓಡಿಸ್ಬಿಟ್ಟಳು –

ಸ್ವಲ್ಪ ಮಲಗೋಕ್ಕೆ ಇಷ್ಟು ಜಾಗ ಕೊಡು ಅಂತ ಬೇಡ್ಕೊಂಡನಂತೆ. ''ತ್ರಿಲೋಕದ ಒಡೆಯ, ನೀನು ಬೇಡಬೇಕಾ? ನಿಂಗಿಲ್ವೆ ಜಾಗ'' ಅಂತ, ಹಾಲು ಹಾಸಿಗೆ ಎಲ್ಲಾ ಕೊಟ್ಟು, ಉಪಚಾರ ಮಾಡಿದಳು.

ಅವನೂ, ಅಂದ್ರೆ ಶ್ರೀಮನ್ನಾರಾಯಣ ದೇವಲೋಕದ ಸಂಜೀವಿನಿ ಅಂತ ಏನೋ ಬಾಯಿಗೆ ಹಾಕಿ ಆಶೀರ್ವಾದ ಮಾಡಿದನಂತೆ. ಬೆಳಗಾಗೆದ್ದು ನೋಡಿದಾಗ, ಶಂಖಚಕ್ರ ಗದಾಧಾರಿ ಇರ್ಲಿಲ್ಲ. ಬದಲು ವಾಮನ ಇದ್ದ!

''ಆ ಮುದುಕೀನ ಈಗ್ಲೆ, ಸಂದರ್ಶನ ಮಾಡ್ಬೇಕು! ಸೊಗಸಾದ ಕಥೆ ಸಿಗತ್ತೆ ನನ್ನ ಪೇಪರ್‌ಗೆ'' ಉತ್ಸಾಹದಿಂದ ನಾನು ಓಡಿದೆ.

ಇನ್ನಾ ಆ ಅಜ್ಜಿಯ ಹತ್ರ ಸರಿಯಾಗಿ ಕೂತಿಲ್ಲ, ಎಲ್ಲೋ ಇದ್ದ ರಿಸೆಪ್ಷನಿಸ್ಟ್ ಧಾವಿಸಿ ಬಂದು, ನನ್ನ ಕಣ್ಣಿಗೆ ಡ್ರಾಪ್ಸ್ ಹಾಕಿಬಿಟ್ಟಳು – ಎರಡು ಕಣ್ಣುಗಳಿಗೂ!

❑

# ಹೀರೋ ಮತ್ತು ಹೊಂಡ...

**- ಎಂ.ಕೆ. ಭಾಸ್ಕರ ರಾವ್**

**ಚ**ಲನಚಿತ್ರವನ್ನು ನಿರ್ದೇಶಕನ ಮಾಧ್ಯಮ ಎನ್ನುತ್ತಾರೆ. ಅಂಥವರನ್ನು, ವಾಣಿಜ್ಯಕ ಸಿನಿಮಾ ಪ್ರಪಂಚದ ವಾಸ್ತವ ಗೊತ್ತಿಲ್ಲದ ಅವಿವೇಕಿಗಳೆಂದು ಕರೆಯುವವರೂ ಇದ್ದಾರೆ. ನಿರ್ದೇಶಕನ ಪಾರಮ್ಯವನ್ನು ಹೇಳಲಾರಂಭಿಸಿದ ದಿವಸದಿಂದಲೂ ಹೀರೋ ಮತ್ತು ನಿರ್ದೇಶಕರ ನಡುವೆ ತಾನು ಶ್ರೇಷ್ಠ ತಾನೇ. ಶ್ರೇಷ್ಠ ಎಂಬ ನಿರಂತರ ಜಟಾಪಟಿ ನಡೆಯುತ್ತಲೇ ಇದೆ. ಈ ಮಧ್ಯೆ ಈ ಜಗಳದಿಂದ ರೋಸಿ ಹೋದವರಲ್ಲಿ ಕೆಲವರು ''ನಿರ್ದೇಶಕರಾದರೂ ಯಾಕೆ ಬೇಕು'' ಎಂದು ಕೇಳಿದ್ದೂ ಇದೆ. ಕನ್ನಡದಲ್ಲೂ ಈ ವಿಪರೀತ ಪದೇ ಪದೇ ಎಂಬಂತೆ ಪುನರಾವರ್ತನೆ ಆಗುತ್ತಿದೆ. ನಮ್ಮ ಕೆಲವು ಚಿತ್ರಗಳನ್ನು ನೋಡಿದರೆ ಇದಕ್ಕೂ ನಿರ್ದೇಶಕರು ಇದ್ದರೇ...!? ಎಂದೆನಿಸುವುದು ನಿಜ.

**ಸಿಗರೇಟ್ ಇಲ್ಲದಿದ್ದರೆ ಶೂಟಿಂಗೂ ಇಲ್ಲ ಎಂದು ಹೀರೋ ಅಪ್ಪಣೆ ಕೊಡಿಸಿಯೇ ಬಿಟ್ಟರು**

ಈ ವಿಚಾರವನ್ನು ಪಕ್ಕಕ್ಕೆ ಇಡೋಣ. ಪ್ರಸ್ತುತ ಹಾಡಿನ ಚಿತ್ರೀಕರಣ ಮತ್ತು ಹೀರೋ ಕಡೆ ಹೊರಳೋಣ. ಸಿನಿಮಾ ಒಳಹೊರಗು ಬಲ್ಲವರು ಹೇಳುತ್ತಿದ್ದ ಪ್ರಕಾರ ನಮ್ಮ ಕಥಾ ನಾಯಕ ಬೆರಳು ಮಾಡಿ ತೋರಿಸುವಂಥ ಕಿರಿಕಿರಿ ಹೀರೋ ಏನೂ ಅಲ್ಲ. ತುಂಬ ಜಂಟ್ಲ್‌ಮನ್ ರೀತಿ ವರ್ತಿಸುತ್ತಾ ಎಲ್ಲರಿಗೂ ಡಾರ್ಲಿಂಗ್ ಆಗಿದ್ದ ಚೆಲುವ. ಆದರೂ ಒಮ್ಮೊಮ್ಮೆ ಏನೇನೋ ಆಗಿಬಿಡುತ್ತದೆ. ಕೆಟ್ಟ ಮುಹೂರ್ತ ಎನ್ನುವುದು ಇದಕ್ಕೇ ಇರಬೇಕು.

ವಾಣಿಜ್ಯಕ ಚಿತ್ರಗಳಲ್ಲಿ ಕಣಗಾಲ್ ಪುಟ್ಟಣ್ಣರಂಥ ಕೈಬೆರಳೆಣಿಕೆಯಷ್ಟೇ ಇರುವ ನಿರ್ದೇಶಕರನ್ನು ಪಕ್ಕಕ್ಕೆ ಇಟ್ಟರೆ ಉಳಿದವರೆಲ್ಲರೂ ನಾಯಕ ನಟನ ಯಜಮಾನಿಕೆಯನ್ನು ಒಪ್ಪಿಕೊಂಡವರೇ. ನಿರ್ಮಾಪಕ, ನಿರ್ದೇಶಕರು ಅದನ್ನು ಒಪ್ಪಿಕೊಂಡಿದ್ದಾರೆಂದೇ ವರ್ಷಕ್ಕೆ 120-130 ಕನ್ನಡ ಸಿನಿಮಾ ಯಾವುದೇ ಅಡೆತಡೆಯೂ ಇಲ್ಲದೆ ನಿರ್ಮಾಣವಾಗುತ್ತಿದೆ ಎನ್ನುತ್ತದೆ ಸಿನಿಮಾ ಪ್ರಪಂಚ. ನಿರ್ದೇಶಕನ ಬೆನ್ನುಹುರಿ ಸಾಮರ್ಥ್ಯದ ಚರ್ಚೆ ಇಲ್ಲಿ ಅಪ್ರಸ್ತುತ. ಹೀರೋ ಬೇಕು-ಬೇಡಗಳನ್ನು ಆಧರಿಸಿ ಎಲ್ಲ ನಡೆಯುತ್ತದೆ. ಆತ ಸಮ್ಮತಿಯ ಗೋಣು ಆಡಿಸಿದ ನಂತರ ಎಲ್ಲವೂ ''ನಿರ್ದೇಶಕನದೇ ತೀರ್ಮಾನ''! ಅದರಲ್ಲಿ ಯಾವಾಗ ಮಾಧ್ಯಮದವರನ್ನು ಸೆಟ್‌ಗೆ ಕರೆಯಬೇಕು ಎನ್ನುವುದೂ ಸೇರಿರುತ್ತದೆ.

ಹೀರೋನ ಮೂಡನ್ನು ನೋಡಿ ಆತ ದಿಲ್ಲಗಿಯಾಗಿರುವುದನ್ನು ಖಚಿತಪಡಿಸಿಕೊಂಡು ನಿರ್ದೇಶಕ, ಈ ವಾರ ಮಾಧ್ಯಮದವರನ್ನು ಕರೆದರೆ ಹೇಗೆ ಎಂದು ಕೇಳುತ್ತಾನೆ. ಹೀರೋ ಒಪ್ಪಿರುವುದು ಅಥವಾ ಒಪ್ಪದಿರುವುದು ನಾಯಕನ ಕಿರುನೋಟದಲ್ಲೇ ನಿರ್ದೇಶಕನಿಗೆ ಅರ್ಥವಾಗುತ್ತದೆ. ಅನುಭವ ಎನ್ನುವುದು ಇದಕ್ಕೇ ತಾನೇ...? ''ಆಯ್ತು ಬಿಡಿ ಸಾರ್, ನಿಮ್ಮ ಇಚ್ಛೆಯಂತೆಯೇ ಆಗಲಿ'' ಎಂದು ಹೇಳಿ ನಾಳೆಯೋ ನಾಡಿದ್ದೋ ಹೀರೋನ ಮುಖದಲ್ಲಿ ಮೂಡಬಹುದಾದ ಮೂಡ್‌ಗೆ ಕಾಯುವ ತೀರ್ಮಾನದಲ್ಲಿ ಪಿಆರ್‌ಓಗೆ ಮೆಸೇಜ್ ಕಳಿಸುತ್ತಾನೆ.

ಇಷ್ಟು ಪ್ರಕ್ರಿಯೆ ನಡೆಯದೆ ಏಕಾಏಕಿ ಮಾಧ್ಯಮದವರು ಹಾಜರಾದರು ಎಂದಿಟ್ಟುಕೊಳ್ಳೋಣ. ಹಿಂಡನ್ನು ಕಂಡಾಕ್ಷಣದಲ್ಲೇ ಹೀರೋನ ಮೂಡು (ಬಹುತೇಕ ಸಂದರ್ಭಗಳಲ್ಲಿ) ಕೆಟ್ಟು ಹೋಗುತ್ತದೆ. ಇದೇ ಕಾರಣಕ್ಕಾಗಿ ಶೂಟಿಂಗ್ ರದ್ದಾದ ಪ್ರಕರಣಗಳೂ ಸಾಕಷ್ಟಿವೆ. ಹೀಗೆಲ್ಲ ಎಡವಟ್ಟು ಆಗಬಾರದು, ಯಾವುದೇ ಕಾರಣಕ್ಕೂ ಕಾಲ್‌ಶೀಟ್ ವ್ಯರ್ಥವಾಗ ಕೂಡದು ಎನ್ನುವುದು ಸಿನಿಮಾ ನಿರ್ಮಾಪಕ ವಲಯದ ಅಲಿಖಿತ ಸುಗ್ರೀವಾಜ್ಞೆ.

ಹೀರೋನ ಮೂಡಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳುವ ಕೆಲಸಕ್ಕೆ ಆದ್ಯತೆ ಇರುವುದರಿಂದ ನಿರ್ಮಾಪಕ, ನಿರ್ದೇಶಕರು ಅಗತ್ಯಕ್ಕಿಂತ ಹೆಚ್ಚು ಜಾಗರೂಕರಾಗಿರುತ್ತಾರೆ. ಹೀರೋನ ಮೂಡು ಯಾವುಯಾವುದೋ ಕಾರಣಕ್ಕೆ ಅಪ್‌ಸೆಟ್ ಆಗುತ್ತಿರುತ್ತದೆ. ಒಮ್ಮೆ ಪೂರ್ವಕ್ಕೆ ಮತ್ತೊಮ್ಮೆ ಪಶ್ಚಿಮಕ್ಕೆ ವಾಲುತ್ತಿರುತ್ತದೆ. ಅಂಥದೊಂದು ಹಳೆಯ ಅಂದರೆ ಸುಮಾರು 35-40 ವರ್ಷದ ಹಿಂದಿನ ಹೀರೋ ಕಥೆಯನ್ನು ಕೇಳೋಣ.

ಬೆಂಗಳೂರಿನ ಸ್ಟುಡಿಯೋ ಒಂದರಲ್ಲಿ ಹಾಡಿನ ಚಿತ್ರೀಕರಣ. ಹೀರೋ ಹೀರೋಯಿನ್ ಡ್ಯೂಯೆಟ್ ಸಾಂಗ್‌ನ ಚಿತ್ರೀಕರಣ ಎಂದಮೇಲೆ ಸೆಟ್ ಭರ್ಜರಿಯಾಗಿ, ಅದ್ದೂರಿಯಾಗಿ ಇರಲೇಬೇಕಲ್ಲವೇ...? ಇತ್ತು. ತಮಿಳಿನಲ್ಲಿ ಬಹಳ ಬಹಳ ಜನಪ್ರಿಯರಾಗಿದ್ದ ಕನ್ನಡಿಗ ಹೀರೋ ಅಪರೂಪಕ್ಕೆ ಕನ್ನಡ ಚಿತ್ರವೊಂದಕ್ಕೆ ಕಾಲ್‌ಶೀಟ್ ಕೊಟ್ಟಿದ್ದ ಸಂದರ್ಭ ಅದು. ಮೂರು ದಿವಸ ಸತತ ಬೆಳಗ್ಗೆ ಒಂಭತ್ತರಿಂದ ರಾತ್ರಿ ಒಂಭತ್ತರವರೆಗೆ ಕಾಲ್‌ಶೀಟ್. ಎಷ್ಟೆಂದರೂ ಜನಪ್ರಿಯ ಹೀರೋ. ಅವರ ಬೇಕು ಬೇಡಗಳನ್ನು ನೋಡಿಕೊಳ್ಳಲೆಂದೇ ನಿರ್ಮಾಪಕರು ಒಬ್ಬನನ್ನು ವಿಶೇಷವಾಗಿ ನೇಮಿಸಿದ್ದರು. ಆತನನ್ನು ಒಎಸ್‌ಡಿ (ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ) ಎಂದು ಕರೆಯೋಣ!

ಮೊದಲ ದಿವಸದ ಚಿತ್ರೀಕರಣ ಸರಾಗವಾಗಿ ನಡೆದುಹೋಯಿತು. ಚನ್ನೈನಿಂದ (ಆಗ ಮದ್ರಾಸು) ಬೆಳಗ್ಗೆ ಮೊದಲ ವಿಮಾನದಲ್ಲಿ ಬಂದಿಳಿದ ಹೀರೋ ಸೀದಾ ಸ್ಟುಡಿಯೋಕ್ಕೆ ಬಂದಿದ್ದರು. ಚಕಚಕ ಶೂಟಿಂಗೂ ನಡೆದು ರಾತ್ರಿ ಪ್ಯಾಕ್‌ಅಪ್ ಆಯಿತು. ನಿರ್ಮಾಪಕ, ನಿರ್ದೇಶಕರಿಗೆ ಖುಷಿಯೋ ಖುಷಿ. ಹೀರೋ ತನಗಾಗಿ ಕಾದಿರಿಸಿದ್ದ ಪಂಚತಾರಾ ಹೋಟೆಲಿನಲ್ಲಿ ವಿಶ್ರಾಂತಿಗೆ ಹೊರಳಿಕೊಂಡರು. ಮರು ದಿವಸ, ಯಾವುದೇ ಅಡೆತಡೆಯೂ ಇಲ್ಲದ ರೀತಿಯಲ್ಲಿ ಬೆಳಗಾಯಿತು, ಸಮಯಕ್ಕೆ ಸರಿಯಾಗಿ ಬಂದ ಲಿಮೋಸೀನ್ ಏರಿ ಹೀರೋ ಸರ್ ಸ್ಟುಡಿಯೋಕ್ಕೂ ಬಂದರು.

ನಮಸ್ಕಾರ, ಹಾಯ್-ಪಾಯ್ ಎಲ್ಲ ಮುಗಿದು ಮೇಕಪ್ಪೂ ಮುಗಿಯಿತು. ನಿರ್ದೇಶಕರು ಬಂದು ಸನ್ನಿವೇಶದ ಬಗ್ಗೆ ಚಿಕ್ಕಚೊಕ್ಕ ವಿವರಣೆ ಕೊಟ್ಟಾಯಿತು. ನೃತ್ಯದ ಸನ್ನಿವೇಶ. ನೃತ್ಯ ನಿರ್ದೇಶಕರಿಗೆ ಇರುವ ಕೆಲಸ ಜನರಲ್ ನಿರ್ದೇಶಕನಿಗೆ ಇರೋಲ್ಲ. ಚಿತ್ರೀಕರಣ ತಾಣಕ್ಕೆ ಅವರು ಬಂದರೂ ಆಯಿತು, ಬಾರದಿದ್ದರೂ ಆಯಿತು. ಆದರೂ ನಿರ್ದೇಶಕ ಬೆಳ್ಳಂ ಬೆಳಗ್ಗೆಯೇ ಬಂದು ಹೀರೋನ ಪಕ್ಕದಲ್ಲೇ ಕುಳಿತು ಅದೂ ಇದೂ ಮಾತನಾಡುವುದಕ್ಕೆ ಒಂದು ಒಳ ಕಾರಣ ಇರುತ್ತದೆ. ಹಿಂದಿನ ರಾತ್ರಿ ಹೀರೋ ಏರಿಸಿದ್ದೆಷ್ಟು ಎನ್ನುವುದರ ಬಿಲ್ ಮಾಹಿತಿ ಬೆಳಗ್ಗೆ ಹೊತ್ತಿಗೆ ನಿರ್ಮಾಪಕರಿಗೆ ಬಂದಿರುತ್ತದೆ.

ನಿರ್ದೇಶಕನಿಗೆ ಆ ಮಾಹಿತಿಯನ್ನು ನಿರ್ಮಾಪಕ ರವಾನಿಸಿರುತ್ತಾನೆ. ಅದರ ಆಧಾರದ ಮೇಲೆ ಹೀರೋನ ಹ್ಯಾಂಗೋವರ್ ಹೇಗಿದೆ, ಎಷ್ಟಿದೆ, ಚಿತ್ರೀಕರಣ ಹೇಗೆ ನಡೆಯಬಹುದು ಎಂದು ತಿಳಿಯುವ ಒಳ ಹಕೀಕತ್ತು ಈ ಮಾತುಕತೆ ಅಷ್ಟೆ.

ನಾಯಕ ಬಣ್ಣ ಬಳಿದುಕೊಂಡು ಬಣ್ಣ ಬಣ್ಣದ ವಸ್ತ್ರ ಧರಿಸಿ ಸಿದ್ಧರಾದರು. ನಾಯಕಿಯಂತೂ ಜಗಮಗ ಉಡುಪಿನಲ್ಲಿ ವೈನಾಗಿ ಕೂತು ಕರೆಯುವುದಕ್ಕೆ ಕಾದಿದ್ದರು. ಅವರ ಅಮ್ಮ ಹೊಸ ಚಿತ್ರದ ವಿಚಾರದಲ್ಲಿ ಮಗಳೊಂದಿಗೆ ಏನೋ ಗುಸುಗುಸು ನಡೆಸಿದ್ದರು. ಅತ್ತ ಸ್ಟುಡಿಯೋ ಅಂಗಳದಲ್ಲಿ ನೃತ್ಯ ನಿರ್ದೇಶಕ ಜೋಡಿ ನಾಯಕಿ-ನಾಯಕ ಕುಣಿಯಬೇಕಾದ ವಿವಿಧ ಭಂಗಿಯನ್ನು ಪದೇ ಪದೇ ಎಂಬಂತೆ ಬೇಜಾರಿಲ್ಲದೆ ತಕತಕ ಕುಣಿದು ತೋರಿಸುತ್ತಿದ್ದರು. ನಾಯಕ ಜೋಡಿಯ ಡ್ಯಾನ್ಸ್‌ನ ಒಂದು ಟೇಕ್ ಒಕೆ ಆಯಿತು. ನಿರ್ದೇಶಕ ಚಪ್ಪಾಳೆ ತಟ್ಟಿದ. ಲೈಟುಗಳನ್ನೆಲ್ಲ ಹಿಂದೆಮುಂದೆ ಸರಿಸುವ, ಪೊಸಿಶಿನ್ ಬದಲಿಸುವ; ಕ್ಯಾಮೆರಾವನ್ನು ಬೇರೆ ಕೋನದಲ್ಲಿ ನಿಲ್ಲಿಸುವ ಕೆಲಸ ಶುರುವಾಯಿತು.

ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎಂದು ಅಲ್ಲಿದ್ದವರೆಲ್ಲರೂ ಸಂಭ್ರಮಿಸುತ್ತಿದ್ದಾಗಲೇ ಎಡವಟ್ಟೊಂದು ಘಟಿಸಿಹೋಯಿತು. ಕ್ಯಾಮೆರಾ ಎದುರಿಂದ ಹೊರಕ್ಕೆ ಬಂದಾಕ್ಷಣದಿಂದ ಪುಸುಪುಸು ಎಂದು ಒಂದಾದ ನಂತರ ಮತ್ತೊಂದರಂತೆ ಸಿಗರೆಟ್ ಸೇದುವ ಚಟ ನಾಯಕನದು. ದುರ್ದೈವ, ಪ್ಯಾಕು ಖಾಲಿಯಾಗಿ ಹೋಗಿತ್ತು. ನಟನ ರೂಮಿನಲ್ಲಿ, ಕಾರಿನಲ್ಲಿ ಬಂಡಲು ಬಂಡಲು ಸಿಗರೇಟ್ ಇಡಬೇಕೆನ್ನುವುದು ಕಾಲ್‌ಶೀಟ್ ಕೊಡುವ ಮುನ್ನ ಆ ನಟನ ಕಾರ್ಯದರ್ಶಿ ಒಡ್ಡುವ ಷರತ್ತುಗಳಲ್ಲಿ ಒಂದು. ಸಿಗರೇಟು ಖಾಲಿಯಾಗಿರುವುದನ್ನು ಒಎಸ್‌ಡಿ ಗಮನಿಸಿರಲಿಲ್ಲ. ಪ್ರೊಡಕ್ಷನ್ ಮ್ಯಾನೇಜರ್ ನಿಗಾ ಕೊಟ್ಟಿರಲಿಲ್ಲ. ಹೀರೋ ಸೇದುತ್ತಿದ್ದುದು ಆ ಕಾಲದ ಬಹುತುಟ್ಟಿ ವಿದೇಶೀ ಬ್ರ್ಯಾಂಡ್ ಟ್ರಿಬಲ್ ಫೈವ್ (555). ಸ್ಟುಡಿಯೊ ಸುತ್ತಮುತ್ತಲ ಪ್ರದೇಶದಲ್ಲಿ ಅಷ್ಟೆಲ್ಲ ತುಟ್ಟಿ ಸಿಗರೇಟಿಗೆ ಗಿರಾಕಿಗಳು ಇರಲಿಲ್ಲ ಹಾಗಾಗಿ ಯಾವ ಅಂಗಡಿಯಲ್ಲೂ ಅದು ಸಿಗಲಿಲ್ಲ.

ನಾಯಕನ ಮೂಡು ಗಾಳಿಯಲ್ಲಿ ಹಾರಿ ಹೋಗಿತ್ತು. ''ಸಿಗರೇಟ್ ಬೇಕ್ರೀ, ಅದಿಲ್ಲದೆ ಸೀನಲ್ಲಿ ಕಾನ್‌ಸಂಟ್ರೇಟ್ ಮಾಡಾಕ್ಕೆ ಆಗೋಲ್ಲರೀ'' ಎಂದು ಹೀರೋ ಗೊಗ್ಗರು ಧ್ವನಿಯಲ್ಲಿ ಖುಲ್ಲಂಖುಲ್ಲ ಕಡ್ಡಿ ಮುರಿದಂತೆ ಹೇಳಿಬಿಟ್ಟರು. ಪ್ರೊಡಕ್ಷನ್ ಮ್ಯಾನೇಜರ್ ಒಂದು ಕಡೆ, ಒಎಸ್‌ಡಿ ಇನ್ನೊಂದು ಕಡೆ ಸೀತಾಮಾತೆಯನ್ನು ಹುಡುಕಿ ಕಪಿ ಸೇನೆ ಹೊರಟ ರೀತಿಯಲ್ಲಿ ದೌಡಾಯಿಸಿದರು.

ಇತ್ತ ಸ್ಟುಡಿಯೋದಲ್ಲಿ ನಾಯಕ ಕುರ್ಚಿ ಹಿಡಿದು ಸ್ಟ್ರೈಕ್ ಮಾಡುವವರಂತೆ ಕುಳಿತುಬಿಟ್ಟರು. ಸಿಗರೇಟಿಲ್ಲದೆ ತಾಸು ಕಳೆಯುವ ಹೊತ್ತಿಗೆ ಅವರ ತಲೆ ಚಿಟ್ಟು ಹಿಡಿದು ಹೋಯಿತು. ನೃತ್ಯದ ಆ ಸೀನಿಗಿಂತ ಈ ಸೀನೇ ಪತ್ರಕರ್ತರಿಗೆ ಹೆಚ್ಚು ರೋಚಕ ಎನಿಸಿತು. ಹೀರೋನನ್ನು ಮಾತನಾಡಿಸಲು ಮಾಡಿದ ಯತ್ನ ಕೈಗೂಡಲಿಲ್ಲ. ನಿರ್ಮಾಪಕ, ನಿರ್ದೇಶಕರು ಜಾಗೃತರಾದರು. ಸಿಗರೇಟು ಬಂದ ಕೂಡಲೇ ಕರೆಸಿಕೊಳ್ಳುವುದಾಗಿ ಹೀರೋನನ್ನು ಹೋಟೆಲಿಗೆ ಸಾಗಹಾಕಿದರು. ಹೀರೋ ಪತ್ರಕರ್ತರತ್ತ ತಿರುಗಿಯೂ

ನೋಡದೆ ಬುಸಬುಸ ಎನ್ನುತ್ತ ಲಿಮೋಸೀನ್ ಏರಿದರು. ನಾಯಕಿ ಅಮ್ಮನೊಂದಿಗೆ ಕಾರು ಹತ್ತಿ ಬೈಬೈ ಎಂದರು.

ಹೀರೋ ಅತ್ತ ಹೋದ ಬಳಿಕ ಸಿಗರೇಟ್ ಬಂಡಲು ಬಂತು. ಅದನ್ನು ಸ್ವತಃ ಹೊತ್ತ ನಿರ್ಮಾಪಕ, ನಿರ್ದೇಶಕ ಹೋಟೆಲಿಗೆ ಹೀರೋನನ್ನು ನೋಡಲು, ಮನವೊಲಿಸಿ ಕರೆತರಲು ಹೊರಟರು. ಅಲ್ಲಿ ಹೋಟೆಲ್ ರೂಮಿನಲ್ಲಿ ನೋಡಿದರೆ ಹೀರೋನ ಒಂದು ಕೈಯಲ್ಲಿ ಸ್ಕಾಚ್, ಇನ್ನೊಂದರಲ್ಲಿ ಸಿಗರೇಟು ಇತ್ತು. ಆ ಪಂಚತಾರಾ ಹೋಟೆಲಿನಲ್ಲೇ ಸಿಗುತ್ತಿದ್ದ 555 ಸಿಗರೇಟಿನ ಒಂದು ಪ್ಯಾಕು ಹೀರೋ ಮಗ್ಗುಲಲ್ಲಿ ಬಿದ್ದಿತ್ತು.

ನಿರ್ಮಾಪಕ, ನಿರ್ದೇಶಕರು ನಟನೊಂದಿಗೆ ಮಾತನಾಡುವುದಕ್ಕೆ ಮೊದಲೇ ಹೀರೋ ''ಇವತ್ತು ಶೂಟಿಂಗ್ ಬ್ಯಾಡ್ರೀ... ಚನ್ನೈನಿಂದ ತಮಿಳು ನಿರ್ಮಾಪಕ, ನಿರ್ದೇಶಕರು ಬಂದಿದ್ದಾರೆ. ಒಂದು ಕಾಲ್‌ಶೀಟ್ ಬಗ್ಗೆ ಮಾತಾಡೋದಿದೆ'' ಎಂದು ಒದರಿದರು. ಕನ್ನಡದ ಮಿಕಗಳಿಗೆ ಮೂಡ್ ಹಾಳಾಗಿದ್ದರ ಗುಟ್ಟು ಗೊತ್ತಾಯಿತು. ಏನೂ ಮಾಡುವಂತಿರಲಿಲ್ಲ. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹ್ಯಾಪುಮೋರೆಯೊಂದಿಗೆ ಹೊರಟರು.

❑

